ಸಂಪುಟ: 06 ಸಂಚಿಕೆ: 203 ಪುಟಗಳು: 08 ಗುರುವಾರ 08 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

**ಮುಂಜಾನೆ ಮಾತು**

ಬದುಕು ನಿಧಾನವಾಗಿ ಪಾಠ ಕಲಿಸುತ್ತೆ. ನಿನ್ನ ತನವನ್ನು ಅಡವಿಟ್ಟು ಯಾರನ್ನು ನೀನು ಪ್ರೀತಿಸುವ ಅಗತ್ಯವಿಲ್ಲ. ಏಕೆಂದರೆ, ಇಲ್ಲಿ ಯಾರು ಯಾರಿಗೂ ಅನಿವಾರ್ಯರಲ್ಲ.!!

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ರಾಜ್ಯದಲ್ಲಿ ಭೀಕರ ಬರಗಾಲವಿದ್ದರೂ ರಾಜ್ಯ ಸರ್ಕಾರ ನಿರ್ಲಕ್ಷ್ಯ ಮಾಡಿದೆ: ಬೊಮ್ಮಾಯಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಭೀಕರ ಬರಗಾಲವಿದ್ದರೂ ರಾಜ್ಯ ಸರ್ಕಾರ ಸಂಪೂರ್ಣ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದ್ದಾರೆ. ಮಹಾಸಭಾ ಗಣಪತಿಯ ವಿಸರ್ಜನಾ ಮೆರವಣಿಗೆ ನಂತರ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ ಎರಡು ದಶಕಗಳಲ್ಲಿ ಅತ್ಯಂತ ತೀವ್ರವಾದ ಬರಗಾಲ ಆವರಿಸಿದ್ದು, ಹಸಿಬರ ಹಾಗೂ ಒಣಬರ ಎರಡೂ ಪರಿಸ್ಥಿತಿಗಳು ಎದುರಾಗಿವೆ. ಬರವನ್ನು ನಿರ್ಲಕ್ಷ್ಯ ಮಾಡಿದೆ. ಮುಖ್ಯಮಂತ್ರಿಗಳು ಕೇವಲ ನಾಮಕಾವಸ್ಥೆಗೆ ಒಂದೆರಡು ಕಡೆಗಳಲ್ಲಿ ಕುಳಿತುಕೊಂಡು ವಿಡಿಯೋ ಕಾನ್ಫರೆನ್ಸ್ ಮಾಡಿದರೆ ಬರವನ್ನು ನಿರ್ವಹಿಸಲು ಸಾಧ್ಯವಿಲ್ಲ. ಮುಂಗಾರು ಮಳೆಯನ್ನು ನಂಬಿ ಬಿತ್ತಿದ ಬೀಜ, ಗೊಬ್ಬರ ಎಲ್ಲವೂ ನಷ್ಟವಾಗಿದ್ದು, ಧನಕರುಗಳಿಗೆ ಮೇವಿನ ತೀವ್ರ ಕೊರತೆಯುಂಟಾಗಿದೆ. ಅಕ್ಟೋಬರ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲೇ ಈ ಪರಿಸ್ಥಿತಿ ಇದ್ದರೆ, ಜನವರಿ–ಫೆಬ್ರವರಿಯಲ್ಲಿ ಕುಡಿಯುವ ನೀರಿಗೂ ತೀವ್ರ ಸಮಸ್ಯೆ ಎದುರಾಗಲಿದೆ ಎಂದು ತಿಳಿಸಿದ್ದಾರೆ. ಇಂತಹ ಭೀಕರ ಬರಗಾಲವಿದ್ದರೂ ರಾಜ್ಯ ಸರ್ಕಾರ ಸಂಪೂರ್ಣ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದು, ಬರವನ್ನು ನಿರ್ಲಕ್ಷ್ಯ ಮಾಡಿದೆ. ಮುಖ್ಯಮಂತ್ರಿಗಳು ಕೇವಲ ನಾಮಕಾವಸ್ಥೆಗೆ ಒಂದೆರಡು ಕಡೆಗಳಲ್ಲಿ ಕುಳಿತುಕೊಂಡು ವಿಡಿಯೋ ಕಾನ್ಫರೆನ್ಸ್ ಮಾಡಿದರೆ ಬರವನ್ನು ನಿರ್ವಹಿಸಲು ಸಾಧ್ಯವಿಲ್ಲ.

## ಆರ್ ಎಸ್‌ಎಸ್ ವಿರುದ್ಧ ಅವಹೇಳನಕಾರಿ ಪೋಸ್ಟ್: ಪ್ರಿಯಾಂಕ್ ಖರ್ಗೆಗೆ ತಾತ್ಕಾಲಿಕ ರಿಲೀಫ್

• ಉದಯವಾಹಿನಿ, ಬೆಂಗಳೂರು

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದ ವಿರುದ್ಧ ಅಪಮಾನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ವಿರುದ್ಧದ ಖಾಸಗಿ ದೂರಿಗೆ ಕೋರ್ಟ್, ಮಧ್ಯಂತರ ತಡೆಯಾಜ್ಞೆ ನೀಡಿದೆ. ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ವಿಚಾರಣೆ ಆದೇಶಕ್ಕೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಬುಧವಾರ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ. ಇದರಿಂದ ಪ್ರಿಯಾಂಕ್ ಖರ್ಗೆ ಹಾಗೂ ಮೊಹಮ್ಮದ್ ನಲಪಾಡ್‌ಗೆ ತಾತ್ಕಾಲಿಕ ರಿಲೀಫ್ ಸಿಕ್ಕಂತಾಗಿದೆ. ಪ್ರಕರಣ ಸಂಬಂಧ ಬೆಂಗಳೂರು ಸಿದ್ದಾಪುರದ ನಿವಾಸಿ ಎ. ತೇಜಸ್ ಎಂಬುವರು ದಾಖಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯ, ಪ್ರಕರಣ ಸಂಬಂಧ ಪ್ರಿಯಾಂಕ್ ಖರ್ಗೆ ಮತ್ತು ಹ್ಯಾರಿಸ್ ನಲಪಾಡ್ ಅವರ ವಿರುದ್ಧ ಕಾಗ್ನಿಜೆನ್ಸ್ ತೆಗೆದುಕೊಂಡು ಸಮನ್ಸ್ ಜಾರಿ ಮಾಡಿತ್ತು. ಇದನ್ನು ಪ್ರಶ್ನಿಸಿ ಪ್ರಿಯಾಂಕ್ ಖರ್ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಕೆ.ಶಿವಪ್ರಸಾದ್ ಪ್ರಕರಣಕ್ಕೆ ಅ.30ರವರೆಗೆ ತಡೆ ನೀಡಿ ದೂರುದಾರ ತೇಜಸ್ ನೋಟಿಸ್ ಜಾರಿ ಮಾಡಿದ್ದಾರೆ. ಆರ್‌ಎಸ್‌ಎಸ್ ಸಂಘಟನೆಯ ಮೇಲೆ ನಿಷೇಧ ಹೇರಬೇಕು, ಸರ್ಕಾರಿ ಶಾಲೆ, ಸರ್ಕಾರಿ ಸ್ಥಳಗಳು, ಮೈದಾನಗಳಲ್ಲಿ ಈ ಸಂಘಕ್ಕೆ ಯಾವುದೇ ರೀತಿಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಈ ಸಂಘಟನೆಯಿಂದ ಸಮಾಜದಲ್ಲಿ ಭಯದ ವಾತಾವರಣ ಉಂಟುಮಾಡುತ್ತಿದೆ.

## ರಾಜ್ಯದಲ್ಲಿ ಇನ್ಮುಂದೆ ಹಾಫ್ ಹೆಲ್ಮೆಟ್ ಬ್ಯಾನ್




• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಇನ್ಮುಂದೆ ಹಾಫ್ ಹೆಲ್ಮೆಟ್ ಬಳಕೆ ಸಂಪೂರ್ಣವಾಗಿ ಬ್ಯಾನ್ ಮಾಡಿ ಸಾರಿಗೆ ಇಲಾಖೆ ಆದೇಶ ಹೊರಡಿಸಿದೆ. ದ್ವಿಚಕ್ರ ವಾಹನ ಸವಾರರು ಸುರಕ್ಷಿತವಲ್ಲದ ಹಾಫ್ ಹೆಲ್ಮೆಟ್ ಬಳಸುವಂತಿಲ್ಲ. ಬಿಐಎಸ್ ಅಥವಾ ಐಎಸ್‌ಐ ಗುಣಮಟ್ಟದ ಮಾನದಂಡಗಳನ್ನು ಪಾಲಿಸುವ ಹೆಲ್ಮೆಟ್‌ಗಳನ್ನು ಮಾತ್ರ ಬಳಸಬೇಕು. ಒಂದು ವೇಳೆ ಹಾಫ್ ಹೆಲ್ಮೆಟ್ ಬಳಸಿ, ನಿಯಮ ಉಲ್ಲಂಘಿಸಿದ್ರೆ ದಂಡ ವಿಧಿಸುವುದಾಗಿ ಇಲಾಖೆ ಎಚ್ಚರಿಕೆ ನೀಡಿದೆ.

## ವಾರಾಂತ್ಯ, ದಸರಾ ಹಿನ್ನಲೆ ಬೆಂಗಳೂರಿನಿಂದ ಬೀದರ್‌ಗೆ ವಿಶೇಷ ರೈಲು

• ಉದಯವಾಹಿನಿ, ಬೆಂಗಳೂರು

ವಾರಾಂತ್ಯ ಹಾಗೂ ದಸರಾ ಹಬ್ಬದ ಸಂದರ್ಭದಲ್ಲಿ ಊರುಗಳಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯ ಹಿನ್ನಲೆಯಲ್ಲಿ ಜನರ ಅನುಕೂಲ ಮತ್ತು ಸುಗಮ ಪ್ರಯಾಣಕ್ಕಾಗಿ ನೈಋತ್ಯ ರೈಲ್ವೆ ಬೆಂಗಳೂರು–ಬೀದರ್ ಮಾರ್ಗಗಳಲ್ಲಿ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನು ಘೋಷಿಸಿದೆ. ಬೆಂಗಳೂರು ಕಂಟೋನ್ಮೆಂಟ್–ಬೀದರ್ ಮಾರ್ಗದಲ್ಲಿ ಈ ವಿಶೇಷ ರೈಲು ಸಂಚಾರ ನಡೆಸಲಿದ್ದು, ಈ ರೂಟ್‌ನಲ್ಲಿ ಹೆಚ್ಚುವರಿ ಬೇಡಿಕೆ ಹಿನ್ನೆಲೆ ಎರಡು ಟ್ರಿಪ್ ಓಡಾಟ ನಡೆಸಲಿದೆ. ರೈಲು ಸಂಖ್ಯೆ 06589 ಬೆಂಗಳೂರು ಕಂಟೋನ್ಮೆಂಟ್–ಬೀದರ್ ಎಕ್ಸ್‌ಪ್ರೆಸ್ ವಿಶೇಷ ರೈಲು ಅಕ್ಟೋಬರ್ 9 ಮತ್ತು 16ರಂದು ರಾತ್ರಿ 11 ಗಂಟೆಗೆ ಬೆಂಗಳೂರು ಕಂಟೋನ್ಮೆಂಟ್‌ನಿಂದ ಹೊರಟು, ಮರುದಿನ ಮಧ್ಯಾಹ್ನ 2.15ಕ್ಕೆ ಬೀದರ್ ತಲುಪಲಿದೆ. ಹಿಂತಿರುಗುವ ಮಾರ್ಗದಲ್ಲಿ ರೈಲು ಸಂಖ್ಯೆ 06590 17ರಂದು ಸಂಜೆ 4 ಗಂಟೆಗೆ ಬೀದರ್‌ನಿಂದ ಹೊರಟು, ಮರುದಿನ ಬೆಳಗ್ಗೆ 9.45ಕ್ಕೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ.

ದಿನದ ಆರಂಭದಲ್ಲಿ ಶ್ರೀ ವಿನಾಯಕ ದೇವಸ್ಥಾನದಲ್ಲಿ ದೇಶ ಮತ್ತು ದೇಶದ ಜನರಿಗಾಗಿ ಪ್ರಾರ್ಥನೆ ಸಲ್ಲಿಸಿದ್ದಾಗಿ ಮೋದಿ ಹೇಳಿದರು. ಇನ್ನಷ್ಟು ಶಕ್ತಿಯಿಂದ ದೇಶಕ್ಕೆ ಸೇವೆ ಸಲ್ಲಿಸಲು ಅಗತ್ಯವಾದ ಸಾಮರ್ಥ್ಯವನ್ನು ನೀಡುವಂತೆ ದೇವರಲ್ಲಿ ಪ್ರಾರ್ಥಿಸಿರುವುದಾಗಿ ತಿಳಿಸಿದರು. ಮುಂದಿನ ಗುರಿಗಳ ಕುರಿತು ಮಾತನಾಡಿದ ಮೋದಿ, 2047ರ ವೇಳೆಗೆ ವಿಕಸಿತ ಭಾರತ, ಆತ್ಮನಿರ್ಭರ ಭಾರತ, ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಮಾಡುವುದು, ಒಲಿಂಪಿಕ್ಸ್ ಆಯೋಜಿಸುವುದು ಹಾಗೂ ಮಾನವ ಸಹಿತ ಬಾಹ್ಯಾಕಾಶ ಯಾನ ಕ್ಷೇತ್ರಕ್ಕೆ ಪ್ರವೇಶಿಸುವ ಗುರಿಗಳನ್ನು ಪ್ರಸ್ತಾಪಿಸಿದರು. ಈ ಶಕ್ತಿ ಮತ್ತು ಆತ್ಮವಿಶ್ವಾಸ ಅದ್ಭುತವಾಗಿದೆ ಎಂದು ಹೇಳಿದ ಅವರು, ಭಾರತವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ಹೊಸ ಸಂಕಲ್ಪದೊಂದಿಗೆ ಮುನ್ನಡೆಯುವಂತೆ ಕರೆ ನೀಡಿದರು. ಕೆಂಪುಕೋಟೆಯಿಂದ ತಾವು ಈ ಹಿಂದೆ ಮಾತನಾಡುವಾಗ ಸಾಮೂಹಿಕ ಪ್ರಯತ್ನದ ಶಕ್ತಿಯ ಬಗ್ಗೆ ಪ್ರಸ್ತಾಪಿಸಿದ್ದನ್ನು ಮೋದಿ ಸ್ಮರಿಸಿದರು. ''ನಾವು ಇದನ್ನು ಸಾಧಿಸುತ್ತೇವೆ'' ಎಂದು ಹೇಳುವ ಮೂಲಕ ರಾಷ್ಟ್ರೀಯ ಸಂಕಲ್ಪಕ್ಕೆ ಮತ್ತೊಮ್ಮೆ ಕರೆ ನೀಡಿದರು. ಗುಜರಾತ್ ಮುಖ್ಯಮಂತ್ರಿ, ಪ್ರಧಾನಿಯಾಗಿ ನರೇಂದ್ರ ಮೋದಿ ಅವರು 25 ವರ್ಷ ಪೂರ್ಣಗೊಳಿಸಿದ್ದಾರೆ. 2002ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಎದುರಾದ ಗಲಭೆಯ ನೆರಳಿನಿಂದ ಆರಂಭವಾದ ಅವರ ರಾಜಕೀಯ ಪಯಣವು 2014ರಲ್ಲಿ ಮೊದಲ ಬಾರಿಗೆ ದೇಶದ ಪ್ರಧಾನಮಂತ್ರಿಯಾದರು. ಮೋದಿ ತಮ್ಮ ಅಧಿಕಾರದ ಅವಧಿಯಲ್ಲಿ ಹಲವು ಮಹತ್ತರ ನಿರ್ಧಾರಗಳನ್ನೂ ತೆಗೆದುಕೊಂಡರು.

# 25th ಮೋದಿ ಸಾರ್ವಜನಿಕ ಸೇವೆಗೆ ಸಂಭ್ರಮ!

ಸುದೀರ್ಘ 25 ವರ್ಷಗಳ ಸಾರ್ವಜನಿಕ ಜೀವನದಲ್ಲಿ ಜನಸೇವೆಯನ್ನು ಮಾಡುವಲ್ಲಿ ಜನರು ಪ್ರಧಾನಿ ಮೋದಿಗೆ ತೋರಿದ ನಂಬಿಕೆ ಮತ್ತು ಬೆಂಬಲಕ್ಕೆ ಕೃತಜ್ಞತೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಕುರಿತು ಮಾತನಾಡುತ್ತಾ, ಇಂದು, ನಾನು 25 ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿದ್ದೇನೆ. ಇದು ಜನರ ನಿರಂತರ ಆಶೀರ್ವಾದ ಮತ್ತು ಬೆಂಬಲದ ಫಲಿತಾಂಶವಾಗಿದೆ. ನಾನು ಅಕ್ಟೋಬರ್ 7, 2001 ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ, ಈ ಮೈಲಿಗಲ್ಲು ತಲುಪುತ್ತೇನೆ ಎಂದು ನಾನು ಎಂದಿಗೂ ಭಾವಿಸಿರಲಿಲ್ಲ. ನಾನು ಹಿಂತಿರುಗಿ ನೋಡಿದಾಗ ನನಗೆ ಕೃತಜ್ಞತೆಯ ಭಾವನೆ ಮಾತ್ರ ಬರುತ್ತದೆ. ನನಗೆ ಹಲವು ವಿಚಾರಗಳನ್ನು ಕಲಿಸಿದ ಜನ ಹಾಗೂ ಘಟನೆಗಳಿಗೆ ನಾನು ಕೃತಜ್ಞನಾಗಿದ್ದೇನೆ ಎಂದು ತಿಳಿಸಿದ್ದಾರೆ. ಮುಂದುವರೆದು, ತಮ್ಮ 25 ವರ್ಷಗಳ ಸೇವೆಯಲ್ಲಿ ತಾವು ಕಲಿತ ಪಾಠಗಳ ಕುರಿತು ಉಲ್ಲೇಖಿಸುತ್ತಾ, ನನಗೆ ಗೆಲುವು ತಂದಕೊಟ್ಟವರು ವಿನಮ್ರತೆ ಕಲಿಸಿದರೆ, ನನ್ನನ್ನು ಬೀಳುವಂತೆ ಮಾಡಿದವರು ನನಗೆ ಎದ್ದು ನಿಲ್ಲುವುದು ಹೇಗೆ ಎಂಬುದನ್ನು ಕಲಿಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಹಿತೈಷಿಗಳು ನನ್ನನ್ನು ಪ್ರೋತ್ಸಾಹಿಸಿದರೆ, ನನ್ನ ವಿಮರ್ಶಕರು ನನ್ನನ್ನು ನಾನು ಇನ್ನಷ್ಟು ಆಳವಾಗಿ ಅಧ್ಯಯನ ಮಾಡಲು ನೆರವಾಗಿದ್ದಾರೆ. ನನ್ನನ್ನು ಬೆಂಬಲಿಸಿದವರು ನನಗೆ ನಂಬಿಕೆ ತೋರಿದರೆ, ನನ್ನ ವಿರೋಧಿಗಳು ನನಗೆ ಪ್ರಜಾಪ್ರಭುತ್ವದ ಶಕ್ತಿ ಎಷ್ಟು ಅಪಾರವಾಗಿದೆ ಎಂದು ಅರ್ಥಮಾಡಿಸಿದ್ದಾರೆ.

**2047ರ ವೇಳೆಗೆ ವಿಕಸಿತ ಭಾರತ ಪಣ**



**ಪ್ರಧಾನಿ ಮೋದಿ ಮಾತು** **ಹೊಸ ದಾಖಲೆ** **ಪ್ರಜಾಪ್ರಭುತ್ವದ ಶಕ್ತಿ**

### ನಾನು ಜೀವನಪೂರ್ತಿ ವಿದ್ಯಾರ್ಥಿ

ತಾವು ಜೀವನಪೂರ್ತಿ ವಿದ್ಯಾರ್ಥಿಯಾಗಿಯೇ ಉಳಿದಿದ್ದೇನೆ ಎಂದು ಹೇಳಿದ ಮೋದಿ, ವಡನಗರದ ತಮ್ಮ ಶಾಲಾ ಶಿಕ್ಷಕರು ಕಲಿಯುವ ಉತ್ಸುಕತೆಯ ಮಹತ್ವವನ್ನು ಕಲಿಸಿದ್ದನ್ನು ಸ್ಮರಿಸಿದರು. ದೇಶಕ್ಕೆ ಹೆಚ್ಚಿನ ಕೊಡುಗೆ ನೀಡಲು ಪ್ರತಿದಿನವೂ ಹೊಸದನ್ನು ಕಲಿಯಲು ಪ್ರಯತ್ನಿಸುತ್ತಿರುವುದಾಗಿ ಅವರು ಹೇಳಿದರು. ತಮ್ಮನ್ನು ಬೆಂಬಲಿಸಿದವರು ವಿಶ್ವಾಸದ ಶಕ್ತಿಯನ್ನು ಕಲಿಸಿದರೆ, ಟೀಕಿಸಿದವರು ಆತ್ಮಾವಲೋಕನದ ಶಕ್ತಿಯನ್ನು ಕಲಿಸಿದ್ದಾರೆ ಎಂದು ಮೋದಿ ಹೇಳಿದರು. ನನ್ನೊಂದಿಗೆ ನಿಂತವರು ವಿಶ್ವಾಸದ ಶಕ್ತಿಯನ್ನು ತೋರಿಸಿದರು. ನನ್ನನ್ನು ವಿರೋಧಿಸಿದವರು ಪ್ರಜಾಪ್ರಭುತ್ವದ ಶಕ್ತಿಯನ್ನು ಕಲಿಸಿದರು ಎಂದು ಹೇಳಿದರು. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ವಿಶ್ವಾಸವಿಟ್ಟಿರುವ ಬಿಜೆಪಿ, ಎನ್‌ಡಿಎ ಹಾಗೂ ರಾಜಕೀಯ ಸಹೋದ್ಯೋಗಿಗಳಿಗೂ ಮೋದಿ ಕೃತಜ್ಞತೆ ಸಲ್ಲಿಸಿದರು. ತಾವು ರಾಜ್ಯ ವಿಧಾನಸಭೆಗಳು ಹಾಗೂ ಲೋಕಸಭೆಗೆ ಸ್ಪರ್ಧಿಸಿದ ಚುನಾವಣೆಗಳನ್ನು ಉಲ್ಲೇಖಿಸಿದ ಮೋದಿ, ಜನರು ನಿರಂತರವಾಗಿ ತಮ್ಮನ್ನು ಸೇವೆ ಮಾಡಲು ಆಯ್ಕೆ ಮಾಡಿದ್ದಾರೆ ಎಂದು ಹೇಳಿದರು. ಇದೇ ವೇಳೆ ಭಾರತದ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಗೌರವ ಸಲ್ಲಿಸಿದರು. ಪ್ರಧಾನಿ ಮೋದಿ ಅವರನ್ನು ನಮ್ಮ ಕಾಲದ ಅವತಾರ ಎಂದು ಬಣ್ಣಿಸಿದ ಟೋಬ್ಗೈ, ಮೋದಿಯವರು ಭಾರತೀಯರಲ್ಲಿ ತಮ್ಮ ಸಾಮರ್ಥ್ಯ ಹಾಗೂ ದೇಶದ ಮೇಲಿನ ನಂಬಿಕೆಯನ್ನು ಜಾಗೃತಗೊಳಿಸಿದ್ದಾರೆ. ಅವರು ಪ್ರಬುದ್ಧ ಆಡಳಿತಗಾರ ವಿಷ್ಣುವಿನ ಅವತಾರ ಕಲ್ಕಿ ಎಂದು ಶ್ಲಾಘಿಸಿದರು.

**ಭಾರತ ವಿಕಸಿತ ರಾಷ್ಟ್ರವಾಗಲಿದೆ**

**ಜನರೇ ನನ್ನ ಶಕ್ತಿ**

### ಭಾರತ ವಿಕಸಿತ ರಾಷ್ಟ್ರವಾಗಲಿದೆ ಎಂಬ ಸಂಕಲ್ಪ

ಸಾರ್ವಜನಿಕ ಜೀವನದ 25 ವರ್ಷಗಳ ಪೂರೈಸಿದ ನಡುವೆ ದೆಹಲಿಯಲ್ಲಿ ಪ್ರಧಾನಿ ಮೋದಿ ಇಂದು ದೆಹಲಿಯಲ್ಲಿ ನಡೆದ 'ವಿಕಸಿತ ಭಾರತ ಸಂಕಲ್ಪ ಸಭೆಯನ್ನುದ್ದೇಶಿಸಿ ಮಾತನಾಡಿದ್ದು, 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಮತ್ತು ಸ್ವಾವಲಂಬಿ ಭಾರತವನ್ನು ನಿರ್ಮಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದಾರೆ.

ಈ ಕುರಿತು 2047 ರ ವೇಳೆಗೆ ಭಾರತವನ್ನು ವಿಕಸಿತ ಮಾಡುತ್ತೇವೆ, ನಾವು ಅದನ್ನು ಮಾಡುತ್ತೇವೆ. ಆತ್ಮನಿರ್ಭರ ಭಾರತ.. ಈಗಾಗಲೇ ಜಾಗತಿಕ ಉತ್ಪಾದನಾ ಕೇಂದ್ರ, ಒಲಿಂಪಿಕ್ಸ್‌ನ ಆತಿಥ್ಯ, ಬಾಹ್ಯಾಕಾಶಕ್ಕೆ ಹೆಜ್ಜೆ ಹಾಕುತ್ತಿದ್ದೇವೆ ಈ ಶಕ್ತಿ ಮತ್ತು ಆತ್ಮವಿಶ್ವಾಸ ಅದ್ಭುತವಾಗಿದೆ ಎಂದು ಶ್ಲಾಘನೆ ವ್ಯಕ್ತಪಡಿಸುತ್ತಾ ಭರವಸೆಯ ಮಾತುಗಳನ್ನಾಡಿದ್ದಾರೆ.

ಕಾಲು ಶತಮಾನದ ಕಾಲ ಸಾರ್ವಜನಿಕ ಹುದ್ದೆಯಲ್ಲಿದ್ದು, ಚುನಾವಣಾ ಪ್ರಜಾಪ್ರಭುತ್ವದ ಮೂಲಕ ಸತತವಾಗಿ ಜನಾದೇಶ ಪಡೆದು ಸರ್ಕಾರಮುನ್ನಡೆಸಿರುವುದು ಜಾಗತಿಕ ರಾಜಕೀಯ ಇತಿಹಾಸದಲ್ಲೇ ಅಪರೂಪದ ಸಾಧನೆಯಾಗಿದೆ.

ಭಾರತದ ಮೂಲಸೌಕರ್ಯ, ಡಿಜಿಟಲ್ ತಂತ್ರಜ್ಞಾನ ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಮೋದಿ ಅವರ ಆಡಳಿತಾವಧಿ ಬದಲಾವಣೆಗಳನ್ನು ತಂದಿದೆ ಎಂದು ಜಾಗತಿಕ ನಾಯಕರು ಸ್ಮರಿಸಿದ್ದಾರೆ. ಮೋದಿ ಸಾರ್ವಜನಿಕ ಅಧಿಕಾರದಲ್ಲಿ (ಮುಖ್ಯಮಂತ್ರಿ ಪ್ರಧಾನಿಯಾಗಿ) ಅ.7ಕ್ಕೆ ಸರಿಯಾಗಿ 25 ವರ್ಷಗಳನ್ನು ಪೂರೈಸುತ್ತಿದ್ದಾರೆ.

**ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಸ ದಾಖಲೆ**

# ಜನರ ವಿಶ್ವಾಸ ನಮೋ ಉಲ್ಲಾಸ

## ನಾನು ಏಕಾಂಗಿಯಲ್ಲ

ಅಲ್ಲದೆ, ಈ ಪ್ರಯಾಣದಲ್ಲಿ ನಾನು ಎಂದಿಗೂ ಏಕಾಂಗಿ ಎಂದು ನನಗೆ ಅನಿಸಲಿಲ್ಲ. ಏಕೆಂದರೆ, ಭಾರತಕ್ಕೆ ಸೇವೆ ಸಲ್ಲಿಸುವ ಏಕೈಕ ಉದ್ದೇಶದಿಂದ ಬದುಕುತ್ತಿರುವ ಭಾರತದ ಸಾಂಸ್ಕೃತಿಕ ರಕ್ಷಕರಾದ ಹಲವು ಸ್ವಯಂಸೇವಕರಿದ್ದಾರೆ. ಅವರು ನನಗೆ ನಾವು ಮಾನವೀಯತೆಯ ಸೇವಕರು ಎಂಬುದನ್ನು ಯಾವಾಗಲೂ ನೆನಪಿಸುವಂತೆ ಮಾಡುತ್ತಾರೆ. ಅವರೆಲ್ಲರಿಗೂ ನನ್ನ ವಂದನೆಗಳು ಎಂದಿದ್ದಾರೆ. ಅಲ್ಲದೆ, ವೇದಗಳಿಂದ ವಿವೇಕಾನಂದರ ವರೆಗೂ ನಿರತರವಾಗಿ ಶ್ರೇಷ್ಠ ಚಿಂತನೆಗಳನ್ನು ಅಭ್ಯಾಸ ಮಾಡಿದ, ಸಾವಿರಾರು ವರ್ಷಗಳ ಸಾಂಸ್ಕೃತಿಕ ಪರಂಪರೆ, ಮಾನವಕುಲದ ಮೇಲೆ ಮತ್ತೆ ನಂಬಿಕೆಯನ್ನು ಪುನಸ್ಥಾಪಿಸಿದ ಈ ರಾಷ್ಟ್ರಕ್ಕೆ ಸೇವೆ ಸಲ್ಲಿಸುವಾಗ ತನಗೆ ಎಂದಿಗೂ ಒಂಟಿತನ ಎಂಬುದು ಕಾಡುವುದಿಲ್ಲ ಎಂದು ತಿಳಿಸಿದ್ದಾರೆ.

### ರಾಜಕೀಯ ಜೀವನದಲ್ಲಿನ ಪ್ರಮುಖ ಘಟನೆಗಳ ಉಲ್ಲೇಖ



ಮುಂದುವರೆದು, ತಮ್ಮ ರಾಜಕೀಯ ಜೀವನದಲ್ಲಿ ತಮ್ಮ ಸಿಎಂ ಹಾಗೂ ಪಿಎಂ ಜೀವನದಲ್ಲಿ ತಾವು ಎದುರಿಸಿದ ಸಾವಲುಗಳ ಕುರಿತು ಉಲ್ಲೇಖಿಸುತ್ತಾ 2001ರ ಗುಜರಾತ್‌ನಲ್ಲಿನ ಭುಜ್ ಭೂಕಂಪನದ ಘಟನೆ ತಮಗೆ ಪುನರ್‌ನಿರ್ಮಾಣದ ದೃಢತೆಯ ಪಾಠ ಮಾಡಿದರೆ, 2019ರ ಚಂದ್ರಯಾನ ಮಿಷನ್ ವಿಫಲತೆ ನನಗೆ ವೈಫಲ್ಯದಿಂದ ಹೇಗೆ ಮೇಲೇರಬೇಕು ಎಂಬುದನ್ನು ತಿಳಿಸಿದೆ. ಇನ್ನು, 2020ರಲ್ಲಿನ ಕೊರೊನಾ ಸಾಂಕ್ರಾಮಿಕ ರೋಗ ತಮಗೆ ಸಾಮೂಹಿಕ ಪ್ರಜ್ಞೆಯ ಮಹತ್ವವನ್ನು ಹೇಳಿಕೊಟ್ಟರೆ ಮಾಧ್ಯಮಗಳು ಸಿಹಿ–ಕಹಿ ಅನುಭವಗಳ ಜೊತೆ ಜೀವನದಲ್ಲಿ ಮುಂದೆ ಸಾಗಲು ಪ್ರೇರಿಸಿದೆ ಎಂದಿದ್ದಾರೆ.

• ಉದಯವಾಹಿನಿ, ದೆಹಲಿ

ಸಾರ್ವಜನಿಕ ಜೀವನಕ್ಕೆ ಬಂದು 25 ವರ್ಷಗಳಾಗಿರುವ ಸಂಭ್ರಮದಲ್ಲಿ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ, ಕೋಟಿಗಟ್ಟಲೆ ಜನರ ವಿಶ್ವಾಸವೇ ತಮ್ಮ ಅತ್ಯಂತ ದೊಡ್ಡ ಶಕ್ತಿ ಎಂದಿದ್ದಾರೆ.ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ವಿಕಸಿತ ಭಾರತ್ ಸಂಕಲ್ಪ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2047ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ದೇಶವಾಗಿ ಭಾರತವನ್ನು ರೂಪಿಸಲು ವಿಶ್ರಾಂತಿ ಪಡೆಯುವ ಸಮಯ ಇದಲ್ಲ. ಇದಕ್ಕೆ ಇನ್ನಷ್ಟು ಕಠಿಣ ಪರಿಶ್ರಮ ಪಡುವ ಸಮಯ ಇದಾಗಿದೆ ಎಂದು ಕರೆ ನೀಡಿದ್ದಾರೆ. ಸರ್ಕಾರದ ಮುಖ್ಯಸ್ಥನಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಾ 25 ವರ್ಷಗಳನ್ನು ನಾನು ಪೂರೈಸಿದ್ದೇನೆ. ಇದು ಜನರ ಆಶೀರ್ವಾದ. ಇದಕ್ಕಾಗಿ ದೇಶದ ಜನರ ಮುಂದೆ ತಲೆಬಾಗಿ ನಮಸ್ಕರಿಸುತ್ತೇನೆ ಎಂದಿದ್ದಾರೆ. ಇಂದು ಮತ್ತೆ ನನ್ನ ವಚನವನ್ನು ಪುನರುಚ್ಚರಿಸುತ್ತಿದ್ದೇನೆ, ನಾವು 2047ರ ಅಭಿವೃದ್ಧಿ ದೇಶದ ಪಣವನ್ನು ಖಂಡಿತವಾಗಿಯೂ ಸಾಧಿಸುತ್ತೇವೆ. ನಾವು ಮಾಡಿಯೇ ತಿರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ತಮ್ಮ ಸಂಪೂರ್ಣ ರಾಜಕೀಯ ಪಯಣಕ್ಕೆ ನಾಗರಿಕರ ಅಚಲ ನಂಬಿಕೆ ಮತ್ತು ಬೆಂಬಲವೇ ಕಾರಣ. ಎನ್‌ಡಿಎ ಒಕ್ಕೂಟದ ತಮ್ಮ ಸಹೋದ್ಯೋಗಿಗಳಿಗೆ ಹಾಗೂ ಪ್ರಜಾಪ್ರಭುತ್ವದ ಬಗ್ಗೆ ಅಪಾರ ಗೌರವ ಹೊಂದಿರುವ ಎಲ್ಲರಿಗೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದು ಮೋದಿ ಹೇಳಿದ್ದಾರೆ.

ರಾಜ್ಯ ವಿಧಾನಸಭೆಗಳು ಮತ್ತು ಲೋಕಸಭೆಗೆ ನಡೆದ ಚುನಾವಣೆಗಳಲ್ಲಿ ಜನರು ತಮ್ಮ ಸೇವೆ ಮಾಡಲು ನನ್ನನ್ನು ನಿರಂತರವಾಗಿ ಆಯ್ಕೆ ಮಾಡಿದ್ದಾರೆ. ಇಂದು, ಭಾರತದ ಪ್ರಜಾಪ್ರಭುತ್ವ ಮತ್ತು ಅದರ ಸಂವಿಧಾನಕ್ಕೆ ನಾನು ನನ್ನ ಅಪಾರ ಗೌರವವನ್ನು ಸಲ್ಲಿಸುತ್ತೇನೆ. ಸೇವಾ ಜ್ಯೋತಿ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿರುವ ಎಲ್ಲಾ ನಾಗರಿಕರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ನಮ್ಮ ದೇಶದಲ್ಲಿ ಸಮಸ್ಯೆಗಳಿವೆ, ಆದರೆ ನಮ್ಮಲ್ಲಿ 140 ಕೋಟಿ ಪರಿಹಾರಗಳೂ ಇವೆ. ಇದು ದೃಢನಿಶ್ಚಯ ಮತ್ತು ಉತ್ಸಾಹದಿಂದ ಮುನ್ನಡೆಯುವ ಹಾಗೂ ರಾಷ್ಟ್ರಸೇವೆಗೆ ನಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಸಮಯವಿದು. ನನಗೆ ಗೆಲುವು ತಂದುಕೊಟ್ಟವರು ವಿನಮ್ರವಾಗಿರಲು ಕಲಿಸಿದರು. ನನ್ನನ್ನು ಕೆಳಗೆ ಬೀಳುವಂತೆ ಮಾಡಿದವರು ಮತ್ತೆ ಎದ್ದು ನಿಲ್ಲಲು ಕಲಿಸಿದರು. ಹಿತೈಷಿಗಳು ಪ್ರೋತ್ಸಾಹಿಸಿದರೆ, ಟೀಕಾಕಾರರು ನನ್ನ ಅಂತರಂಗವನ್ನು ಆಳವಾಗಿ ಪರಿಶೀಲಿಸಿಕೊಳ್ಳುವಂತೆ ಮಾಡಿದರು. ಬೆಂಬಲ ನೀಡಿದವರು ನಂಬಿಕೆಯ ಶಕ್ತಿಯನ್ನು ತೋರಿಸಿಕೊಟ್ಟರು. ವಿರೋಧಿಸಿದವರು ಪ್ರಜಾಪ್ರಭುತ್ವದ ಶಕ್ತಿಯನ್ನು ನನಗೆ ಮನವರಿಕೆ ಮಾಡಿಕೊಟ್ಟರು ಎಂದಿದ್ದಾರೆ. ನಾವು ಸೇವಕರು, ಮಾನವೀಯತೆಯ ಸೇವಕರು. ಬದ್ಧತೆ ಮತ್ತು ಭಕ್ತಿಯಿಂದ ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದನ್ನು ಮುಂದುವರಿಸುವ ಪ್ರತಿಯೊಬ್ಬ ಸ್ವಯಂಸೇವಕ ಮತ್ತು ಕಾರ್ಯಕರ್ತರನ್ನು ನಾನು ಗೌರವದಿಂದ ವಂದಿಸುತ್ತೇನೆ ಎಂದು ಪ್ರಧಾನಿ ಹೇಳಿದ್ದಾರೆ.2001ರ ಭುಜ್ ಭೂಕಂಪವು ಪುನರ್ನಿರ್ಮಾಣ ಕಾರ್ಯದಲ್ಲಿ ದೃಢವಾಗಿರಲು ಕಲಿಸಿದರೆ, ಚಂದ್ರಯಾನ ಕಾರ್ಯಾಚರಣೆಯು ವೈಫಲ್ಯದಿಂದ ಮೇಲೆಳಲು ನನಗೆ ಕಲಿಸಿತು. ಕೊರೋನಾ ಸಾಂಕ್ರಾಮಿಕವು ರಾಷ್ಟ್ರದ ಸಾಮೂಹಿಕ ಪ್ರಜ್ಞೆಯ ಮಹತ್ವವನ್ನು ನನಗೆ ಮನವರಿಕೆ ಮಾಡಿಕೊಟ್ಟಿತು. ಕಹಿ–ಸಿಹಿ ಅನುಭವಗಳ ನಡುವೆಯೂ ಮುನ್ನಡೆಯಲು ತಮ್ಮನ್ನು ಪ್ರೇರೇಪಿಸಿದ ಮಾಧ್ಯಮಗಳನ್ನೂ ಅವರು ಈ ಸಂದರ್ಭದಲ್ಲಿ ಸ್ಮರಿಸಿದ್ದಾರೆ.

**1** ಸಾರ್ವಜನಿಕ ಸೇವೆಯಲ್ಲಿ ಕಾಲು ಶತಮಾನ ಪೂರ್ಣಗೊಳಿಸಿದ ಪ್ರಧಾನಿ ಮೋದಿ,

**2** ಜಾಗತಿಕ ನಾಯಕರಿಂದ ಪ್ರಶಂಸೆಯ ಮಹಾಪೂರ!

**3** ವೈಯಕ್ತಿಕ ಮಹತ್ವಾಕಾಂಕ್ಷೆ ಅಲ್ಲ, ಧ್ಯೇಯಕ್ಕಾಗಿ ಬದುಕಿದ್ದೇನೆ

**ಕಠಿಣ ಪರಿಶ್ರಮ**

## ಗುಜರಾತ್ ಮಾದರಿ

ಗುಜರಾತ್ ಮುಖ್ಯಮಂತ್ರಿಯಾಗಿ ಮೋದಿ 2001ರ ಅ.7ರಂದು ಪ್ರಮಾಣವಚನ ಸ್ವೀಕರಿಸಿದರು. ಆ ನಂತರ ಅವರು ಸತತ 13 ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಚುಕ್ಕಾಣಿ ಹಿಡಿದರು. ಮೂಲಸೌಕರ್ಯ, ಕೈಗಾರಿಕೆ ಮತ್ತು ಜಲ ನಿರ್ವಹಣೆಗೆ ಒತ್ತು ನೀಡಿ, ಅಭಿವೃದ್ಧಿಯಲ್ಲಿ 'ಗುಜರಾತ್ ಮಾದರಿ' ಎಂಬುದನ್ನು ಜನಜನಿತಗೊಳಿಸಿದರು. 2013ರಲ್ಲಿ, ಮೋದಿ ಅವರನ್ನು ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲಾಯಿತು.

ಒಂದು ವರ್ಷದ ನಂತರ ಅಂದರೆ 2014ರಲ್ಲಿ, ಬಿಜೆಪಿ ಲೋಕಸಭೆಯಲ್ಲಿ 282 ಸ್ಥಾನಗಳನ್ನು ಗೆದ್ದು ಬಹುಮತದೊಂದಿಗೆ ಅಧಿಕಾರಕ್ಕೆ ಬಂತು. ಗುಜರಾತ್‌ನಿಂದ ದೆಹಲಿಗೆ ಮೋದಿಯವರ ಆಗಮನವು ರಾಜ್ಯ ಮಟ್ಟದ ಆಡಳಿತದಲ್ಲಿ ಭಾರಿ ಬದಲಾವಣೆ ತಂತು.

ನಂತರ 2019 ಮತ್ತು 2024ರ ಸಾರ್ವತ್ರಿಕ ಚುನಾವಣೆಗಳಲ್ಲೂ ಸತತ ಜಯಗಳಿಸಿ ಸದ್ಯ ಮೂರನೇ ಅವಧಿಗೆ ಪ್ರಧಾನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



## ಸ್ಟಿಂಗ್ ಮಾಡುವುದರಲ್ಲಿ ಡಿಕೆಶಿ ಮಾಸ್ಟರ್: ಸಿದ್ದರಾಮಯ್ಯರನ್ನೂ ಸ್ಟಿಂಗ್ ಆಪರೇಷನ್ ಮೂಲಕವೇ ಸಿಎಂ ಸ್ಥಾನದಿಂದ ಇಳಿಸಲಾಯಿತು: ಹೆಚ್‌ಡಿಕೆ ಆರೋಪ

● ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆಸಿದ 'ಸ್ಟಿಂಗ್ ಆಪರೇಷನ್‌ನಿಂದಾಗಿ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತಾಯಿತು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಜೆಡಿಎಸ್ ಪಕ್ಷದ ಕೇಂದ್ರ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗೋಷ್ಠಿ ವೇಳೆ, ಪ್ರಶ್ನೆಗಳಿಗೆ ಉತ್ತರಿಸಿದ ಕೇಂದ್ರ ಸಚಿವರು, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವರಾಜು ಅರಸು ಅವರಿಗಿಂತ ಹೆಚ್ಚಿನ ಅವಧಿಗೆ ರಾಜ್ಯವನ್ನು ಆಳಿದವರು. ಅಹಿಂದ ವರ್ಗಕ್ಕೆ ದೊಡ್ಡ ನಾಯಕರು. ಅವರ ಮೇಲಿನ ಪ್ರೀತಿಗೆ ಅಭಿಮಾನಿಗಳು ಅವರ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಅಂತಹ ವ್ಯಕ್ತಿ ಡಿಕೆಶಿ ಸ್ಟಿಂಗ್ (ರಹಸ್ಯ ಕಾರ್ಯಾಚರಣೆ) ಆಪರೇಷನ್‌ಗೆ ಬಲಿಯಾದರು ಎಂದು ಆರೋಪಿಸಿದರು.

ತಮ್ಮ ಸಂಪುಟದ ಸಚಿವರ ವಿರುದ್ಧ ಸ್ಟಿಂಗ್ ಆಪರೇಷನ್ ನಡೆಯುತ್ತಿದೆ ಎಂದು ಡಿ.ಕೆ.ಶಿವಕುಮಾರ್ ಅವರು ಸಂಪುಟ ಸಭೆಯಲ್ಲಿ ಹೇಳಿರುವ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾದ ಬಗ್ಗೆ ಪ್ರತಿಕ್ರಿಯಿಸಿದ



ಅವರು, ಡಿಕೆಶಿ ಮಾಡಿದ ಸ್ಟಿಂಗ್ ಆಪರೇಷನ್‌ನಿಂದಾಗಿ ಕಾಂಗ್ರೆಸ್ ಹೈಕಮಾಂಡ್ ಅತ್ಯಂತ ಅಪಮಾನಕಾರಿಯಾಗಿ ಸಿದ್ದರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಇಳಿಸಿತು. ಡಿಕೆಶಿ ಜೊತೆ ಒಂದು ಸುದ್ದಿವಾಹಿನಿ ಹಾಗೂ ಕಾಂಗ್ರೆಸ್ ಹೈಕಮಾಂಡ್ ಶಾಮೀಲಾದ ಪರಿಣಾಮ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕಿತ್ತುಹಾಕಿತು.

ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ನಡೆಸಲು ಕರೆದಿದ್ದಾರೆ ಎಂದು ನಂಬಿ ದೆಹಲಿಗೆ ಹೋಗಿದ್ದ ಸಿದ್ದರಾಮಯ್ಯ ಅವರಿಗೆ ಸ್ಟಿಂಗ್ ಆಪರೇಷನ್ ವಿಷಯ ತಿಳಿಸಿ ರಾಜೀನಾಮೆ ಪಡೆದುಕೊಳ್ಳಲಾಯಿತು ಎಂದು ಕುಮಾರಸ್ವಾಮಿ ದೂರಿದರು. ಅಲ್ಲದೇ, ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯುವಂತೆ



ಸಿದ್ದರಾಮಯ್ಯ ಮೇಲೆ ಒತ್ತಡ ಹೇರಲಾಯಿತು. ಅವರ ವಿರುದ್ಧ ವ್ಯವಸ್ಥಿತ ಸಂಚು ನಡೆದಿದ್ದು, ರಾಜೀನಾಮೆ ಪಡೆದ ರೀತಿ ಸರಿಯಲ್ಲ. ಅಂತಹ ಹಿರಿಯ ನಾಯಕನನ್ನು ಕಾಂಗ್ರೆಸ್ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಇದೆಲ್ಲವನ್ನೂ ಯಾರು ಮಾಡಿದ್ದಾರೆ? ಇದರ ಹಿಂದೆ ಯಾರು ಯಾರು ಇದ್ದಾರೆ? ಯಾವ ಮಾಧ್ಯಮ ಸಂಸ್ಥೆ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಕೇಂದ್ರ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಕಾಂಗ್ರೆಸ್ ಪಕ್ಷದಲ್ಲಿ ಕೆಲವರು ನನ್ನೊಂದಿಗೆ ಈ ವಿಚಾರ ಹಂಚಿಕೊಂಡಿದ್ದಾರೆ. ತಮಗೂ ಇದೇ ರೀತಿಯ ಪರಿಸ್ಥಿತಿ ಎದುರಾಗಬಹುದು ಎಂದು ಭಾವಿಸಿ ಎಂದು ಸಚಿವ ಸಂಪುಟ ಸಭೆಯಲ್ಲಿ ಅವರು ತಮ್ಮ ಸಹೋದ್ಯೋಗಿಗಳಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಿದ್ದಾರೆ. ಈ ಬಗ್ಗೆ ಅವರಿಗೆ ಈಗ ಗುಪ್ತಚರ ಮಾಹಿತಿ ಲಭ್ಯವಾಗಿದೆ ಎಂದ ಹೆಚ್‌ಡಿಕೆ, ಸ್ಟಿಂಗ್ ಮಾಡಿರುವುದು ಅವರು, ರಮೇಶ್ ಜಾರಕಿಹೊಳಿ, ರಾಜಣ್ಣ ಅವರ ಕತೆ ಮುಗಿಸಿದ್ದು ಇವರೇ ಅಲ್ಲವೇ? ಸ್ಟಿಂಗ್ ಮಾಡುವುದರಲ್ಲಿ ಅವರು ನಿಪುಣರು (ಮಾಸ್ಟರ್). ಸ್ಟಿಂಗ್ ಆಪರೇಷನ್ ನಡೆಸುವ ಮೂಲಕ ಅವರು ಎಲ್ಲಾ ಸಚಿವರ ಮೇಲೆ ತಮ್ಮ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಅವರೇ ಎಲ್ಲವನ್ನೂ ಮಾಡಿ ವಿಪಕ್ಷಗಳ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಸ್ಟಿಂಗ್ ಮಾಡಿ ಸಿದ್ದರಾಮಯ್ಯ ಅವರನ್ನು ಕೆಳಗೆ ಇಳಿಸಿದ ವ್ಯಕ್ತಿಯೇ ನಮ್ಮ ಮೇಲೆ ಆರೋಪ ಮಾಡುವುದು ಹಾಸ್ಯಾಸ್ಪದವಾಗಿದೆ ಎಂದು ಅವರು ಆರೋಪಿಸಿದರು.

### ನಾನು ಸ್ಟಿಂಗ್ ಮಾಡಿದರೆ ಕ್ರಮ ಕೈಗೊಳ್ಳಲಿ



ಹಿಂದೆ ಸಂಪುಟ ಸಭೆಯಲ್ಲಿ ಅಭಿವೃದ್ಧಿ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಈಗ ಡಿಕೆಶಿ ಕಾಲದಲ್ಲಿ ಹನಿಟ್ರ್ಯಾಪ್, ಸ್ಟಿಂಗ್ ಆಪರೇಷನ್ ಬಗ್ಗೆ ಚರ್ಚೆ ಆಗುತ್ತಿದೆ. ಇದು ಈ ರಾಜ್ಯಕ್ಕೆ ಬಂದೊದಗಿರುವ ದುಃಸ್ಥಿತಿ. ಅಂತೂ ಇಂತೂ ಮುಖ್ಯಮಂತ್ರಿ ಆಗಿರುವ ಈ ವ್ಯಕ್ತಿ ಜನರ ಕೆಲಸ ಮಾಡುತ್ತಿಲ್ಲ. ಬದಲಿಗೆ ಬೆಳಗ್ಗೆಯಿಂದ ಸಂಜೆವರೆಗೂ ಸ್ಟಿಂಗ್ ಆಪರೇಷನ್ ಮಾಡಿಕೊಂಡು ಕೂತಿರುತ್ತಾರೆ. ನನಗೆ ಅವರ ಪಕ್ಷದ ಶಾಸಕರೇ ಬಂದು ಹೇಳುತ್ತಾರೆ. ಈಗ ಅದೇ ವಿಷಯ ಮೀಡಿಯಾದಲ್ಲಿ ಬರುತ್ತಿದೆ. ಒಂದು ವೇಳೆ ನಾನು ಸ್ಟಿಂಗ್ ಮಾಡಿದರೆ ಕ್ರಮ ಕೈಗೊಳ್ಳಲಿ. ಇವರ ಬಳಿ ಎಸ್‌ಐಟಿ ಇದೆಯಲ್ಲವೇ? ತನಿಖೆ ಮಾಡಿಸಲಿ. ಬೇಡ ಅಂದವರು ಯಾರು? ವಿಧಾನಸಭೆಯಲ್ಲಿ ರಾಜಣ್ಣ ಏನು ಹೇಳಿದ್ದರು. ನನ್ನದಷ್ಟೇ ಅಲ್ಲ, ಇನ್ನೂ 40 ಜನರ ಸ್ಟಿಂಗ್ ಮಾಡಿಸಿದ್ದಾರೆ ಎಂದು ಹೇಳಿದರಲ್ಲವೇ? ಅವರ ಹೇಳಿಕೆ ಏನಾಯಿತು? ನಂತರ ಅವರ ಬಾಯಿ ಮುಚ್ಚಿಸಿದರು ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

**ಈ ದಿನದ ದರ** ಪೆಟ್ರೋಲ್: 111.68₹/L | ಡೀಸೆಲ್ : 99.56₹/L | ಬಂಗಾರ: ₹ 14,957/Gram 24ct ₹ 13,710 /Gram 22ct | ಬೆಳ್ಳಿ: ₹235.00/

## ಜ್ಯೋತಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ವೇದಾಂತ ಮೇಕಥಾನ್ ದಕ್ಷಿಣಾಸ್ಯ ದರ್ಶಿನಿ'



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಜ್ಯೋತಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವೇದಾಂತ ಮೇಕಥಾನ್- ದಕ್ಷಿಣಾಸ್ಯ ದರ್ಶಿನಿ' ಎಂಬ 50 ಗಂಟೆಗಳ ಸುದೀರ್ಘ ಮೇಕಥಾನ್‌ನ್ನು ಆಯೋಜಿಸಲಾಗಿದೆ. ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಉತ್ಸಾಹಿ ಯುವ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮೇಕಥಾನ್‌ನಲ್ಲಿ ಭಾಗವಹಿಸಿದ್ದಾರೆ.

## ಅಮೆಜಾನ್ ಕಚೇರಿ ಹೊರಗೆ ಟ್ರಾನ್ಸ್‌ಫಾರ್ಮರ್ ಸ್ಫೋಟ; ಪಾದಚಾರಿಗೆ ಗಾಯ

• ಉದಯವಾಹಿನಿ, ಬೆಂಗಳೂರು

ಈಶಾನ್ಯ ಬೆಂಗಳೂರಿನ ಬಾಗಲೂರು ಕ್ರಾಸ್ ಸಮೀಪದ ಅಮೆಜಾನ್ ಕಚೇರಿಯ ಹೊರಭಾಗದ ಫುಟ್‌ಪಾತ್‌ನಲ್ಲಿ ಅಳವಡಿಸಲಾಗಿದ್ದ ಟ್ರಾನ್ಸ್‌ಫಾರ್ಮರ್ ಬಾಕ್ಸ್‌ವೊಂದು ಬುಧವಾರ ಬೆಳಗ್ಗೆ 9.49ರ ಸುಮಾರಿಗೆ ಸ್ಫೋಟಗೊಂಡಿದ್ದು, ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿಯೊಬ್ಬರು ಗಾಯಗೊಂಡಿದ್ದಾರೆ. ಸ್ಫೋಟದ ವೇಳೆ ನೆಲಕ್ಕೆ ಬಿದ್ದ ಪರಿಣಾಮ, ಓರ್ವ ಪಾದಚಾರಿಗೆ ಗಾಯಗಳಾಗಿವೆ. ಅವರ ಕೈಗಳಿಗೆ ತೀವ್ರ ಸುಟ್ಟ ಗಾಯಗಳಾದರೆ, ಮತ್ತೊಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಮೀಪದಲ್ಲಿ ನಡೆದುಕೊಂಡು ಹೋಗುತ್ತಿದ್ದ ವಿದ್ಯಾರ್ಥಿನಿ ಯೊಬ್ಬಳು ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾಳೆ.ಅಮೆಜಾನ್


ಉದಯವಾಹಿನಿ ಚಿತ್ರ

ಕಚೇರಿ ಆವರಣದ ಗೇಟ್ ನಂ. 3ರ ಹೊರಭಾಗದಲ್ಲಿ ಈ ಘಟನೆ ನಡೆದಿದ್ದು, ಯಲಹಂಕ ಓಲ್ಡ್ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುತ್ತದೆ. ಗಾಯಗೊಂಡವರನ್ನು ಮೊಹಮ್ಮದ್ ಅಫ್ರೋಜ್ ಎಂದು ಗುರುತಿಸಲಾಗಿದೆ. ಘಟನೆ ಕುರಿತು ಪ್ರತಿಕ್ರಿಯಿಸಿದ ಈಶಾನ್ಯ ವಿಭಾಗದ ಉಪ ಪೊಲೀಸ್ ಆಯುಕ್ತ ಮಿಥುನ್ ಕುಮಾರ್ ಸತೇಡ್, ಇದು ಅಮೆಜಾನ್ ಕಚೇರಿಯ ಗೇಟ್ ನಂ. 3ರ ಬಳಿ ನಡೆದಿದೆ. ಬಾಗಲೂರು ಕ್ರಾಸ್ ಸಮೀಪ ಯಲಹಂಕ ಓಲ್ಡ್ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೊಹಮ್ಮದ್ ಅಫ್ರೋಜ್ ಗಾಯಗೊಂಡಿದ್ದಾರೆ. ಅವರು ಸುರಕ್ಷಿತವಾಗಿದ್ದು, ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಹಠಾತ್ ಸಂಭವಿಸಿದ ಸ್ಫೋಟದ ದೃಶ್ಯವು ಘಟನೆಯನ್ನು ಕಣ್ಣಾರೆ ಕಂಡ ಅರುಣ್ ಜಿ ಅವರ ಕಾರಿನ ಡ್ಯಾಶ್‌ಕ್ಯಾಮ್‌ನಲ್ಲಿ ಸೆರೆಯಾಗಿದೆ.ನನ್ನ ಡ್ಯಾಶ್‌ಕ್ಯಾಮ್‌ನಲ್ಲಿ ಘಟನೆ ಸೆರೆಯಾಗಿದೆ. ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರಿಂದ ನಾನು ಕಾರಿನಿಂದ ಹೊರಬರಲು ಸಾಧ್ಯವಾಗಲಿಲ್ಲ. ನನ್ನ ಮಕ್ಕಳು ಕಾರಿನೊಳಗಿದ್ದರು ಎಂದು ಅರುಣ್ ಜಿ ತಿಳಿಸಿದ್ದಾರೆ.

## ಸೇವೆಯಿಂದ ಬದುಕು ಸಾರ್ಥಕ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಸೇವೆಯಿಂದ ಬದುಕು ಸಾರ್ಥಕ ಎಂದು ಬಿಜೆಪಿ ಕ್ಷೇತ್ರ ಕೋಶಾಧ್ಯಕ್ಷ ಎನ್.ಸುರೇಶ್ ತಿಳಿಸಿದರು. ಮಹದೇವಪುರ ಕ್ಷೇತ್ರದ ದೊಡ್ಡಕನ್ನಲ್ಲಿ ಸಮೀಪದ ವಿಪ್ರೋ ಗೇಟ್ ಬಳಿ ಕಾರ್ಯಕರ್ತರು ಆಯೋಜಿಸಿದ ಅವರ 50ನೇ ಜನ್ಮದಿನದ ಪ್ರಯುಕ್ತ ಬಡಮಹಿಳೆಯರಿಗೆ ಬಾಗಿನ ಹಾಗೂ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ, ಅನ್ನದಾಸೋಹ ನೀಡಿ ಮತನಾಡಿದರು. ಜನ್ಮದಿನವನ್ನು ಸೇವಾದಿನಾವಾಗಿಸಿಕೊಂಡು ಜನಸೇವೆ ಮಾಡಬೇಕೆಂದು ನಮ್ಮ ಜೀವನ ಸಾರ್ಥಕವಾಗುತ್ತದೆ ಎಂಬ ನಾನುಡಿಯನ್ನು ನಾಯಕರಾದ ಅರವಿಂದ ಲಿಂಬಾವಳಿ ಅವರು ತೋರಕಿಸಿಕೊಟ್ಟ ಹಾದಿಯಲ್ಲಿ ಸಾಗುತ್ತಿದೇವೆ ಎಂದರು.

ಇದೇವೇಳೆ ಅಭಿಮಾನಿಗಳು ಪುಷ್ಪನಮನ ಸಲ್ಲಿಸಿ, ಕೇಕ್ ಕತ್ತರಿಸಿ ಸಂಭ್ರಮಿಸಿದರು. ಬಿಜೆಪಿ ಯುವಮುಖಂಡರು ವಿ.ಆನಂದ್ ಸೇರಿದಂತೆ ಸ್ಥಳೀಯ ಯುವಮುಖಂಡರಾದ ರಾಜೇಶ್, ಕೇಶವ, ವರ್ತೂರ್ ದೀಲಿಪ್ ಸೇರಿದಂತೆ ಮತ್ತಿತರರು ಇದ್ದರೂ.ಮುಂದುವರೆದು, ಫೆಬ್ರವರಿ 17ರಂದು ಅಂತಿಮ ಅವಕಾಶ ನೀಡಿದ್ದರೂ ಸರ್ಕಾರಿ ವಕೀಲರು, ಯಾವುದೇ ಆಕ್ಷೇಪಣೆ ಸಲ್ಲಿಸದೆ ಮತ್ತೆ ಕಾಲಾವಕಾಶ ಕೋರಿದ್ದರು. ಸುಮಾರು ಒಂದು ವರ್ಷ ಕಳೆದರೂ ಪ್ರತಿಕ್ರಿಯೆ ನೀಡದ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಕೆ.ಎಸ್. ಭರತ್ ಕುಮಾರ್ ಅವರ ವಿಭಾಗೀಯ ಪೀಠವು, ಕೋರ್ಟ್ ಆದೇಶ ನೀಡಿದ್ದರೂ ಅಫಿಡವಿಟ್ ಏಕೆ ಸಲ್ಲಿಸುತ್ತಿಲ್ಲ? ಇಲ್ಲದಿದ್ದರೆ ನಾವು ಈ ಪಿಐಎಲ್‌ಗಳನ್ನು ಪುರಸ್ಕರಿಸಲು ಆರಂಭಿಸುತ್ತೇವೆ ಎಂದು ಎಚ್ಚರಿಕೆ ನೀಡಿತು.

# ರಾಜ್ಯದ 69 ಶಾಸಕರ 7.40 ಕೋಟಿ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಿದ ಸರ್ಕಾರ

### ಕರ್ನಾಟಕದ ಕೋಟ್ಯಧಿಪತಿ ಜನಪ್ರತಿನಿಧಿಗಳು ತಮ್ಮ ವೈದ್ಯಕೀಯ ಚಿಕಿತ್ಸೆಗಾಗಿ ಸಾರ್ವಜನಿಕರ ತೆರಿಗೆ ಹಣವನ್ನು ಮರುಪಾವತಿ ಪಡೆದಿರುವ ಆಘಾತಕಾರಿ!

• ಉದಯವಾಹಿನಿ, ಬೆಂಗಳೂರು

ನಮ್ಮ ರಾಜಕಾರಣಿಗಳಿಗೆ ಸರ್ಕಾರಿ ಆಸ್ಪತ್ರೆ ಬೇಡ, ಆದರೆ ಸರ್ಕಾರದ ದುಡ್ಡು ಬೇಕೇಬೇಕು! ಹೌದು, ಕೋಟ್ಯಧಿಪತಿಗಳಾಗಿದ್ದರೂ ಸಹ ರಾಜ್ಯದ 69 ಶಾಸಕರು

**1** ಶಾಮನೂರು ಶಿವಶಂಕರಪ್ಪ: ಹಿರಿಯ ಶಾಸಕರಾದ ಇವರಿಗೆ 69.78 ಲಕ್ಷ ಮರುಪಾವತಿ ಮಾಡಲಾಗಿದೆ.

**2** ಎಸ್. ಸುರೇಶ್ ಕುಮಾರ್: 22.26 ಲಕ್ಷ

**3** ಕೆ. ಗೋಪಾಲಯ್ಯ: 21.05 ಲಕ್ಷ

**4** ಎಚ್. ಡಿ. ರೇವಣ್ಣ: 13.02 ಲಕ್ಷ

**5** ಬಸವರಾಜ ಬೊಮ್ಮಾಯಿ (ಮಾಜಿ ಸಿಎಂ):10.45 ಲಕ್ಷ

**6** ಆರಗ ಜ್ಞಾನೇಂದ್ರ: 10.21 ಲಕ್ಷ

**7** ಲಕ್ಷ್ಮಣ ಸವದಿ: 4.86 ಲಕ್ಷ

**8** ಡಾ. ಸಿ. ಎನ್. ಅಶ್ವತ್ಥ ನಾರಾಯಣ: 4.58 ಲಕ್ಷ

ತಮ್ಮ ದುಬಾರಿ ಆಸ್ಪತ್ರೆ ಬಿಲ್‌ಗಳನ್ನು ಸಹ ಜನಸಾಮಾನ್ಯರು ಕಟ್ಟುವ ತೆರಿಗೆ ಹಣದಿಂದಲೇ ಭರಿಸಿಕೊಳ್ಳುತ್ತಿದ್ದಾರೆ. ಅದರಂತೆ, ಇದಕ್ಕಾಗಿ ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 7 ಕೋಟಿಗೂ ಅಧಿಕ ಹಣವನ್ನ ಖರ್ಚು ಮಾಡಿದೆ.

ರಾಜ್ಯದ ಸಾಮಾನ್ಯ ನಾಗರಿಕರು ಅಕಾಲಿಕವಾಗಿ ಸಾವನ್ನಪ್ಪಿದರೆ ಸರ್ಕಾರದಿಂದ ಸಿಗುವ ಪರಿಹಾರ ಕೇವಲ ಐದು ಲಕ್ಷ ರೂಪಾಯಿ.

ಆದರೆ ಶಾಸಕರು ಹಾಗೂ ಅವರ ಕುಟುಂಬದ ವೈದ್ಯಕೀಯ ವೆಚ್ಚಕ್ಕಾಗಿ ಸರ್ಕಾರ ತಲಾ ಒಂದು ಕೋಟಿ ರೂಪಾಯಿ ವರೆಗೆ ಸಾರ್ವಜನಿಕರ ತೆರಿಗೆ ಹಣವನ್ನು ಮಂಜೂರು ಮಾಡುತ್ತಿರುವ ವಿಷಯ ಬೆಳಕಿಗೆ ಬಂದಿದೆ. ಹೌದು, ಕರ್ನಾಟಕದಲ್ಲಿ ಶಾಸಕರ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು ಸಾಮಾಜಿಕ ಕಾರ್ಯಕರ್ತ ಎಚ್. ಎಂ. ವೆಂಕಟೇಶ್ ಎಂಬುವವರು ಸಲ್ಲಿಸಿದ್ದ ಆರ್‌ಟಿಐ ಅರ್ಜಿಗೆ ವಿಧಾನಸಭೆ ಸಚಿವಾಲಯವು, ರಾಜ್ಯದ 69 ಶಾಸಕರು



ಉದಯವಾಹಿನಿ ಚಿತ್ರ

ಉದಯವಾಹಿನಿ ಚಿತ್ರ

ಮತ್ತು ಅವರ ಕುಟುಂಬ ಸದಸ್ಯರು ಕಳೆದ 3 ವರ್ಷಗಳಲ್ಲಿ (ಮೇ 20, 2023 ರಿಂದ ಸೆಪ್ಟೆಂಬರ್ 30, 2026) ಒಟ್ಟು 7.40 ಕೋಟಿಗೂ ಅಧಿಕ (7,46,67,133) ವೈದ್ಯಕೀಯ ವೆಚ್ಚವನ್ನು ಸರ್ಕಾರದಿಂದ ಮರುಪಾವತಿಪಡೆದುಕೊಂಡಿದ್ದು, ಪಕ್ಷಾತೀತವಾಗಿ ಎಲ್ಲಾ ಪಕ್ಷಗಳ ಶಾಸಕರು ಈ ಸೌಲಭ್ಯವನ್ನು ಬಳಸಿಕೊಂಡಿದ್ದಾರೆ ಎಂದು ತಿಳಿಸಿದೆ. ಇಡೀ ಪಟ್ಟಿಯಲ್ಲಿ ಅತ್ಯಂತ ಕಡಿಮೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಿಸಿಕೊಂಡಿರುವುದು ನಿಖಿಲ್ ಉಮೇಶ್ ಕತ್ತಿ ಮತ್ತು ಅವರ ಕುಟುಂಬದವರು. ಅದರಂತೆ, ಇವರು ಹಾಗೂ ಇವರ ಕುಟುಂಬದವರು ಕಳೆದ ಮೂರು ವರ್ಷದಲ್ಲಿ ಕೇವಲ 2,349 ಮರುಪಾವತಿ ಪಡೆದಿದ್ದಾರೆ.

ಮುಂದುವರೆದು, ಕರ್ನಾಟಕ ಶಾಸಕಾಂಗದ ನಿಯಮಗಳ ಪ್ರಕಾರ ಶಾಸಕರು ಮತ್ತು ಅವರ ಅವಲಂಬಿತರು ಖಾಸಗಿ ಅಥವಾ ಐಷಾರಾಮಿ ಆಸ್ಪತ್ರೆಗಳಲ್ಲಿ ಪಡೆಯುವ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಸಾಮಾನ್ಯ ಜನರಿಗೆ ಸರ್ಕಾ

### ವೈದ್ಯಕೀಯ ವೆಚ್ಚ ಮರುಪಾವತಿಯಲ್ಲಿ ಟಾಪ್ ಶಾಸಕರು

ಎಚ್. ಕೆ. ಸುರೇಶ್ (ಬೇಲೂರು ಶಾಸಕ) ಬಿಜೆಪಿ ಪಕ್ಷದ ಸುರೇಶ್ ಅವರು ಹಾಗೂ ಅವರ ಕುಟುಂಬದ ವೈದ್ಯಕೀಯ ಚಿಕಿತ್ಸೆಗಾಗಿ ಬರೋಬ್ಬರಿ 98,78,325 (ಸುಮಾರು 98.78 ಲಕ್ಷ ರೂ.) ಮರುಪಾವತಿ ಪಡೆಯುವ ಮೂಲಕ ಇಡೀ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಕೆ. ಹರೀಶ್ ಗೌಡ (ಚಾಮರಾಜ ಶಾಸಕ): ಕಾಂಗ್ರೆಸ್ ಪಕ್ಷದ ಹರೀಶ್ ಗೌಡ ಅವರು ತಮ್ಮ ಕುಟುಂಬದ ಚಿಕಿತ್ಸೆಗಾಗಿ 85,91,139 (ಸುಮಾರು 85.91 ಲಕ್ಷ ರೂ.) ಮರುಪಾವತಿ ಪಡೆದು ಎರಡನೇ ಸ್ಥಾನದಲ್ಲಿದ್ದಾರೆ.

ಡಾ. ಎಚ್. ಡಿ. ರಂಗನಾಥ್ (ಕುಣಿಗಲ್ ಶಾಸಕ) ವೈದ್ಯರೂ ಆಗಿರುವ ಕಾಂಗ್ರೆಸ್ ಪಕ್ಷದ ರಂಗನಾಥ್ ಅವರು ತಮ್ಮ ಕುಟುಂಬದ ವೈದ್ಯಕೀಯ ವೆಚ್ಚವಾಗಿ 85,02,261 ಪಡೆದು ಮೂರನೇ ಸ್ಥಾನದಲ್ಲಿದ್ದಾರೆ.

ಆಸ್ಪತ್ರೆಗಳಲ್ಲಿ ಸಮರ್ಪಕ ಸೌಲಭ್ಯ ಸಿಗದ ಈ ಕಾಲದಲ್ಲಿ, ಜನಪ್ರತಿನಿಧಿಗಳ ಈ ದುಬಾರಿ ವೆಚ್ಚ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.



## ಎಸ್‌ಐಆರ್ ಹಗರಣ ನಿಷ್ಪಕ್ಷ ತನಿಖೆಗೆ ಮನವಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಪ್ರತಿಯೊಬ್ಬ ನಾಗರಿಕನಿಗೂ ತನ್ನ ಮತದಾನದ ಹಕ್ಕನ್ನು ಚಲಾಯಿಸುವ ಅವಕಾಶ ದೊರೆಯುವುದು ಅತ್ಯಂತ ಅಗತ್ಯವಾಗಿದೆ. ಆದ್ದರಿಂದ, ತಾವುಗಳು ಈ ಕುರಿತು ನಿಷ್ಪಕ್ಷಪಾತ ಹಾಗೂ ಸಮಗ್ರ ತನಿಖೆ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು. ಮೂಲಕ ಸಲ್ಲಿಸಲಾಗಿರುವ ಅರ್ಜಿಗಳನ್ನು ಸಮಗ್ರವಾಗಿ ಪರಿಶೀಲಿಸಿ, ಯಾವುದೇ ಅರ್ಹ ಮತದಾರರ ಹೆಸರನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕಲು ಅವಕಾಶ ಕಲ್ಪಿಸದಂತೆ ಕ್ರಮ ಕೈಗೊಳ್ಳಲು ತಾವು ಸೂಚಿಸಬೇಕು ಎಂದು ಕಾಂಗ್ರೆಸ್ ಕಾರ್ಯಕರ್ತರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ರಾಜ್ಯದಲ್ಲಿ ಅರ್ಹ ಮತದಾರರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಬಿಜೆಪಿಯ ಪ್ರಯತ್ನವನ್ನ ತಡೆದು ನೈಜ್ಯ ಮತದಾರರಿಗೆ ರಕ್ಷಣೆ ನೀಡಬೇಕು ಪ್ರತಿಯೊಬ್ಬ ನಾಗರೀಕರಿಗೂ ಮತದಾನ ಮಾಡುವ ಹಕ್ಕನ್ನ ಒದಗಿಸಿ ಕೊಡಬೇಕೆಂದು ಈಗಾಗಲೇ ಮುಖ್ಯ ಚುನಾವಣಾ ಅಧಿಕಾರಿಯನ್ನು ಕಾಂಗ್ರೆಸ್ ಪಕ್ಷದವರು ಅನೇಕ ಬಾರಿ ಭೇಟಿ ಮಾಡಿ ಮತದಾರರ ಹಕ್ಕನ್ನ ರಕ್ಷಿಸಿ ಎಂದು ವಿನಂತಿಸಿಕೊಳ್ಳಲಾಗುತ್ತಿದೆ. ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ. ವಿಶೇಷವಾಗಿ ಬಿಜೆಪಿ ನಾಯಕರು ಫಾರಂ-7 ಮೂಲಕ ದಲಿತರು, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಮತದಾರರ ಹೆಸರುಗಳನ್ನು ತೆಗೆದುಹಾಕಲು ಅರ್ಜಿಗಳನ್ನು ಸಲ್ಲಿಸಿದ್ದಾರೆ.

## ಬೆಂಗಳೂರಿನಲ್ಲಿ ಸಿಲಿಂಡರ್ ಸ್ಫೋಟ: ತಾಯಿ -ಮಗು ಸಾವು

• ಉದಯವಾಹಿನಿ, ಬೆಂಗಳೂರು

ನಾಯಂಡಹಳ್ಳಿಯ ವಿನಾಯಕ ಲೇಔಟ್‌ನಲ್ಲಿ ನಡೆದ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತದಲ್ಲಿ ತಾಯಿ ಹಾಗೂ ಮೂರು ವರ್ಷದ ಮಗು ಮೃತಪಟ್ಟಿದ್ದಾರೆ. ಘಟನೆಯಿಂದ ಒಂದೇ ಕುಟುಂಬದ ಹಲವು ಸದಸ್ಯರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತರನ್ನು ಲಕ್ಷ್ಮಮ್ಮ ಹಾಗೂ ಅವರ ಮೂರು ವರ್ಷದ ಅವಳಿ ಮಕ್ಕಳಲ್ಲಿ ಒಬ್ಬರು ಎಂದು ಗುರುತಿಸಲಾಗಿದೆ. ಸ್ಫೋಟದಲ್ಲಿ ಲಕ್ಷ್ಮಮ್ಮ ಅವರಿಗೆ ಸುಮಾರು ಶೇ.70ರಷ್ಟು ಸುಟ್ಟ ಗಾಯಗಳಾಗಿದ್ದವು. ಚಿಕಿತ್ಸೆ ಪಡೆಯುತ್ತಿದ್ದ ಅವರು ಇಂದು ಬೆಳಗ್ಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.ಮನೆಯ ಬಾಗಿಲು ತೆರೆದು ಅಡುಗೆ ಮಾಡಲು ಸ್ಟೌವ್ ಹಚ್ಚಿದ ಕೆಲವೇ ಕ್ಷಣಗಳಲ್ಲಿ ಸಿಲಿಂಡರ್ ಸ್ಫೋಟಗೊಂಡಿದೆ ಎನ್ನಲಾಗಿದೆ. ಕಳೆದ ಮೂರು ದಿನಗಳಿಂದ ಸಿಲಿಂಡರ್‌ನಲ್ಲಿ ಲೀಕೇಜ್ ಸಮಸ್ಯೆ ಇತ್ತು ಎಂಬ ಮಾಹಿತಿಯೂ ಲಭ್ಯವಾಗಿದೆ. ಸ್ಫೋಟದ ತೀವ್ರತೆಗೆ ಕರಿಲಿಂಗಪ್ಪ, ಅವರ ಪತ್ನಿ ಲಕ್ಷ್ಮಮ್ಮ ಹಾಗೂ ನಾಲ್ವರು ಮಕ್ಕಳು ಗಾಯಗೊಂಡಿದ್ದರು. ಕೂಡಲೇ ಎಲ್ಲರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

## ಫೈಜರ್ ಹೆಸರಿನಲ್ಲಿ ನಕಲಿ ಔಷಧಿ ದಂಧೆ: 10 ಕೋಟಿ ಲಾಭ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ನಕಲಿ ಆಯಂಟಿಬಯೋಟಿಕ್ ಮತ್ತು ಐಸಿಯು ಔಷಧ ಪ್ರಕರಣಕ್ಕೆ ಸಂಬಂಧಿಸಿದಂತೆ ಅತ್ಯಂತ ಆಘಾತಕಾರಿ ಮಾಹಿತಿ ಹೊರಬಿದಿದ್ದು, ತನಿಖೆಯ ಪ್ರಕಾರ, ಆರೋಪಿಗಳು ಕಳೆದ ಒಂದೂವರೆ ವರ್ಷದಲ್ಲಿ, ಸುಮಾರು 15,000 ಕ್ಕೂ ಹೆಚ್ಚು ನಕಲಿ ಆಯಂಟಿಬಯೋಟಿಕ್ ಚುಚ್ಚುಮದ್ದಿನ ಬಾಟಲಿಗಳನ್ನು ಆಸ್ಪತ್ರೆ ಮತ್ತು ಫಾರ್ಮಸಿಗಳಿಗೆ ವಿತರಿಸಿರುವುದು ಬೆಳಕಿಗೆ ಬಂದಿದೆ. ಬೆಂಗಳೂರು ಹೊರವಲಯದ ಬಿಡದಿಯ ಫಾರ್ಮ್‌ಹೌಸ್ ಒಂದರಲ್ಲಿ ಅಕ್ರಮವಾಗಿ ತಯಾರಾಗುತ್ತಿದ್ದ ಈ ನಕಲಿ ಜೀವರಕ್ಷಕ ಔಷಧಿಗಳ ಪ್ರಕರಣದ ತನಿಖೆಯ ವೇಳೆ, ಹೈದರಾಬಾದ್, ಚೆನ್ನೈ ಮತ್ತು ಉತ್ತರಾಖಂಡ್ ರಾಜ್ಯಗಳಿಂದ ಅತ್ಯಂತ ಕಡಿಮೆ ಬೆಲೆಯ ಅಥವಾ ಅವಧಿ ಮುಗಿದ ಕೆಳಮಟ್ಟದ ರಾಸಾಯನಿಕ/ಔಷಧಗಳನ್ನು ತಂದು, ಅವುಗಳನ್ನು ಹೊಸ ಸೀಸೆಗಳಿಗೆ ತುಂಬಿಸಿ, ಫಿಜರ್ ನಂತಹ ಜಾಗತಿಕ ಕಂಪನಿಗಳ ನಕಲಿ ಲೇಬಲ್ ಹಚ್ಚಿ ಮಾರುತ್ತಿದ್ದರು.

ಹೀಗೆ, ಆರೋಪಿಗಳು ಸುಮಾರು 15,000 ಕ್ಕೂ ಹೆಚ್ಚು ನಕಲಿ ಆಯಂಟಿಬಯೋಟಿಕ್ ಇಂಜೆಕ್ಷನ್ ವಯಲ್‌ಗಳನ್ನು ಈಗಾಗಲೇ ವಿತರಿಸಿದ್ದಾರೆ. ಇವು ತೀವ್ರ ಬ್ಯಾಕ್ಟೀರಿಯಾ ಸೋಂಕು ಹಾಗೂ ಐಸಿಯುನಲ್ಲಿರುವ ರೋಗಿಗಳಿಗೆ ಬಳಸುವ ಅತ್ಯಂತ ದುಬಾರಿ ಔಷಧಗಳಾಗಿದ್ದವು. ಅದರಂತೆ, ವಿಶೇಷ ತನಿಖಾ ತಂಡದ ತನಿಖೆಯ ಪ್ರಕಾರ, ಆರೋಪಿಗಳು ತಲಾ 5,500 ರಿಂದ 6,500 ವರೆಗಿನ ಬೆಲೆಗೆ ಮಾರಿ, ಕಳೆದ ಕೆಲವು ತಿಂಗಳುಗಳಲ್ಲೇ ಸುಮಾರು 10 ಕೋಟಿಗೂ ಹೆಚ್ಚು ಲಾಭ ಮಾಡಿಕೊಂಡಿದ್ದಾರೆ ಎಂದು ಶಂಕಿಸಲಾಗಿದೆ.

## ಶ್ರೀ ಸರ್ಕಲ್ ಮಾರಮ್ಮ ದೇವಸ್ಥಾನದಲ್ಲಿ ಶರನ್ನವ ರಾತ್ರೋತ್ಸವ

• ಉದಯವಾಹಿನಿ, ಬೆಂಗಳೂರು

ಮಲ್ಲೇಶ್ವರದ ಭಾರತೀಯ ವಿಜ್ಞಾನ ಸಂಸ್ಥೆಯ ಪಕ್ಕದಲ್ಲಿರುವ ಶ್ರೀ ಸರ್ಕಲ್ ಮಾರಮ್ಮ ದೇವಸ್ಥಾನದಲ್ಲಿ ಅಕ್ಟೋಬರ್ 11 ರಿಂದ 21ರ ವರೆಗೆ ಶರನ್ನವ ರಾತ್ರೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ. **ಧಾರ್ಮಿಕ ಕಾರ್ಯಕ್ರಮಗಳು** : ಸಮಾರಂಭದ ಎಲ್ಲಾ ದಿನಗಳಲ್ಲೂ ಶ್ರೀ ಅಮ್ಮನವರಿಗೆ ವಿಧ ವಿಧವಾದ ಅಲಂಕಾರಗಳು, ಮಧ್ಯಾಹ್ನ 1-00 ಗಂಟೆಗೆ ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ.

**ಸಾಂಸ್ಕೃತಿಕ ಕಾರ್ಯಕ್ರಮಗಳು** : ಪ್ರತಿದಿನ ಸಂಜೆ 6-30ಕ್ಕೆ. ಅಕ್ಟೋಬರ್ 11-ಉದ್ಘಾಟನೆ, ಅಕ್ಟೋಬರ್ 12-ಕು|| ನಿರೀಕ್ಷಾ ಮಂಜುನಾಥ್ ರಾವ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ, ಅಕ್ಟೋಬರ್ 13-ಆದಿಶಕ್ತಿ ಗಂಗಮ್ಮ ಭಕ್ತ ಮಂಡಲಿಯ ಸದಸ್ಯರಿಂದ ಭಜನೆ, ಅಕ್ಟೋಬರ್ 14-ಶ್ರೀಮತಿ ರಂಜಿತಾ ಪ್ರಸಾದ್, ಶ್ರೀಮತಿ ಭಾವನಾ ಮೂರ್ತಿ ಮತ್ತು ಸಂಗಡಿಗರಿಂದ ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆಗಳ ಗಾಯನದ ಮಿಶ್ರ ಮಾಧುರ್ಯ, ಅಕ್ಟೋಬರ್ 15-ಶಿವರಂಜನಿ ಮಹಿಳಾ ಸಾಂಸ್ಕೃತಿಕ ಸಂಘದ ಸದಸ್ಯರಿಂದ ಭಜನೆ,


ಉದಯವಾಹಿನಿ ಚಿತ್ರ

ಅಕ್ಟೋಬರ್ 16-ಶ್ರೀಮತಿ ಶ್ರೀದೇವಿ ಮತ್ತು ಸಂಗಡಿಗರಿಂದ ಸಂಗೀತ ಸಂಭ್ರಮ, ಅಕ್ಟೋಬರ್ 17-ಕು|| ಅಹಿಕಾ ನಾಗದೀಪ್ ಮತ್ತು ಸಂಗಡಿಗರಿಂದ ವೀಣಾ ವಾದನ, ಅಕ್ಟೋಬರ್ 18-ಲಲಿತ ಕಲಾ ಕೇಂದ್ರದ ಮಕ್ಕಳಿಂದ ಭರತನಾಟ್ಯ, ಅಕ್ಟೋಬರ್ 19-ಶ್ರೀಮತಿ ಗಿರಿಜಾ ಶ್ಯಾಮಣ್ಣ ಮತ್ತು ಸಂಗಡಿಗರಿಂದ ದೇವರನಾಮಗಳು, ಅಕ್ಟೋಬರ್ 20-ಮಾಯಾ ಖರ ಭಕ್ತಿ ವೃಂದದವರಿಂದ ಸಂಗೀತ ಮತ್ತು ಅಕ್ಟೋಬರ್ 21ರಂದು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಶ್ರೀ ಗಣಪತಿ ಮತ್ತು ಶ್ರೀಅಮ್ಮನವರ ಮೆರವಣಿಗೆಯ ಉತ್ಸವ ಜರುಗುತ್ತವೆ ಎಂದು ದೇವಸ್ಥಾನದ ಪದಾಧಿಕಾರಿಗಳು ತಿಳಿಸಿದ್ದಾರೆ.

## ಶ್ರೀಮತಿ ಹೆಚ್.ಎಸ್.ಪ್ರತಿಮಾ ಹಾಸನ್‌ಗೆ ಕರ್ನಾಟಕ ವೈಭವ ರತ್ನ ಪ್ರಶಸ್ತಿಗೆ ಆಯ್ಕೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು 10:10:2026ರಂದು ರವೀಂದ್ರ ಕಲಾ ಕ್ಷೇತ್ರದಲ್ಲಿ ನಿತ್ಯೋತ್ಸವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘ(ರಿ) ದ ವತಿಯಿಂದ ಪ್ರತಿ ವರ್ಷ ಕೊಡ ಮಾಡುವ ಪ್ರತಿಷ್ಠಿತ ರಾಜ್ಯಮಟ್ಟದ ' ಕರ್ನಾಟಕ ವೈಭವರತ್ನ ಪ್ರಶಸ್ತಿಗೆ ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್ ರವರನ್ನು ಆಯ್ಕೆ ಮಾಡಲಾಗಿದೆ. ಇವರು ಹಾಸನ ನಗರದ ಸಾಹಿತಿಗಳು, ಶಿಕ್ಷಕರು, ಸಮಾಜ ಸೇವಕರು, ಹಲವಾರು ಸಂಘ ಸಂಸ್ಥೆಗಳಲ್ಲಿ ಜಿಲ್ಲೆ, ರಾಜ್ಯ ಮಟ್ಟದಲ್ಲಿ ಪದಾಧಿಕಾರ ಪಡೆದು ಜನಮೆಚ್ಚುಗೆಯ ಕಾರ್ಯಗಳನ್ನು ಮಾಡಿ ಮೆಚ್ಚುಗೆ ಪಡೆದು ಹೀಗಾಗಲೇ ನೂರಾರು ಪ್ರಶಸ್ತಿ ಪಡೆದು ಹಾಸನದ ಹೆಮ್ಮೆಯ ಪುತ್ರಿಯಾಗಿ ಗುರುತಿಸಿಕೊಂಡಿದ್ದು. ಎಲ್ಲಾಕ್ಷೇತ್ರಗಳಲ್ಲೂ ಸಾಧನೆಯನ್ನು ಮಾಡಿದ್ದು ಸಾಹಿತ್ಯ ಕ್ಷೇತ್ರಕ್ಕೆ 13 ಕ್ಕೂ ಹೆಚ್ಚು ಹಲವು ಪ್ರಕಾರದ ಕೃತಿಯನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇವರ ಕೃತಿಯನ್ನು ರಾಜ್ಯದ ಹಲವಾರು ಜಿಲ್ಲೆಯಲ್ಲಿ ಬಿಡುಗಡೆ ಮಾಡಿದ್ದು ವಿಶೇಷವಾಗಿ ಗಡಿನಾಡಿನಲ್ಲಿ ಇವರ ಕೃತಿ ಬಿಡುಗಡೆ ಮಾಡಿದ್ದಾರೆ. ಇವರು ಆಶು ಕವಿತ್ರಿಯಾಗಿ ಸಾಹಿತ್ಯದ ನವಿಲು ಎಂದು ಬಿರುದು ಪಡೆದು ಹೆಸಾರುವಾಸಿಯಾಗಿದ್ದಾರೆ .

ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್ ರವರ ಬಹುಮುಖ ಪ್ರತಿಭೆ ಹಾಗೂ ಸದಾ ಕ್ರಿಯಾಶೀಲರಾಗಿರುವುದನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಒಟ್ಟಾರೆ ಸಾಹಿತ್ಯದ ನವಿಲು' 'ಮಹಿಳಾ ಸಾಧಕಿ', 'ಬಹುಮುಖ



ಉದಯವಾಹಿನಿ ಚಿತ್ರ

ಪ್ರತಿಭೆ'ಎಂದು ಬಿರುದು ಪಡೆದಿರುವ ' ಅಧ್ಯಕ್ಷರು 'ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ (ರಿ ) ರಾಜ್ಯ ಮಟ್ಟ ಹಾಗೂ , ಉತ್ತಮ ಸಂಘಟಕಿ, ಬರಹಗಾರರಾಗಿ, ಲೇಖಕಿ, ಖ್ಯಾತ ಕವಿಯಿತ್ರಿ ಸಾಹಿತಿ, ಶಿಕ್ಷಕಿ, ಸಾಮಾಜಿಕ ಚಿಂತಕಿ, ಸಮಾಜ ಸೇವಕಿ, ಪತ್ರಕರ್ತೆಯಾದ , ಶ್ರೀಮತಿ ಹೆಚ್.ಎಸ್ ಪ್ರತಿಮಾ ಹಾಸನ್ ರವರನ್ನು ಕಾರ್ಯಕ್ರಮದಲ್ಲಿ ಪ್ರತಿಷ್ಠಿತ ಕರ್ನಾಟಕ ವೈಭವ ರತ್ನ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಗುವುದು ಎಂದು ಸಂಘದ ಅಧ್ಯಕ್ಷರು ಶ್ರೀಮತಿ ನಿತ್ಯಾ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಶಸ್ತಿ ಪಡೆಯುತ್ತಿರುವ ಶ್ರೀಮತಿ ಹೆಚ್. ಎಸ್. ಪ್ರತಿಮಾ ಹಾಸನ್ ಅವರಿಗೆ ಆರೋಗ್ಯ ಇಲಾಖೆಯ ಶ್ರೀ ಹೆಚ್. ಎಸ್. ಮಂಜುನಾಥ್, ತಾಯಿ ನೀಲಮ್ಮ ಸುರೇಶ್, ಶ್ರೀರಾಮ ಸೇನೆಯ ಪದಾಧಿಕಾರಿಗಳು, ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ ಪದಾಧಿಕಾರಿಗಳು, ಕದಂಬ ಸೇನೆಯ ಪದಾಧಿಕಾರಿಗಳು,ಇನ್ನು ಹಲವಾರು ಸಂಘ-ಸಂಸ್ಥೆಯ ಅಧ್ಯಕ್ಷರುಗಳು, ಪತ್ರಕರ್ತರು, ಹಿರಿಯ ಕಿರಿಯ ಸಾಹಿತಿಗಳು, ಸಮಾಜ ಸೇವಕರು ಇನ್ನೂ ಹಲವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಸುರಂಗ ರಸ್ತೆಗಾಗಿ ಭೂಮಿಗಾಗಿ ಪರದಾಟ: ಯೋಜನೆಯ ಅನುಷ್ಠಾನ ಮತ್ತಷ್ಟು ವಿಳಂಬ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾದ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಅವಳಿ ಸುರಂಗ ರಸ್ತೆ ನಿರ್ಮಾಣವು ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ. ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ, ಲಾಲ್‌ಬಾಗ್ ಬೊಟಾನಿಕಲ್ ಗಾರ್ಡನ್ ತಪ್ಪಿಸುವ ಸಲುವಾಗಿ ಸುರಂಗ ಮಾರ್ಗವನ್ನು ಬದಲಾಯಿಸಲು ಸರ್ಕಾರವು ಅನಿವಾರ್ಯವಾಗಿ ಮುಂದಾಯಿತು. ಈ ಯೋಜನೆಗೆ ಪರ್ಯಾಯ ಮಾರ್ಗವನ್ನು ರೂಪಿಸಲು ಸೂಕ್ತವಾದ ಭೂಮಿಯನ್ನು ಕಂಡುಕೊಳ್ಳಲು ಸರ್ಕಾರಿ ಸಂಸ್ಥೆಗಳಿಗೆ ಇನ್ನೂ ಸಾಧ್ಯವಾಗಿಲ್ಲ. ನಗರಾಭಿವೃದ್ಧಿ ಇಲಾಖೆ ಮತ್ತು ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಮೂಲಗಳ ಪ್ರಕಾರ, ಯೋಜನೆಯು ಮತ್ತೆ ಹಳಿ ತಪ್ಪದಂತೆ ನೋಡಿಕೊಳ್ಳುವಂತಹ ಸೂಕ್ತ ಪರ್ಯಾಯ ಭೂಮಿಯನ್ನು ಹುಡುಕುವುದೇ ಈಗಿರುವ ದೊಡ್ಡ ಸವಾಲಾಗಿದೆ. ಸುರಂಗ ರಸ್ತೆ ಯೋಜನೆಯನ್ನು ಕೇವಲ ನಾಗರಿಕರು ಮಾತ್ರ ವಿರೋಧಿಸುತ್ತಿಲ್ಲ, ಬದಲಿಗೆ ಅನೇಕ ಸರ್ಕಾರಿ ಸಂಸ್ಥೆಗಳು ಕೂಡ ಇದರ ಪರವಾಗಿಲ್ಲ. ಭೂಮಿಗಾಗಿ ಶಿಕ್ಷಣ, ಆರೋಗ್ಯ ಮತ್ತು ಪೊಲೀಸ್ ಇಲಾಖೆಯಂತಹ ಇತರ ಸರ್ಕಾರಿ ಇಲಾಖೆಗಳೊಂದಿಗೆ ಸಹಕರಿಸಲು ಮತ್ತು ಸಮನ್ವಯ ಸಾಧಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಯೋಜನೆಗಾಗಿ ತಮ್ಮ ಭೂಮಿಯನ್ನು ಬಿಟ್ಟುಕೊಡಲು ಯಾರೂ ಆಸಕ್ತಿ ತೋರುತ್ತಿಲ್ಲ, ಆದರೆ ಯೋಜನೆಯ ಅನುಷ್ಠಾನದ ಸಮಯವು ವೇಗವಾಗಿ ಕಳೆದುಹೋಗುತ್ತಿದೆ ಎಂದು ಮೂಲವೊಂದು ತಿಳಿಸಿದೆ.


ಉದಯವಾಹಿನಿ ಚಿತ್ರ

## ಪ್ರಧಾನಿ ನರೇಂದ್ರ ಮೋದಿಯವರ 'ಅಂತ್ಯೋದಯ' ತತ್ವವು ಎಲ್ಲರಿಗೂ ಸ್ಫೂರ್ತಿಯಾಗಿದೆ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆಯನ್ನು ಶ್ಲಾಘಿಸಿದ ಹಿರಿಯ ಬಿಜೆಪಿ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, 'ಅಂತ್ಯೋದಯ' (ಎಲ್ಲರನ್ನೂ ಉನ್ನತೀಕರಿಸುವ) ತತ್ವದ ಆಧಾರದ ಮೇಲಿರುವ ಮೋದಿ ಅವರ ನಾಯಕತ್ವವು ಸ್ಫೂರ್ತಿಯಾಗಿದೆ ಎಂದು ಬುಧವಾರ ಬಣ್ಣಿಸಿದರು. ಇಲ್ಲಿ ನಡೆದ 'ಸೇವಾ ಸಂಕಲ್ಪ' ಅಭಿಯಾನದ


ಉದಯವಾಹಿನಿ ಚಿತ್ರ

ಭಾಗವಾಗಿ ಆಯೋಜಿಸಲಾಗಿದ್ದ 'ಸೇವಾ ಜ್ಯೋತಿ ಯಾತ್ರೆ'ಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯರಾದ ಯಡಿಯೂರಪ್ಪ, ಮೋದಿ ಅವರ ಸಾಧನೆಗಳು ಮತ್ತು ಸೇವಾ ಚಟುವಟಿಕೆಗಳು ಪಕ್ಷದ ಕಾರ್ಯಕರ್ತರಿಗೆ ದಾರಿದೀಪವಾಗಿವೆ ಎಂದು ಹೇಳಿದರು.'ನರೇಂದ್ರ ಮೋದಿ ಅವರು ಸಾರ್ವಜನಿಕ ಜೀವನದಲ್ಲಿ 25 ವರ್ಷಗಳ ಅರ್ಥಪೂರ್ಣ ಸೇವೆಯನ್ನು ಪೂರೈಸುತ್ತಿರುವ ಸಂದರ್ಭ ಇದಾಗಿದೆ. ಈ ಅವಧಿಯಲ್ಲಿ, 'ಸೇವಾ ಸಂಕಲ್ಪ' ಅಭಿಯಾನದ ಮೂಲಕ ನಾವೆಲ್ಲರೂ ರಾಷ್ಟ್ರಕ್ಕೆ ಅವರು ಸಲ್ಲಿಸಿರುವ ಸೇವೆಯನ್ನು ಸ್ಮರಿಸುತ್ತಿದ್ದೇವೆ ಮತ್ತು ಸಂಭ್ರಮಿಸುತ್ತಿದ್ದೇವೆ ಎಂದರು. ಗುಜರಾತ್ ಮುಖ್ಯಮಂತ್ರಿಯಾಗಿ ಸುಮಾರು 13 ವರ್ಷ ಮತ್ತು ಕಳೆದ 12 ವರ್ಷಗಳಿಂದ ಪ್ರಧಾನ ಮಂತ್ರಿಯಾಗಿ, ಮೋದಿ ಅವರು ಒಟ್ಟು 25 ವರ್ಷಗಳ ನಿರಂತರ ಸಾರ್ವಜನಿಕ ಸೇವೆಯನ್ನು ಪೂರೈಸಿದ್ದಾರೆ ಎಂದು ಅವರು ತಿಳಿಸಿದರು.

# ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ SIR ಪ್ರಕ್ರಿಯೆಗೆ ವೇಗ

### 1,117 ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳ ನೇಮಕದೊಂದಿಗೆ ಇದೀಗ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಧಿಕಾರಿಗಳ ಸಂಖ್ಯೆ 1,193ಕ್ಕೆ ಏರಿಕೆಯಾಗಿದೆ.

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಮತದಾರರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಆಯ್ದು ತೆಗೆದುಹಾಕಲಾಗುತ್ತಿದೆ ಎಂಬ ಆರೋಪಗಳು ಹಾಗೂ ರಾಜಕೀಯ ಪಕ್ಷಗಳಿಂದ ಪೊಲೀಸ್ ದೂರುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ,

**1** ಆಗಸ್ಟ್ 24, 2026: ಕರಡು ಮತದಾರರ ಪಟ್ಟಿ ಪ್ರಕಟಣೆ

**2** ಆಗಸ್ಟ್ 24ರಿಂದ ಸೆಪ್ಟೆಂಬರ್ 23ರವರೆಗೆ: ಹಕ್ಕುಗಳು ಮತ್ತು ಆಕ್ಷೇಪಣೆ ಸಲ್ಲಿಕೆ ಅವಧಿ

**3** ಆಗಸ್ಟ್ 24ರಿಂದ ಅಕ್ಟೋಬರ್ 22ರವರೆಗೆ: ಹಕ್ಕುಗಳು ಮತ್ತು ಆಕ್ಷೇಪಣೆಗಳ ವಿಲೇವಾರಿ

**4** ಅಕ್ಟೋಬರ್ 27, 2026: ಅಂತಿಮ ಮತದಾರರ ಪಟ್ಟಿ ಪ್ರಕಟಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಹೆಚ್ಚುವರಿಯಾಗಿ 1,117 ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಮತದಾರರ ಪಟ್ಟಿಯ ಎಸ್‌ಐಆರ್‌ಗೆ ಸಂಬಂಧಿಸಿದ ಹಕ್ಕುಗಳು ಮತ್ತು ಆಕ್ಷೇಪಣೆಗಳ ಕುರಿತು ವಿಶೇಷ ಆಯುಕ್ತೆ (ಚುನಾವಣೆ) ಶಿಲ್ಪಾ ನಾಗ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗಾಗಿ ಜಿಬಿಎ ವ್ಯಾಪ್ತಿಯಲ್ಲಿ 814 ವಿಚಾರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 1,117 ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳ ನೇಮಕದೊಂದಿಗೆ ಇದೀಗ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಧಿಕಾರಿಗಳ ಸಂಖ್ಯೆ 1,193ಕ್ಕೆ ಏರಿಕೆಯಾಗಿದೆ.


ಉದಯವಾಹಿನಿ ಚಿತ್ರ

ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಿಚಾರಣೆ ಪ್ರಕ್ರಿಯೆಗಾಗಿ ಚುನಾವಣಾ ಆಯೋಗವು ಪ್ರಮಾಣಿತ ಕಾರ್ಯಾಚರಣಾ ವಿಧಾನ

(ಎಸ್‌ಒಪಿ) ರೂಪಿಸಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ 'ಮ್ಯಾಪ್ ಮಾಡಲಾಗಿಲ್ಲ' ಅಥವಾ 'ತಾರ್ಕಿಕ ವ್ಯತ್ಯಾಸ' ಎಂದು ಉಲ್ಲೇಖಿಸಿ ನೋಟಿಸ್ ನೀಡಿದ್ದರೆ, ಅಥವಾ ನಮೂನೆ-6 ಮತ್ತು ನಮೂನೆ-7ಕ್ಕೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ಅಗತ್ಯವಿದ್ದರೆ, ಮತದಾರರ ನೋಂದಣಿ ಅಧಿಕಾರಿಗಳು ಅಥವಾ ಮತಗಟ್ಟೆ ಮಟ್ಟದ ಅಧಿಕಾರಿಗಳು ಮತದಾರರ ಮನೆಗೆ ತೆರಳಿ ಅಗತ್ಯ ದಾಖಲೆಗಳನ್ನು ಪಡೆದು, ಪರಿಶೀಲನೆ ನಡೆಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಿದ್ದಾರೆ. ಎಸ್‌ಐಆರ್ ದತ್ತಾಂಶದ ಪ್ರಕಾರ ಜಿಬಿಎ ವ್ಯಾಪ್ತಿಯಲ್ಲಿ

> ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅರ್ಹರೆಲ್ಲರನ್ನೂ ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ವಿಶೇಷ ಅಭಿಯಾನಗಳು ಹಾಗೂ ಶಿಬಿರಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು- ಶಿಲ್ಪಾ ನಾಗ್

**ನಿರ್ಧಾರದಂತೆ ವಿಚಾರಣಾ ಪ್ರಕ್ರಿಯೆ**

ಹೀಗಾಗಿ ಇಂತಹ ಮತದಾರರು ವಿಚಾರಣೆಗೆ ಖುದ್ದಾಗಿ ಹಾಜರಾಗುವ ಅಗತ್ಯವಿಲ್ಲ. ವಿಶೇಷ ಸಂದರ್ಭಗಳಲ್ಲಿ ಮತದಾರರ ನೋಂದಣಿ ಅಧಿಕಾರಿಗಳ ನಿರ್ಧಾರದಂತೆ ವಿಚಾರಣಾ ಪ್ರಕ್ರಿಯೆಯನ್ನು ಆನ್‌ಲೈನ್‌ನಲ್ಲಿಯೂ ನಡೆಸಲಾಗುತ್ತದೆ

56 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ಈ ಪೈಕಿ 24 ಲಕ್ಷಕ್ಕೂ ಹೆಚ್ಚು ನೋಟಿಸ್‌ಗಳನ್ನು ನೀಡಲಾಗಿದೆ. ನೋಟಿಸ್‌ಗಳನ್ನೂ ಈಗಾಗಲೇ ತಲುಪಿಸಲಾಗಿದ್ದು, ಯಾವುದೇ ಕಾರಣಕ್ಕೂ ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಪ್ರಸ್ತುತ 3,70,329 ನೋಟಿಸ್‌ಗಳ ವಿಚಾರಣೆ ಬಾಕಿ ಉಳಿದಿದೆ. ನಿಗದಿತ ಅವಧಿಯೊಳಗೆ ವಿಚಾರಣೆ ಪ್ರಕ್ರಿಯೆ ಪೂರ್ಣಗೊಳಿಸಲು ಸೂಕ್ಷ್ಮ ಯೋಜನೆ ರೂಪಿಸಲಾಗಿದೆ.ಇದುವರೆಗೆ ನಮೂನೆ-6, 7 ಮತ್ತು 8ಕ್ಕೆ ಸಂಬಂಧಿಸಿದ ಒಟ್ಟು 5,42,893 ಅರ್ಜಿಗಳು ಸ್ವೀಕರಿಸಲಾಗಿದೆ. ಈ ಪೈಕಿ 1,02,712 ಅರ್ಜಿಗಳನ್ನು ಅಂಗೀಕರಿಸಲಾಗಿದ್ದು, 3,89,698 ಅರ್ಜಿಗಳು ಬಾಕಿ ಉಳಿದಿವೆ. ಬಾಕಿ ಇರುವ ಅರ್ಜಿಗಳನ್ನು ಚುನಾವಣಾ ಆಯೋಗದ ನಿಯಮಗಳಂತೆ ಪರಿಶೀಲಿಸಿ ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.18 ವರ್ಷ ಪೂರ್ಣಗೊಳಿಸಿರುವ ಹಾಗೂ ಮೊದಲ ಬಾರಿಗೆ ಮತದಾರರಾಗಿ ನೋಂದಾಯಿಸಿಕೊಳ್ಳಲು ಅರ್ಹರಾಗಿರುವವರಿಗೆ ನಮೂನೆ-6 ಒದಗಿಸಬೇಕು.

ಬಿ.ಸಿ. ರೋಡ್‌ನಿಂದ ಬೆಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 75 ಹಾಗೂ ಪುಂಜಾಲಕಟ್ಟೆ–ಚಾರ್ಮಾಡಿ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ

# ಬ್ರಹ್ಮರಕೂಟ್ಲು ಟೋಲ್ ಪ್ಲಾಝಾ ಶಾಶ್ವತ ಬಂದ್: ಸಂಸದ ಕ್ಯಾ. ಬ್ರಿಜೇಶ್ ಚೌಟ

**ಉದಯವಾಹಿನಿ, ಬಂಟ್ವಾಳ**

ದಕ್ಷಿಣ ಕನ್ನಡ ಜಿಲ್ಲೆಯ ವಾಹನ ಸವಾರರ ಬಹುಕಾಲದ ತಲೆನೋವಾಗಿರುವ ಬ್ರಹ್ಮರಕೂಟ್ಲು ಟೋಲ್ ಪ್ಲಾಜಾವನ್ನು ಶಾಶ್ವತವಾಗಿ ರದ್ದುಪಡಿಸಲಾಗುವುದು ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಭರವಸೆ ನೀಡಿದ್ದಾರೆ.

1.ತಲೆನೋವಾಗಿರುವ ಬ್ರಹ್ಮರಕೂಟ್ಲು ಟೋಲ್ ಪ್ಲಾಜಾ
2.66 ಕೋಟಿ ವೆಚ್ಚದ ರಾಷ್ಟ್ರೀಯ ಹೆದ್ದಾರಿ
3.ಫೋರ್ ಲೈನ್ ಹೆದ್ದಾರಿ ನಿರ್ಮಾಣ

ಬಿ.ಸಿ. ರೋಡ್‌ನಿಂದ ಬೆಂಗಳೂರು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 75 ಹಾಗೂ ಪುಂಜಾಲಕಟ್ಟೆ–ಚಾರ್ಮಾಡಿ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 73ರ ಕಾಮಗಾರಿಗಳು ಪೂರ್ಣಗೊಂಡು ಹೊಸ ವ್ಯವಸ್ಥೆ ಜಾರಿಗೆ ಬರುವ ಮುನ್ನವೇ ಬ್ರಹ್ಮರಕೂಟ್ಲು ಟೋಲ್ ಸಂಗ್ರಹವನ್ನು ಸಂಪೂರ್ಣವಾಗಿ ಮುಚ್ಚಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಬುಧವಾರ ಬಿ. ಸಿ. ರೋಡ್‌ನಲ್ಲಿ ಒಟ್ಟು 66 ಕೋಟಿ ವೆಚ್ಚದ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಹಾಗೂ ನಿರ್ವಹಣಾ ಕಾಮಗಾರಿಗಳ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ಹೆದ್ದಾರಿ ಅಭಿವೃದ್ಧಿ ಹಾಗೂ ಟೋಲ್ ವಿವಾದದ ಕುರಿತು ಮಹತ್ವದ ಹೇಳಿಕೆ ನೀಡಿದರು.

"ಈಗಾಗಲೇ ಹೆದ್ದಾರಿ ಸಚಿವರು, ಟೋಲ್ ಸಮಿತಿ ಹಾಗೂ ಹೆದ್ದಾರಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳ ಜತೆ ಈ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದೇನೆ. ಹೆದ್ದಾರಿ ಕಾಮಗಾರಿಗಳು ಒಂದು ಹಂತಕ್ಕೆ ಬಂದು



ಉದಯವಾಹಿನಿ ಚಿತ್ರ

ಹೊಸ ಟೋಲ್ ಆರಂಭವಾಗುವ ಮೊದಲೇ ಬ್ರಹ್ಮರಕೂಟ್ಲು ಟೋಲ್ ಗೇಟ್ ಕ್ಲೋಸ್ ಆಗಲಿದೆ. ಈ ವಿಚಾರದಲ್ಲಿ ಯಾರೂ ಅನಗತ್ಯವಾಗಿ ನಾಟಕವಾಡಿ ರಾಜಕೀಯ ಕ್ರೆಡಿಟ್ ತೆಗೆದುಕೊಳ್ಳುವ ಅಗತ್ಯವಿಲ್ಲ. ಇದನ್ನು ರದ್ದುಪಡಿಸುವುದು ನಮ್ಮ ನಿಶ್ಚಿತ ಸಂಕಲ್ಪ" ಎಂದು ಸಂಸದರು ತಿಳಿಸಿದರು.

**ಬಿ.ಸಿ. ರೋಡ್‌ನಲ್ಲಿ 66 ಕೋಟಿ ಹೆದ್ದಾರಿ ಕಾಮಗಾರಿಗೆ ಚಾಲನೆ:** ಬಿ.ಸಿ. ರೋಡ್‌ನ ನಾರಾಯಣ ಗುರು ವೃತ್ತದಿಂದ ಬಿಲ್ಲವ ಸಮಾಜ ಸೇವಾ ಸಂಘದ ಮಂದಿರದವರೆಗಿನ ಹಲವು ವರ್ಷಗಳಿಂದ ಬಾಕಿಯಿದ್ದ ಹೆದ್ದಾರಿ ಭಾಗವನ್ನು 22.59 ಕೋಟಿ ವೆಚ್ಚದಲ್ಲಿ ಪೂರ್ಣ ಪ್ರಮಾಣದ ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಯಿತು.ಹೆದ್ದಾರಿ ನಿರ್ವಹಣಾ ವೆಚ್ಚ 34.53 ಕೋಟಿ: ಎನ್ ಹೆಚ್ 73ರ ವ್ಯಾಪ್ತಿಯ ರಸ್ತೆಗಳ ಸಮಗ್ರ ನಿರ್ವಹಣೆ ಹಾಗೂ ದುರಸ್ತಿ ಕಾಮಗಾರಿಗಳಿಗಾಗಿ 34.53 ಕೋಟಿ ಅನುದಾನ ಬಿಡುಗಡೆಯಾಗಿದ್ದು,

> ಪ್ರಧಾನಿ ನರೇಂದ್ರ ಮೋದಿ ಅವರ 25 ವರ್ಷಗಳ ಜನಸೇವೆಯ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಪಕ್ಷ ಬದ್ಧವಾಗಿದೆ.
>
> – ಕ್ಯಾ. ಬ್ರಿಜೇಶ್ ಚೌಟ, ಸಂಸದ

### ತಲಪಾಡಿ–ಕುಂದಾಪುರ ಸರ್ವಿಸ್ ರಸ್ತೆ

**ತಲಪಾಡಿ–ಕುಂದಾಪುರ ಸರ್ವಿಸ್ ರಸ್ತೆ: ತಲಪಾಡಿಯಿಂದ ಕುಂದಾಪುರದವರೆಗಿನ ಸಂಪೂರ್ಣ ಹೆದ್ದಾರಿಗೆ ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಈಗಾಗಲೇ ಅನುಮೋದನೆ ದೊರೆತಿದ್ದು, ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ.**

ಒಟ್ಟಾರೆ 66 ಕೋಟಿ ರೂಪಾಯಿಯ ಕಾಮಗಾರಿಗಳು ಆರಂಭಗೊಂಡಿವೆ ಎಂದವರು ತಿಳಿಸಿದರು.

**ಮಾಣಿ ಸಂಪಾಜೆ ಚತುಷ್ಪಥ ರಸ್ತೆ:** ಮಾಣಿಯಿಂದ ಸಂಪಾಜೆವರೆಗಿನ ರಸ್ತೆಯನ್ನು ನಾಲ್ಕು ಪಥಗಳನ್ನಾಗಿ ಮೇಲ್ದರ್ಜೆಗೇರಿಸಲು ಡಿಪಿಆರ್ ಹಾಗೂ ಅಲೈನ್‌ಮೆಂಟ್ ಅಂತಿಮ ಹಂತದಲ್ಲಿದೆ. ಈ ರಸ್ತೆಗೆ 50 ಕೋಟಿ ವೆಚ್ಚದ ನಿರ್ವಹಣಾ ಟೆಂಡರ್ ಕರೆಯಲಾಗಿದ್ದು, ಮಾಣಿಯಿಂದ ಸಂಪ್ಯದವರೆಗೆ ಸರ್ವಿಸ್ ರಸ್ತೆ ಹಾಗೂ ನಂತರ ಫೋರ್ ಲೈನ್ ಹೆದ್ದಾರಿ ನಿರ್ಮಾಣವಾಗಲಿದೆ. ಮುಂದಿನ ವರ್ಷದ ಆರಂಭದಲ್ಲಿ ಇದರ ಟೆಂಡರ್ ಪ್ರಕ್ರಿಯೆ ಮುಗಿಯುವ ನಿರೀಕ್ಷೆಯಿದೆ.ಕಾರ್ಯಕ್ರಮದಲ್ಲಿ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪಾಡಿಗುತ್ತು, ವಿಧಾನ ಪರಿಷತ್ ಶಾಸಕ ಕಿಶೋರ್ ಕುಮಾರ್ ಬೊಟ್ಯಾಡಿ, ಬಿಜೆಪಿ ಮುಖಂಡ ಚೆನ್ನಪ್ಪ ಕೋಟ್ಯಾನ್ ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುದ್ರೋಳಿ 'ಮಂಗಳೂರು ದಸರಾ'ಗೆ ಅ.12ರಂದು ಸಿಎಂ ಚಾಲನೆ

**ಉದಯವಾಹಿನಿ, ಮಂಗಳೂರು**

ಕರಾವಳಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹೆಮ್ಮೆಯ ಪ್ರತೀಕವಾದ ಐತಿಹಾಸಿಕ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಮಂಗಳೂರು ದಸರಾ ಹಾಗೂ ನವರಾತ್ರಿ ಮಹೋತ್ಸವ–2026ಕ್ಕೆ ಅಕ್ಟೋಬರ್ 12ರಂದು ಸಂಜೆ 6:30ಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ.

ಕ್ಷೇತ್ರದ ನವೀಕರಣದ ರೂವಾರಿ, ಕೇಂದ್ರದ ಮಾಜಿ ಸಚಿವ ಬಿ. ಜನಾರ್ದನ ಪೂಜಾರಿ ಅವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಅಕ್ಟೋಬರ್ 11ರಿಂದ 22ರವರೆಗೆ ಉತ್ಸವವು ಅತ್ಯಂತ ವೈಭವದಿಂದ ಜರುಗಲಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ದ.ಕ. ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ್, ವಿಧಾನಸಭೆಯ ಉಪಸಭಾಪತಿ ಮಂಕಾಳು ವೈದ್ಯ, ಸಂಸದರು, ಶಾಸಕರು ಸೇರಿದಂತೆ ರಾಜ್ಯ ಹಾಗೂ ನೆರೆಯ ಕೇರಳ ಸರ್ಕಾರದ ಸಚಿವರು, ಗಣ್ಯರು ಭಾಗವಹಿಸಲಿದ್ದಾರೆ ಎಂದು





ಉದಯವಾಹಿನಿ ಚಿತ್ರ

ಕುದ್ರೋಳಿ ದೇವಸ್ಥಾನದ ಕ್ಷೇತ್ರದ ಆಡಳಿತ ಸಮಿತಿಯ ಖಜಾಂಚಿ ಪದ್ಮರಾಜ್ ಆರ್. ಪೂಜಾರಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅ.11ರಂದು ಬೆಳಗ್ಗೆ 8:30ಕ್ಕೆ ಮಹಾನವಮಿ ಉತ್ಸವ ಆರಂಭಗೊಳ್ಳಲಿದ್ದು, ಮಧ್ಯಾಹ್ನ 12 ಗಂಟೆಗೆ ವೈದಿಕ ವಿಧಿ–ವಿಧಾನಗಳೊಂದಿಗೆ ಶ್ರೀ ಶಾರದಾ ಮಾತೆ, ಮಹಾಗಣಪತಿ, ಆದಿಶಕ್ತಿ ಹಾಗೂ ನವದುರ್ಗೆಯರ ವಿಗ್ರಹಗಳ ಪ್ರತಿಷ್ಠಾಪನೆ ನೆರವೇರಲಿದೆ. ಅಕ್ಟೋಬರ್ 21ರಂದು ಸಂಜೆ 4:00 ಗಂಟೆಗೆ ವಿಶ್ವವಿಖ್ಯಾತ ಐತಿಹಾಸಿಕ ಮಂಗಳೂರು ದಸರಾ ಶೋಭಾಯಾತ್ರೆ ಆರಂಭವಾಗಲಿದೆ. ಶ್ರೀ ಮಹಾಗಣಪತಿ, ಶ್ರೀ ಆದಿಶಕ್ತಿ, ನವದುರ್ಗೆಯರು ಹಾಗೂ ಜ್ಞಾನದಾಯಿನಿ ಶ್ರೀ ಶಾರದಾ ಮಾತೆಯ ನಯನಮನೋಹರ ಮೂರ್ತಿಗಳ ಪ್ರತಿಷ್ಠಾಪನೆ ನಡೆಯಲಿರುವ ದರ್ಬಾರ್ ಮಂಟಪವನ್ನು ಈ ಬಾರಿ ನೂತನ 'ಅರಮನೆ ಶೈಲಿ'ಯಲ್ಲಿ ಕಣ್ಮನ ಸೆಳೆಯುವಂತೆ ಅತ್ಯಂತ ಆಕರ್ಷಕವಾಗಿ ವಿನ್ಯಾಸಗೊಳಿಸಲಾಗುತ್ತಿದೆ ಎಂದರು.

> **ಸಮಾಜದ ವಿವಿಧ ರಂಗಗಳಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ 9 ಮಂದಿ ಸಾಧಕ ಮಹಿಳೆಯರಿಗೆ ಪ್ರತಿದಿನ ಒಬ್ಬರಂತೆ 'ಅಸಾಮಾನ್ಯ ಸ್ತ್ರೀ' ಪುರಸ್ಕಾರ ನೀಡಿ ಗೌರವಿಸಲಾಗುತ್ತದೆ. ಈ ಪ್ರಶಸ್ತಿಗೆ ನೂರಕ್ಕೂ ಹೆಚ್ಚು ನಾಮನಿರ್ದೇಶನಗಳು ಬಂದಿದ್ದು, ಪರಿಶೀಲಿಸಿ 9 ಸಾಧಕರನ್ನು ಆಯ್ಕೆ ಮಾಡಲಾಗಿದೆ.**
>
> – ಪದ್ಮರಾಜ್ ಆರ್. ಪೂಜಾರಿ, ಆಡಳಿತ ಸಮಿತಿಯ ಖಜಾಂಚಿ

## ರಾಹುಲ್ ಗಾಂಧಿ ಹೋರಾಟಕ್ಕೆ ಮಹತ್ವ ಇಲ್ಲ

**ಉದಯವಾಹಿನಿ, ಬಳ್ಳಾರಿ**

ದೇಶದ ವಿವಿಧ ಚುನಾವಣೆಗಳಲ್ಲಿ ಸತತ ಸೋಲುಗಳಿಂದ ಕಂಗೆಟ್ಟಿರೋ ಕಾಂಗ್ರೆಸ್ ಪಕ್ಷ ಕೊನೆಯದಾಗಿ ಎಸ್‌ಐಆರ್ ಅಸ್ತ್ರ ಬಳಸುತ್ತಿದೆ ಎಂದು ಬಿಜೆಪಿ ಮುಖಂಡ ಬಿ.ಶ್ರೀರಾಮುಲು ಹೇಳಿದ್ದಾರೆ. ನಗರದಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಸ್‌ಐಆರ್ ವಿಚಾರವನ್ನು ರಾಹುಲ್ ಗಾಂಧಿ ಟೋಲ್ ಕಿಟ್ ಆಗಿ ಬಳಸುತ್ತಿದ್ದಾರೆ. ವಿದೇಶದಲ್ಲಿ ದೇಶದ ಮರ್ಯಾದೆ ತೆಗೆಯುವ ನಾಯಕ ರಾಹುಲ್ ಗಾಂಧಿ ಮತ್ತು ಟೀಂ ಹೋರಾಟಕ್ಕೆ ದೇಶದ ಜನತೆ ಬೆಂಬಲ ಇಲ್ಲ ಎಂದರು. ಇವಿಎಂ ಸೇರಿದಂತೆ ಇನ್ನಿತರ ವಿಚಾರದಲ್ಲಿ ಗೊಂದಲ ಸೃಷ್ಟಿ ಮಾಡಿದ್ದಾಯ್ತು. ಇದೀಗ ಎಸ್‌ಐಆರ್ ವಿಚಾರ ಮುಂದಿಟ್ಟ ಗೊಂದಲ ಮೂಡಿಸುತ್ತಿದ್ದಾರೆ. ಎಸ್‌ಐಆರ್ ವಿಚಾರದಲ್ಲಿ ಫಾರಂ 7 ದುರ್ಬಳಕೆಯಾಗಿದೆಂಬ ಆರೋಪದ ಬಗ್ಗೆ ಉತ್ತರಿಸಿ. ಬಿಜೆಪಿಯವರು ಯಾರು ಕೂಡ ಫಾರಂ 7 ಅಡಿಯಲ್ಲಿ ಮತದಾರರ ಹೆಸರುಗಳನ್ನು ಡಿಲಿಟ್ ಮಾಡಲು ಹೇಳಿಲ್ಲಸಂವಿಧಾನದ ಪ್ರಕಾರವೇ ಮರುಪರಿಶೀಲನೆ ಮಾಡಿ ಎಂದು ಕೇಳಿದೆ ಅಷ್ಟೇ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ರಾಜ್ಯಾದ್ಯಂತ ಡ್ರಗ್ಸ್ ಸೇರಿದಂತೆ ಇತರೆ ಅಕ್ರಮ ಚಟುವಟಿಕೆ ಮಾಡೋರನ್ನು ಬಂಧಿಸೋದಿಲ್ಲ. ಪೊಲೀಸರ ಮೂಲಕ ಬಿಜೆಪಿ ನಾಯಕರ ಮೇಲೆ ಹಲ್ಲೆ ಮಾಡಿಸೋದು, ಕೇಸ್ ಹಾಕೋದು ಬಂಧಿಸೋ ಕೆಲಸ ಮಾಡ್ತಿದ್ದಾರೆಂದರು. ನಮಗೆ ಅಂಬೇಡ್ಕರ್ ಕಾನೂನು ಮತ್ತು ಸಂವಿಧಾನದ ಮೇಲೆ ಗೌರವ ಇದೆ. ಕಾಂಗ್ರೆಸ್ ಕಾನೂನು ಮೇಲೆ ಗೌರವ ಇಲ್ಲ.ಮತದಾರರ ಡಿಲಿಟ್ ಮಾಡೋದು ಸೇರಿಸೋದು ಅಧಿಕಾರಿಗಳ ಕೆಲಸ ನಾವು ಆಕ್ಷೇಪಣೆ ಮಾತ್ರ ಹಾಕಿದ್ದೇವೆ ಎಂದಿದ್ದಾರೆ.



## ಲೋಕಾ ಬಲೆಗೆ ಸರ್ವೇಯರ್ ಹನುಮಂತಪ್ಪ

**ಉದಯವಾಹಿನಿ, ಬಳ್ಳಾರಿ**

ನಗರದ ಲೇಔಟ್ ಡೆವಲಪರ್ ಅರವಿಂದ ಎನ್ನುವವರು ಲೇಔಟ್ ರಚನೆಗೆ ಅಗತ್ಯವಿದ್ದ ರಸ್ತೆಗಳ ಸರ್ವೇ ನಕಾಶೆ ನೀಡಲು 20 ಸಾವಿರ ರೂ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಇಲ್ಲಿನ ಸರ್ವೇ ಭೂಮಾಪನಾ ಇಲಾಖೆಯ ಸರ್ವೇಯರ್ ಹನುಮಂತಪ್ಪ 18 ಸಾವಿರ ರೂ ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ನಿನ್ನೆ ಸಂಜೆ ಬಂಧಿಸಿದ್ದಾರೆ. ನಗರದ ಹಳೆಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಕಚೇರಿಯಲ್ಲಿ ಸರ್ವೇಯರ್ ಹನುಮಂತಪ್ಪ ಲೋಕಾ ಯುಕ್ತ ಬಲೆಗೆ ಬಿದ್ದರು.

ಅರವಿಂದಅವರು ರಸ್ತೆ ಸರ್ವೇ ನಕ್ಷೆ ಪಡೆಯಲು ಸರ್ವೇ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಅದನ್ನು ನೀಡಲು ಹನುಮಂತಪ್ಪ 20 ಸಾವಿರ ರೂ ಲಂಚ ನೀಡುವಂತೆ ಕೋರಿದ್ದರಂತೆ. ಲಂಚ ನೀಡಲು ಇಚ್ಛಿಸದ ಅರವಿಂದ ಈ ಕುರಿತು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು. ಅವರ ದೂರಿನ ಮೇಲೆ ಕಾರ್ಯಾಚರಣೆ ನಡೆಸಿದ ಲೋಕಾ ಅಧಿಕಾರಿಗಳು. ಅರವಿಂದ ಅವರಿಂದ 18 ಸಾವಿರ ರೂ ನಗದು ಹಣದ ಲಂಚದ ಹಣ ಸ್ವೀಕರಿಸುತ್ತಿದ್ದಾಗ ಹನುಮಂತಪ್ಪ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಕಾರ್ಯಾ ಚರಣೆ ಯಲ್ಲಿ ಡಿವೈಎಸ್ಪಿ ಎಸ್.ಎಸ್. ಬೀಳಗಿ, ತನಿಖಾಧಿಕಾರಿ ಗುರಣ್ಣ ಹೆಬ್ಬಾಳ್, ಸಿಪಿಐ ಸುರೇಶ್ ಹಾಗು ಸಿಬ್ಬಂದಿ ಪಾಲ್ಗೊಂಡಿದ್ದರು.

# ನರ್ಸ್ ರಜೆ ಹಾಕಿದರೆ ಆರೋಗ್ಯ ಕೇಂದ್ರ ಬಂದ್

**ಉದಯವಾಹಿನಿ, ಶಿರಸಿ**

ತಾಲ್ಲೂಕಿನ ದೇವನಳ್ಳಿಯ ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆಯಿಂದಾಗಿ ಗ್ರಾಮೀಣ ಭಾಗದ ಸಾರ್ವಜನಿಕರು ತೀವ್ರ ತೊಂದರೆ ಎದುರಿಸುತ್ತಿದ್ದಾರೆ. ಈ ಕೇಂದ್ರದಲ್ಲಿ ಖಾಯಂ ವೈದ್ಯರಿಲ್ಲದೇ ಕೇವಲ ಒಬ್ಬರೇ ನರ್ಸ್ ಕಾರ್ಯನಿರ್ವಹಿಸುತ್ತಿದ್ದು, ದಿನನಿತ್ಯ ಬರುವ ಹಲವಾರು ರೋಗಿಗಳು ಸೂಕ್ತ ಚಿಕಿತ್ಸೆ ಸಿಗದೆ ಪರದಾಡುವಂತಾಗಿದೆ.ದೇವನಳ್ಳಿ ಹಾಗೂ ಅದರ ಸುತ್ತಮುತ್ತಲಿನ ಸುಮಾರು 10 ರಿಂದ 12 ಕಿಲೋಮೀಟರ್ ವ್ಯಾಪ್ತಿಯ ಹತ್ತಾರು ಗ್ರಾಮಗಳ 15 ಸಾವಿರಕ್ಕೂ ಹೆಚ್ಚು ಜನರಿಗೆ ಇದೇ ಮುಖ್ಯ ಆರೋಗ್ಯ ಕೇಂದ್ರ ಹಾಗೂ ಏಕೈಕ ವೈದ್ಯಕೀಯ ಆಸರೆಯಾಗಿದೆ. ಆದರೆ ಇಂತಹ ಪ್ರಮುಖ ಕೇಂದ್ರದಲ್ಲಿ ಕಳೆದ ಎರಡುವರೆ ವರ್ಷಗಳಿಂದ ವೈದ್ಯರಿಲ್ಲದಿರುವುದು ಈ ವ್ಯಾಪ್ತಿಯ ಜನರನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ. ಪ್ರಸ್ತುತ ಈ ಕೇಂದ್ರದಲ್ಲಿ ಕೇವಲ ಒಬ್ಬರೇ ನರ್ಸ್ ಕಾರ್ಯನಿರ್ವಹಿಸುತ್ತಿದ್ದು, ಇಡಿ ಆಸ್ಪತ್ರೆಯ ಜವಾಬ್ದಾರಿಯನ್ನು ಹೊರಬೇಕಾದ ಸ್ಥಿತಿ ಇದೆ.

'ತುರ್ತು ಚಿಕಿತ್ಸೆ, ಜ್ವರ, ಅಪಘಾತ ಅಥವಾ ವಿಷಪೂರಿತ ಕೀಟ ಕಡಿತದಂತಹ ತೀವ್ರತರದ ಆರೋಗ್ಯ ಸಮಸ್ಯೆಗಳು ಎದುರಾದಾಗ ಸಕಾಲದಲ್ಲಿ ವೈದ್ಯಕೀಯ ನೆರವು ಸಿಗುತ್ತಿಲ್ಲ. ಗರ್ಭಿಣಿಯರು, ವೃದ್ಧರು ಹಾಗೂ ಚಿಕ್ಕ ಮಕ್ಕಳು ಸಣ್ಣಪುಟ್ಟ ಕಾಯಿಲೆಗಳಿಗೂ 20 ಕಿಲೋಮೀಟರ್‌ಗೂ ಹೆಚ್ಚು ದೂರ ಪ್ರಯಾಣಿಸಿ ಶಿರಸಿ ನಗರದ ಆಸ್ಪತ್ರೆಗೆ ಅಲೆಯಬೇಕಾಗಿದೆ. ಇದರಿಂದ ಬಡ ಕುಟುಂಬಗಳಿಗೆ ಅನಗತ್ಯ ಸಾರಿಗೆ ವೆಚ್ಚ ಹಾಗೂ ಸಮಯ ವ್ಯರ್ಥವಾಗುತ್ತಿದ್ದು, ತುರ್ತು ಸಂದರ್ಭಗಳಲ್ಲಿ ರೋಗಿಗಳ ಜೀವಕ್ಕೆ ಅಪಾಯ ಉಂಟಾಗುವ ಭೀತಿಯೂ ಎದುರಾಗಿದೆ' ಎಂಬುದು ಸಾರ್ವಜನಿಕರ ಮಾತು.

'ಗ್ರಾಮೀಣ ಜನತೆಯ ಹಿತದೃಷ್ಟಿಯಿಂದ ತಕ್ಷಣ ದೇವನಳ್ಳಿ ಆರೋಗ್ಯ ಕೇಂದ್ರಕ್ಕೆ ಖಾಯಂ ವೈದ್ಯರನ್ನು ನೇಮಿಸಬೇಕು ಮತ್ತು ಅಗತ್ಯ ಔಷಧೀಯ ಸೌಲಭ್ಯ ಕಲ್ಪಿಸಬೇಕು' ಎಂದು ಗ್ರಾಮಸ್ಥ ನಾರಾಯಣ ಹೆಗಡೆ ಆಗ್ರಹವಾಗಿದೆ.



> **ಎಲ್ಲೆಡೆ ವೈದ್ಯರ ಕೊರತೆ ಇರುವುದರಿಂದ ಈ ಸಮಸ್ಯೆ ಉದ್ಭವಿಸಿದೆ. ಶೀಘ್ರದಲ್ಲೇ ಖಾಯಂ ವೈದ್ಯರ ನೇಮಕಾತಿ ಸಂಬಂಧಿಸಿದಂತೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ.**
>
> – ಮಧುಕರ ಪಾಟೀಲ, ಟಿಎಚ್‌ಒ

# ರೈತನಗರ ಕ್ಯಾಂಪ್‌ನಲ್ಲಿ ಸಾರ್ವಜನಿಕರ ರಸ್ತೆ ಅಭಿವೃದ್ಧಿ ಮರೀಚಿಕೆ

**ಉದಯವಾಹಿನಿ, ಸಿಂಧನೂರು**

ತಾಲ್ಲೂಕಿನ ರೈತ ನಗರ ಕ್ಯಾಂಪಿನಲ್ಲಿ ಸಾರ್ವಜನಿಕ ರಸ್ತೆಗಳ ಅಭಿವೃದ್ಧಿಪಡಿಸಲು ಬಿಡುಗಡೆ ಮಾಡಿದ್ದ ಅಂದಾಜು 86ಲಕ್ಷ ರೂಪಾಯಿ ಹಣವನ್ನು ತಮ್ಮ ವೈಯಕ್ತಿಕ ಮನೆಗಳನ್ನು ಸಂಪರ್ಕಿಸುವ ರಸ್ತೆಗಳಿಗೆ ಸಿಸಿ ರಸ್ತೆ ನಿರ್ಮಾಣ ಮಾಡಿಕೊಂಡು ಸರ್ಕಾರ ಹಣ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಸರ್ಕಾರ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡರೆ ಅವುಗಳು ಸಾರ್ವಜನಿಕರ ಬಳಕೆಗೆ ಬರಬೇಕು ಎಂಬುವುದು ಸರ್ಕಾರದ ಆಶಯ. ತಾಲ್ಲೂಕಿನ ರೈತ ನಗರ ಕ್ಯಾಂಪಿನ ಸಾರ್ವಜನಿಕ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಹಣ ಬಿಡುಗಡೆ ಮಾಡಿದರೆ ಅದನ್ನು ತಮ್ಮ ತಮ್ಮ ವೈಯಕ್ತಿಕ ಮನೆಗಳ ರಸ್ತೆಗಳ ಅಭಿವೃದ್ಧಿ ಬಳಸಿಕೊಂಡು ಸರ್ಕಾರ ಹಣವನ್ನು ದುರಪಯೋಗವಾಗಿದೆ.

ಕೆಕೆಆರ್‌ಡಿಬಿಯಿಂದ 2023–24ನೇ 56ಲಕ್ಷ ರೂಪಾಯಿ ಮತ್ತು 2025–26ನೇ ಸಾಲೀನಲ್ಲಿ 30ಲಕ್ಷ ರೂಪಾಯಿಗಳ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು. ಸಾರ್ವಜನಿಕರು ಬಳಿಸುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಹಣ ನೀಡಿದರೆ, ರೈತ ನಗರ ಕ್ಯಾಂಪಿನಲ್ಲಿ ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ತಮ್ಮ ತಮ್ಮ ಮನೆಗಳನ್ನು ಸಂಪರ್ಕಿ ಸುವ ಅದು ಮತ್ತೆ ತಮ್ಮ ಕಂಪೌಂಡನಲ್ಲಿರುವ ರಸ್ತೆಯನ್ನು ಅಭಿವೃದ್ಧಿ ಪಡಿಸಿಕೊಂಡು ಸರ್ಕಾರ ಹಣವನ್ನು ದುರಪಯೋಗಪಡಿಸಿಕೊಂಡಿದ್ದಾರೆ.

### ಕ್ರಮಕ್ಕೆ ಆಗ್ರಹ

**ಈ ಕುರಿತು ಸಾರ್ವಜನಿಕ ಹಣವನ್ನು ದೂರುಪಯೋಗಪಡಿಸಿಕೊಂಡಿರುವ ಮತ್ತು ಕಳಪೆ ಕಾಮಗಾರಿ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದು. ಲೋಕಾಯುಕ್ತ ಸೂಕ್ತ ತನಿಖೆ ತಪ್ಪಿತಸ್ಥರ ವಿರುದ್ಧ ಕಾನೂನು ಅಡಿಯಲ್ಲಿ ಕಮಕೈಗೊಳ್ಳಬೇಕು ಎಂದು ದಲಿತ ಮುಖಂಡ ಫಾಂಚೈಸಿ ಒತ್ತಾಯಿಸಿದ್ದಾರೆ.**



ಉದಯವಾಹಿನಿ ಚಿತ್ರ

ಮಳೆ ಕೊರತೆಯಿಂದ ಬೆಳೆ ಹಾನಿಗೊಳಗಾದ ಬಳ್ಳಾರಿ ತಾಲ್ಲೂಕಿನ ಹಲ್ಕುಂದಿ ಗ್ರಾಮದ ಪ್ರದೇಶಗಳಿಗೆ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್

# ಬರಪೀಡಿತ ಪ್ರದೇಶಗಳಿಗೆ ಡಿಸಿಎಂ ಪರಮೇಶ್ವರ್ ಭೇಟಿ: ಪರಿಹಾರಕ್ಕೆ ರೈತರ ಮನವಿ

**ಉದಯವಾಹಿನಿ, ಬಳ್ಳಾರಿ**

ಮಳೆ ಕೊರತೆಯಿಂದ ಬೆಳೆ ಹಾನಿಗೊಳಗಾದ ಬಳ್ಳಾರಿ ತಾಲ್ಲೂಕಿನ ಹಲ್ಕುಂದಿ ಗ್ರಾಮದ ಪ್ರದೇಶಗಳಿಗೆ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಭೇಟಿ ನೀಡಿ ಬರ ಪರಿಸ್ಥಿತಿ ಪರಿಶೀಲಿಸಿದರು. ಈ ವೇಳೆ, ರೈತರೊಂದಿಗೆ ಚರ್ಚಿಸಿ, ಬೆಳೆ ನಷ್ಟ ಹಾಗೂ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.ಹಲ್ಕುಂದಿ ಗ್ರಾಮದ ಬಳಿ ರೈತ ದುರ್ಗಣ್ಣ ಅವರ ತೊಗರಿ ಬೆಳೆ ವೀಕ್ಷಿಸಿದ ಡಿಸಿಎಂ, ಮಳೆ ಕೊರತೆಯಿಂದ ಬೆಳೆ ಹಾನಿಯಾಗಿರುವುದನ್ನು ಪರಿಶೀಲಿಸಿದರು. ಇತ್ತೀಚೆಗೆ ಬೆಳೆದ ಜೋಳವೂ ನಷ್ಟವಾಗಿರುವ ಬಗ್ಗೆ ರೈತರು ಅಳಲು ತೋಡಿಕೊಂಡರು. 'ಬ್ಯಾಂಕ್‌ಗಳಲ್ಲಿ ಸಾಲ ಮಾಡಿ ಕೃಷಿ ಮಾಡಿದ್ದೇವೆ. ಬೆಳೆ ಹಾನಿಯಾಗಿದ್ದರೂ ವಿಮಾ ಕಂಪನಿಗಳಿಂದ ಪರಿಹಾರ ಸಿಗುತ್ತಿಲ್ಲ. ಸರ್ಕಾರ ನೀಡುತ್ತಿರುವ 2,500 ಪರಿಹಾರ ಯಾವುದಕ್ಕೂ ಸಾಲದು. ಹೆಚ್ಚಿನ ಪರಿಹಾರ ನೀಡಬೇಕು' ಎಂದು ರೈತರು ಡಿಸಿಎಂ ಎದುರು ಮನವಿ ಮಾಡಿದರು.ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಾ. ಪರಮೇಶ್ವರ್, ರಾಜ್ಯದಲ್ಲಿ ಬರ ಪರಿಸ್ಥಿತಿ ಗಂಭೀರವಾಗಿದ್ದು, ರೈತರ ಕೈಗೆ ಬೆಳೆ ಸಿಗದಂತಾಗಿದೆ. ಬಳ್ಳಾರಿ ವಿಜಯನಗರ ಭಾಗದಲ್ಲಿ ಬರದ ತೀವ್ರತೆ ಹೆಚ್ಚಿದ್ದು, ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿ ರೈತರ ನೆರವಿಗೆ ಅಗತ್ಯ ಕ್ರಮ ಕೈಗೊಳ್ಳುವ ಉದ್ದೇಶದಿಂದ ಭೇಟಿ ನೀಡಲಾಗಿದೆ ಎಂದರು.'ಹಳ್ಳಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ 306 ಕೋಟಿ ವೆಚ್ಚದಲ್ಲಿ ನೀರು ಪೂರೈಕೆ ಹಾಗೂ ನಿರ್ವಹಣೆ ಮಾಡಲಾಗುತ್ತಿದೆ. ರೈತರಿಗೆ ಮೊದಲ ಹಂತದಲ್ಲಿ ತಲಾ 2,500 ಇನ್‌ಪುಟ್ ಸಬ್ಸಿಡಿ ನೀಡಲಾಗಿದೆ. ಸುಮಾರು 45 ರಿಂದ 50 ಲಕ್ಷ ರೈತರಿಗೆ ಇದರಿಂದ ಅನುಕೂಲವಾಗಲಿದೆ' ಎಂದು ತಿಳಿಸಿದರು.'ಗ್ಯಾರಂಟಿ ಸೇರಿದಂತೆ ವಿವಿಧ ಯೋಜನೆಗಳ ಮೂಲಕವೂ ರೈತರು ಮತ್ತು ಜನರಿಗೆ ನೆರವು ನೀಡಲಾಗುತ್ತಿದೆ. ಆದರೆ, ಸದ್ಯದ ಬರ ಪರಿಸ್ಥಿತಿಯಲ್ಲಿ ರೈತರಿಗೆ ಮೊದಲ ಆದ್ಯತೆ. ಹೊಸ ರಸ್ತೆ ಸೇರಿದಂತೆ ಇತರ ಅಭಿವೃದ್ಧಿ ಕಾರ್ಯಗಳಿಗಿಂತ ರೈತರ ಸಂಕಷ್ಟ ನಿವಾರಣೆಯೇ ಸರ್ಕಾರದ ಆದ್ಯತೆ ಎಂದು ಪರಮೇಶ್ವರ್ ಹೇಳಿದರು.

1.ಬೆಳೆ ನಷ್ಟ ಕುಡಿಯುವ ನೀರಿನ ಸಮಸ್ಯೆ
2.ಬ್ಯಾಂಕ್‌ಗಳಲ್ಲಿ ಸಾಲ ಮಾಡಿ ಕೃಷಿ
3.ಹಳ್ಳಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ



ಉದಯವಾಹಿನಿ ಚಿತ್ರ

### ಯಾವ ವಿಚಾರಕ್ಕೆ ಸಂಬಂಧಿಸಿದ ಸ್ಟಿಂಗ್ ಎಂಬುದು ನನಗೆ ತಿಳಿದಿಲ್ಲ

ಇದೇ ವೇಳೆ, ವಿರೋಧ ಪಕ್ಷದವರು ಸಚಿವರ 'ಸ್ಟಿಂಗ್ ಆಪರೇಷನ್' ನಡೆಸುತ್ತಿದ್ದಾರೆ ಎಂಬ ಮುಖ್ಯಮಂತ್ರಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ್, 'ಮುಖ್ಯಮಂತ್ರಿಗೆ ಮಾಹಿತಿ ಬಂದಿರುವುದರಿಂದಲೇ ಅವರು ಈ ಬಗ್ಗೆ ಎಚ್ಚರಿಕೆ ನೀಡಿರಬಹುದು. ಯಾವ ವಿಚಾರಕ್ಕೆ ಸಂಬಂಧಿಸಿದ ಸ್ಟಿಂಗ್ ಎಂಬುದು ನನಗೆ ತಿಳಿದಿಲ್ಲ' ಎಂದರು.

### ರೈತರೇ ನಮ್ಮ ಮೊದಲ ಆದ್ಯತೆ

'ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಮೇಲೆ ಹಣಕಾಸಿನ ಹೊರೆ ಆಗಿರುವುದು ನಿಜ. ಆದರೆ ಅದನ್ನು ನಿಭಾಯಿಸುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳಿಂದ ಜನರಿಗೆ ಅನುಕೂಲವಾಗುತ್ತಿದೆ. ಈಗಿನ ಬರದ ಸಂದರ್ಭದಲ್ಲಿ ರೈತರೇ ನಮ್ಮ ಮೊದಲ ಆದ್ಯತೆ' ಎಂದು ಸ್ಪಷ್ಟಪಡಿಸಿದರು.

ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ಎರಡು ಮೆಮೊರಾಂಡಂಗಳನ್ನು ಸಲ್ಲಿಸಲಾಗಿದೆ. ರಾಜ್ಯದಲ್ಲಿ ಒಟ್ಟು ಸುಮಾರು 46 ಸಾವಿರ ಕೋಟಿ ನಷ್ಟವಾಗಿದ್ದು, ಕೇಂದ್ರದ ಮಾರ್ಗಸೂಚಿಯಂತೆ 10–11 ಸಾವಿರ ಕೋಟಿ ಪರಿಹಾರ ಕೋರಿ ಮನವಿ ಮಾಡಲಾಗಿದೆ. ಕೇಂದ್ರದಿಂದ ನೆರವು ದೊರೆತ ಬಳಿಕ ಮುಂದಿನ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

## ಮಿನಿ ನ್ಯೂಸ್

## ನಾಗಾವಿಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಪುರಾತನ ಹೂದೋಟದ ಕುರುಹು ಪತ್ತೆ

**ಉದಯವಾಹಿನಿ, ಚಿತ್ತಾಪುರ**

ಕಲ್ಯಾಣ ಚಾಲುಕ್ಯರ ಆಳ್ವಿಕೆ ಸಮಯದಲ್ಲಿ ಘಟಿಕಾಸ್ಥಾನ (ವಿಶ್ವವಿದ್ಯಾಲಯ) ಹೊಂದಿದ್ದ ಮಹಾ ಅಗ್ರಹಾರ ನಾಗಾವಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಪುರಾತನ ಹೂದೋಟದ ಕುರುಹುಗಳು ಪತ್ತೆಯಾಗಿವೆ.ರಾಜ್ಯ ಪುರಾತತ್ವ ಇಲಾಖೆ ನಾಗಾವಿ ಪರಿಸರದಲ್ಲಿನ ಕರಿ ಮಸೀದಿ ಸ್ಮಾರಕ ಸಂರಕ್ಷಣೆ, ನವೀಕರಣ ಕಾರ್ಯ ಕೈಗೆತ್ತಿಕೊಂಡಿದೆ. ಇತ್ತೀಚೆಗೆ ನವೀಕರಣ ಕಾರ್ಯ ನಡೆಯುತ್ತಿರುವ ಸುತ್ತಲಿನ ಸ್ಥಳದಲ್ಲಿ ಗಿಡ–ಗಂಟಿ ತೆರವುಗೊಳಿಸಿ, ಸ್ಥಳ ಸ್ವಚ್ಛಗೊಳಿಸಿದಾಗ ಹೂಳು ತುಂಬಿದ ಬಾವಿ, ಬಾವಿಯಿಂದ ನೀರು ಮೇಲೆತ್ತಿ ಹೂದೋಟಕ್ಕೆ ಹಾಯಿಸಲು ಕಲ್ಲಿನ ಗೋಡೆ ಮೇಲೆ ನಿರ್ಮಿಸಿರುವ ಇಳಿಜಾರಿನ ಕಾಲುವೆ ಪತ್ತೆಯಾಗಿದೆ.



ಉದಯವಾಹಿನಿ ಚಿತ್ರ

**ಶಾಸನಗಳಲ್ಲಿ ಹೂದೋಟದ ವಿವರ:** ಕ್ರಿ.ಶ 1058ರ ಶಿಲಾ ಶಾಸನದಲ್ಲಿ ಕಲ್ಯಾಣ ಚಾಲುಕ್ಯರ 1ನೇ ಸೋಮೇಶ್ವರನ ಆಳ್ವಿಕೆಯಲ್ಲಿ ಅರಲು–300ರ (ಈಗಿನ ಅಲ್ಲೂರ್.ಬಿ) ಮಹಾದಂಡನಾಯಕ ಮಧುವಪ್ಪ ಅರಸನು ನಾಗಾವಿಯಲ್ಲಿ ದೇವಸ್ಥಾನ ಮತ್ತು ಘಟಿಕಾಸ್ಥಾನದ ವಿವಿಧ ವೃತ್ತಿಕಾರರಿಗೆ ದಾನ ನೀಡಿದ ವಿವರಗಳಿವೆ. 'ಮಾಲೆಯ (ಹೂವಿನ ಮಾಲೆ ತಯಾರಿಸುವ) ಕಾಂತಯ್ಯನ ಮಾನ್ಯ ಮನೆ' ಎಂಬ ಉಲ್ಲೇಖವಿದೆ. ವಿಕ್ರಮಾದಿತ್ಯನ ಆಳ್ವಿಕೆ ಯಲ್ಲಿ ಅರಲು–300ರ ಮಹಾಮಂಡಲೇಶ್ವರನಾಗಿದ್ದ ಹೈಹಯ ವಂಶದ ಲೋಕರಸನು ನಾಗಾವಿಯಲ್ಲಿನ ದೇವಸ್ಥಾನದ ಅನೇಕ ವೃತ್ತಿಕಾರರಿಗೆ ನೀಡಿದ ದತ್ತಿಯ ವಿವರ ತಿಳಿಸುವ ಕ್ರಿ.ಶ 1058ರ ಶಾಸನದಲ್ಲಿ 'ದೇವರ ಪೂಜೆಗೆ ಹೂದೋಟ ಮತ್ತರು 3, 'ಪ್ರತಿಬದ್ಧದ ಮನೆ ನಿವೇಶನ–3' ಎಂಬ ಉಲ್ಲೇಖವಿದೆ. ಕ್ರಿ.ಶ 1093ರ ಶಾಸನದಲ್ಲಿ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅರಲು–300ರ ಮಹಾಮಂಡಲೇಶ್ವರ ಹೈಹಯ ವಂಶದ ಆನೆಮರಸನು ನಾಗಾವಿಯಲ್ಲಿ ನೀಡಿದ ದಾನದ ವಿವರದಲ್ಲಿ 'ದೇವರ ಪರಿಸೂತ್ರದ ಆನ್ನೇಯಕ್ಕೆ ರಾಮೇಶ್ವರ ದೇವರ ತೋಟ' ಎಂಬ ಉಲ್ಲೇಖವಿದೆ. ಈಗ ಪತ್ತೆಯಾಗಿರುವ ಕಲ್ಲಿನ ಕಾಲುವೆಯ ಇಳಿಜಾರು ಗೋಡೆ, ಹೂಳು ತುಂಬಿದ ಬಾವಿಯು ರಾಮೇಶ್ವರ ದೇವಸ್ಥಾನದ ಆನ್ನೇಯಕ್ಕೆ ಇರುವುದರಿಂದ ಶಾಸನೋಕ್ತ ಹೂದೂಟ ಎನ್ನಲಾಗುತ್ತಿದೆ.

## ಕಲಬುರಗಿಯಲ್ಲಿ ವಿಮಾನ ತುರ್ತು ಭೂಸ್ಪರ್ಶ

**ಉದಯವಾಹಿನಿ, ಕಲಬುರಗಿ**

ತಾಂತ್ರಿಕ ದೋಷದಿಂದ ತರಬೇತಿ ವಿಮಾನವೊಂದು ರೈತರ ಜಮೀನಿನಲ್ಲಿ ತುರ್ತು ಭೂಸ್ಪರ್ಶ ಆಗಿರುವ ಘಟನೆ ಕಲಬುರಗಿ ವಿಮಾನ ನಿಲ್ದಾಣದ ಸಮೀಪ ಮಂಗಳವಾರ ನಡೆದಿದೆ. ತೊಗರಿ ಹೊಲದಲ್ಲಿ ವಿಮಾನವನ್ನು ಸುರಕ್ಷಿತವಾಗಿ ಲ್ಯಾಂಡಿಂಗ್ ಮಾಡಲಾಗಿದ್ದು, ವಿಮಾನದಲ್ಲಿದ್ದ ಇಬ್ಬರು ಸಿಬ್ಬಂದಿ ಅಪಾಯದಿಂದ ಪಾರಾಗಿದ್ದಾರೆ. ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸಿಬ್ಬಂದಿ ಸಮಯಪ್ರಜ್ಞೆ ಮೆರೆದು ವಿಮಾನವನ್ನು ಜಮೀನಿನಲ್ಲಿ ಸುರಕ್ಷಿತವಾಗಿ ಇಳಿಸಿದ್ದಾರೆ. ಇದರಿಂದ ಭಾರಿ ಅನಾಹುತ ತಪ್ಪಿದೆ. ಘಟನೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಮಾಹಿತಿ ತಿಳಿದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಇಂದೋರ್ ನಲ್ಲಿ ಬಳ್ಳಾರಿ ಪಾಲಿಕೆ ತಂಡದ ಅಧ್ಯಯನ

**ಉದಯವಾಹಿನಿ, ಬಳ್ಳಾರಿ**

ದೇಶದ ಸ್ವಚ್ಛ ಸುಂದರ ನಗರ ಮಧ್ಯ ಪ್ರದೇಸದ ಇಂದೋರ್ ನಗರದ ವ್ಯವಸ್ಥೆ ಬಗ್ಗೆ ಅಧ್ಯಯನ ಮಾಡಲು ಇಲ್ಲಿನ ಮಹಾನಗರಪಾಲಿಕೆ ಸದಸ್ಯರು, ಅಧಿಕಾರಿಗಲ ಮತ್ತು ಸಿಬ್ಬಂದಿಗಳ ತಂಡ ನಿನ್ನೆ ತೆರಳಿದ್ದಾರೆ. ಮೇಯರ್ ಪಿ ಗಾದೆಪ್ಪ ನೇತೃತ್ವದಲ್ಲಿ ನಗರದ ಮಹಾನಗರ ಪಾಲಿಕೆ ಕಚೇರಿಯಿಂದ ವಿಶೇಷ ಬಸ್ ಮೂಲಕ 30ಸದಸ್ಯರು, 12 ಜನ ಸಿಬ್ಬಂದಿ ಸೇರಿ ಒಟ್ಟು 42 ಜನರ ತಂಡ ಬೆಂಗಳೂರಿಗೆ ಹೋಗಿ ಅಲ್ಲಿಂದ ವಿಮಾನದ ಮೂಲಕ ಇಂದೂರ್ಗ ಸೇರಿದ್ದಾರೆ. ಇಂದು ಬೆಳಿಗ್ಗೆ ಇಂದೂರ್ನ ಮುನ್ಸಿಪಲ್ ಕಾರ್ಪೊರೇಷನ್ನ ಘನತ್ಯಾಜ್ಯ ನಿರ್ವಹಣೆ, ಒಣ–ಹಸಿ ಕಸದ ವಿಂಗಡಣೆ ಘಟಕಗಳಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಬಗ್ಗೆ ಅರಿತುಕೊಂಡರು. ನಗರ ಅಭಿವೃದ್ಧಿ, ಸ್ವಚ್ಛತಾ ಕುರಿತು ಹಮ್ಮಿಕೊಳ್ಳುವ ಜಾಗೃತಿ ಅರಿವು ಕಾರ್ಯಕ್ರಮ, ತ್ಯಾಜ್ಯ ನಿರ್ವಹಣೆ, ಯುಜಿಡಿ ವ್ಯವಸ್ಥೆ ಸೇರಿ ನಾನಾ ವಿಷಯಗಳ ಕುರಿತು ತಂಡ ಅಧ್ಯಯನ ನಡೆಸಲಿದೆ. ಅಲ್ಲದೆ ಇಂದೂರ್ನ ಸ್ಥಳೀಯ ಆಡಳಿತದಿಂದ ನಡೆಸುವ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲಿದೆ. ಇಂದೂರ್ನಲ್ಲಿ ಕೈಗೊಂಡ ಸುಧಾರಣಾ ಕ್ರಮಗಳನ್ನು ಅಧ್ಯಯನ ತಂಡ ಪರಿಶೀಲಿಸಿ, ಬಳ್ಳಾರಿ ನಗರದಲ್ಲಿ ಅಳವಡಿಸಿಕೊಳ್ಳಲು ಈ ಪ್ರವಾಸ ಮಹತ್ವದ್ದಾಗಿದೆ.

## ಎಸ್‌ಐಆರ್: ಬಿಜೆಪಿ ಮುಖಂಡರಿಂದ ಬಿಎಲ್‌ಒಗಳ ಮೇಲೆ ಒತ್ತಡ ಆರೋಪ

**ಉದಯವಾಹಿನಿ, ಉಡುಪಿ**

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಬಿಜೆಪಿ ಮುಖಂಡರು ಬಿಎಲ್‌ಒಗಳ ಮೇಲೆ ಒತ್ತಡ ಹಾಕುವ ಕೆಲಸ ಮಾಡುತ್ತಿದ್ದಾರೆ' ಎಂದು ವಿಧಾನಪರಿಷತ್ ಸದಸ್ಯ ಐವನ್ ಡಿಸೋಜ ಆರೋಪಿಸಿದರು.ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಮತದಾರರ ಪಟ್ಟಿಯಿಂದ ಹೆಸರು ತೆಗೆಸಲು ಬಿಎಲ್‌ಒಗಳ ಮೇಲೆ ಬಿಜೆಪಿ ಮುಖಂಡರು ಒತ್ತಡ ಹಾಕುತ್ತಿರುವ ವಿಚಾರವನ್ನು ಜಿಲ್ಲಾಧಿಕಾರಿಗೆ ಗಮನಕ್ಕೆ ತಂದಿದ್ದೇವೆ' ಎಂದರು. 'ದೇಶದಲ್ಲಿ ಮತಗಳ್ಳತನ ನಡೆಯುತ್ತಿದೆ. ಚುನಾವಣಾ ಆಯೋಗವನ್ನು ಖರೀದಿ ಮಾಡುವ ಕೆಲಸ ಬಿಜೆಪಿಯಿಂದ ನಡೆಯುತ್ತಿದೆ' ಎಂದು ಹೇಳಿದರು. 'ಕಾಂಗ್ರೆಸ್ ಪಕ್ಷವು ಸಂಘಟನ್ ಸೃಜನ ಅಭಿಯಾನ–1ರ ಮೂಲಕ ರಾಜ್ಯದಲ್ಲಿ ಡಿಸಿಸಿ ಅಧ್ಯಕ್ಷರನ್ನು ಆಯ್ಕೆ ಮಾಡಿತ್ತು. ಸಂಘಟನ್ ಸೃಜನ ಅಭಿಯಾನ–2 ಅನ್ನು ಈಗ ಕೈಗೊಂಡಿದ್ದು, ಈ ಹಂತದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ, ಗ್ರಾಮ ಮಟ್ಟದ ಅಧ್ಯಕ್ಷರ ಆಯ್ಕೆ ನಡೆಯಲಿದೆ' ಎಂದು ಹೇಳಿದರು. 'ಜನರ ಅಭಿಪ್ರಾಯ ಪಡೆದು ಎಲ್ಲಾ ವಿಭಾಗದವರಿಗೂ ಪ್ರಾಮುಖ್ಯತೆ ನೀಡುವ ಮೂಲಕ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುವುದು. ಈ ತಿಂಗಳ 30 ರೊಳಗೆ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ತೆರಳಿ ಜನರ ಅಭಿಪ್ರಾಯ ಸಂಗ್ರಹಿಸಲಾಗುವುದು' ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕಿಶನ್ ಹೆಗ್ಡೆ ಕೊಳ್ಕೆಬೈಲ್, ಪ್ರಮುಖರಾದ ಅಶೋಕ್ ಕುಮಾರ್ ಕೊಡವೂರು, ಪ್ರಸಾದ್‌ರಾಜ್ ಕಾಂಚನ್, ಅಬ್ದುಲ್ ಗಫೂರ್, ಶಾಲೆಟ್ ಪಿಂಟೊ, ರಾಜು ಪೂಜಾರಿ, ದಿನೇಶ್ ಹೆಗ್ಡೆ ಮೊಳಹಳ್ಳಿ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ**: ನಗುವಿನ ಚಿಕಿತ್ಸೆ ಎಲ್ಲಾ ಸಮಸ್ಯೆಗಳಿಗೂ ಮದ್ದಾಗಿರುವುದರಿಂದ ನಿಮ್ಮ ಅನಾರೋಗ್ಯ ಗುಣಪಡಿಸಲು ನಗುವಿನ ಚಿಕಿತ್ಸೆ ಬಳಸಿ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ.

**ವೃಷಭ**: ನಿಮ್ಮ ಅಹಾರ ಕ್ರಮದ ಬಗ್ಗೆ, ವಿಶೇಷವಾಗಿ ಮೈಗ್ರೇನ್ ರೋಗಿಗಳು ಸೂಕ್ತ ಎಚ್ಚರ ತೆಗೆದುಕೊಳ್ಳಬೇಕು. ಅವರು ತಮ್ಮ ಊಟ ತಪ್ಪಿಸಿಕೊಂಡಲ್ಲಿ ಅದು ಅವರಿಗೆ ಅನಗತ್ಯ ಭಾವನಾತ್ಮಕ ಒತ್ತಡವನ್ನು ಉಂಟುಮಾಡಬಹುದು.

**ಮಿಥುನ**: ಹಣದ ಸ್ಥಾನ ಮತ್ತು ಆರ್ಥಿಕ ಸಮಸ್ಯೆಗಳು ಒತ್ತಡದ ಮೂಲವಾಗಿರುತ್ತವೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಕರ್ಕಾಟಕ**: ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಸ್ನೇಹಿತನೊಂದಿಗಿನ ಸಂಜೆ ಹೆಚ್ಚು ಮನರಂಜನೀಯವಾಗಿರುತ್ತದೆ ಮತ್ತು ಸಂತೋಷದಿಂದ ತುಂಬಿರುತ್ತದೆ. ದೂರವಾಣಿ ಕರೆ ನಿಮ್ಮ ದಿನವನ್ನು ಬೆಳಗಲಿದೆ.

**ಸಿಂಹ**: ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ. ಇಂದು ನಿಮಗೆ ಅನೇಕ ಆರ್ಥಿಕ ಯೊಜನೆಗಳು ದೊರಕುತ್ತವೆ

**ಕನ್ಯಾ**: ಸ್ವತಃ ಔಷಧಿ ತೆಗೆದುಕೊಳ್ಳುವುದು ಔಷಧ ಅವಲಂಬನೆಯನ್ನು ಉಂಟುಮಾಡಬಹುದು. ಯಾವುದೇ ಔಷಧ ತೆಗೆದುಕೊಳ್ಳುವ ಮೊದಲು ವೈದ್ಯರ ಸಲಹೆ ಪಡೆಯಿರಿ. ಇಲ್ಲದಿದ್ದಲ್ಲಿ ಔಷಧ ಅವಲಂಬನೆಯ ಸಾಧ್ಯತೆ ಅಧಿಕವಾಗಿದೆ.

**ತುಲಾ**: ಗಾಳಿಗೊಡ್ಡಿದ ಆಹಾರ ನಿಮಗೆ ಅನಾರೋಗ್ಯ ತರಬಹುದಾದ್ದರಿಂದ ಅವುಗಳನ್ನು ತಿನ್ನಬೇಡಿ. ಬಯಸದೆ ಇರುವ ಯಾವುದೇ ಅತಿಥಿ ಇಂದು ನಿಮ್ಮ ಮನೆಗೆ ಬರಬಹುದು. ನಿಮ್ಮ ಬಿಡುವಿನ ಸಮಯವನ್ನು ನಿಸ್ವಾರ್ಥ ಸೇವೆಯಲ್ಲಿ ವಿನಿಯೋಗಿಸಿ.

**ವೃಶ್ಚಿಕ**: ನಿಮ್ಮ ಜಗಳಗಂಟ ನಡುವಳಿಕೆ ನಿಮ್ಮ ಶತ್ರುಗಳ ಪಟ್ಟಿಯನ್ನು ಸುಧೀರ್ಘಗೊಳಿಸುತ್ತದೆ. ನೀವು ನಂತರ ಪಶ್ಚಾತ್ತಾಪಪಡುವಷ್ಟು ಕೆಟ್ಟದಾಗಿ ನೀವೇನಾದರೂ ಮಾಡುವಷ್ಟು ನೀವು ಕೋಪಗೊಳ್ಳುವಂತೆ ಮಾಡಲು ಯಾರಿಗೂ ಅವಕಾಶ ನೀಡಬೇಡಿ.

**ಧನಸ್ಸು**: ನಿಮ್ಮ ಜೀವನವನ್ನು ಲಘುವಾಗಿ ತೆಗೆದುಕೊಳ್ಳಬೇಡಿ ನೆನಪಿಡಿ, ಬದುಕಿನ ರಕ್ಷಣೆ ನಿಜವಾದ ಆಣೆ. ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಆದರೆ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು.

**ಮಕರ**: ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಇಂದು ನಿಮ್ಮ ಆಪ್ತರೊಂದಿಗೆ ಜಗಳವಾಗಬಹುದು ಮತ್ತು ವಿಷಯ ನ್ಯಾಯಾಲಯ ಕಚೇರಿಯ ವರೆಗೂ ಹೋಗಬಹುದು.

**ಕುಂಭ**: ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಈ ರಾಶಿಚಕ್ರದ ಕೆಲವು ಜನರಿಗೆ ಇಂದು ಮಕ್ಕಳ ಬದಿಯಿಂದ ಆರ್ಥಿಕ ಲಾಭವನ್ನು ಪಡೆಯುವ ಭರವಸೆ ಇದೆ.

**ಮೀನ**: ನಿಮ್ಮ ಸಂಗಾತಿಯ ನಿಷ್ಠಾವಂತ ಹೃದಯ ಮತ್ತು ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡಬಹುದು. ಇಂದು ಹೂಡಿಕೆಗಳನ್ನು ಮಾಡಬಾರದು. ಗುಂಪಿನಲ್ಲಿದ್ದಾಗ ನೀವೇನು ಹೇಳುತ್ತೀರೆಂದು ಎಚ್ಚರ ವಹಿಸಿ. ಹಠಾತ್ ಟೀಕೆಗಳಿಗೆ ತೀವ್ರವಾಗಿ ಟೀಕೆ ಎದುರಿಸಬೇಕಾಗಬಹುದು.

ಬಿಜೆಪಿ ಅಭ್ಯರ್ಥಿ ಸಂಕನೂರ ಅವರಿಗೆ ನಾಮಪತ್ರ ಸಲ್ಲಿಕೆ ವೇಳೆ ಬಿಜೆಪಿಯ ಹಲವಾರು ಹಿರಿಯ ನಾಯಕರು ಸಾಥ್ ನೀಡಿದರು

# ಬಿಜೆಪಿ ಅಭ್ಯರ್ಥಿ ನಾಮಪತ್ರ ಸಲ್ಲಿಕೆ: ಕೈಗೆ ಬಂಡಾಯದ ಬಿಸಿ

**ಉದಯವಾಹಿನಿ, ಧಾರವಾಡ**

ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ ಹಾಗೂ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಡಾ. ಆರ್.ಎಂ ಕುಬೇರಪ್ಪ ನಾಮಪತ್ರ ಸಲ್ಲಿಸಿದರು.

1. ಬಿಜೆಪಿ, ಎನ್‌ಡಿಎ ಅಭ್ಯರ್ಥಿ ಸ್ಪರ್ಧೆ
2. ಸ್ಟಾರ್ಟ್ ಅಪ್ ಇಕೋ ಪಾಯಿಂಟ್
3. ವೋಟ್ ಸೇರಿಸೋದು ಸುಲಭ
4. ಡಿಲಿಟ್ ಮಾಡೊದು ಕಷ್ಟ

ಬಿಜೆಪಿ ಅಭ್ಯರ್ಥಿ ಸಂಕನೂರ ಅವರ ಮೆರವಣಿಗೆ ಧಾರವಾಡ ಉಳವಿ ಬಸವೇಶ್ವರ ದೇವಸ್ಥಾನದಿಂದ ಆರಂಭಗೊಂಡಿತು. ಮೆರವಣಿಗೆ ಮೂಲಕ ಡಿಸಿ ಕಚೇರಿಗೆ ಆಗಮಿಸಿದ ನಾಯಕರು ಸಂಕನೂರ ಅವರೊಂದಿಗೆ ಹೋಗಿ ನಾಮಪತ್ರ ಸಲ್ಲಿಕೆ ಮಾಡಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಸಿಸಿ ಪಾಟೀಲ್, ಮಾಜಿ ಶಾಸಕ ಬಿ.ಸಿ ಪಾಟೀಲ್ ಸೇರಿದಂತೆ ಹಲವಾರು ಹಿರಿಯ ನಾಯಕರು ಸಾಥ್ ನೀಡಿದರು. ನಾಮಪತ್ರ ಸಲ್ಲಿಕೆ ಬಳಿಕ ಮಾಧ್ಯಮದವರೊಂದಿಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮಾತನಾಡಿ, 2008 ರಿಂದ ಕ್ಷೇತ್ರ ಬಿಜೆಪಿ ಕೈಯಲ್ಲಿದೆ. ಈಗಲೂ ಬಿಜೆಪಿ, ಎನ್‌ಡಿಎ ಅಭ್ಯರ್ಥಿ ಸ್ಪರ್ಧೆ ಮಾಡಿದ್ದಾರೆ. ಎಸ್.ವಿ ಸಂಕನೂರ ಅವರು ಕ್ರಿಯಾಶೀಲ ಸದಸ್ಯರಾಗಿದ್ದಾರೆ. ಪರಿಷತ್ತಿನಲ್ಲಿ ಸರಳ ಸಜ್ಜನ ವ್ಯಕ್ತಿಗಳು, ಸರಿಯಾಗಿ ಮಂಡನೆ ಮಾಡಬೇಕು. ಅದು ಎಸ್.ವಿ.ಸಂಕನೂರ ಅವರು ಮಾಡ್ತಾರೆ. ಇದು ಬಹಳ ದೊಡ್ಡ ಕ್ಷೇತ್ರವಾಗಿದೆ. ಈ ಹಿನ್ನೆಲೆ ಅನೇಕ ಕಡೆ ಓಡಾಡಿ ಉದ್ಯೋಗ ಮೇಳ ಮಾಡಿದ್ದಾರೆ. ಕ್ರಿಯಾಶೀಲ ಚಿಂತಕರ ಚಾವಡಿ ಅಂತೇ ಪಾತ್ರ ನಿರ್ವಹಿಸಿದ್ದಾರೆ.


ಉದಯವಾಹಿನಿ ಚಿತ್ರ

ಬಹಳ ದೊಡ್ಡ ಸಂಖ್ಯೆಯಲ್ಲಿ ಸ್ಟಾರ್ಟ್ ಅಪ್ ಇಕೋ ಪಾಯಿಂಟ್ ಇದೆ. ಸುಮಾರು 30 ಲಕ್ಷಕ್ಕೂ ಹೆಚ್ಚು ಉದ್ಯೋಗ ಸಿಕ್ಕಿವೆ ಕಾಂಗ್ರೆಸ್ ಪಕ್ಷದ ಫೈಲ್ಯೂರ್ ಆಗಿದೆ. ಯಾರನ್ನ ರಕ್ಷಿಸಲು ಇವರು SIR ವಿರೋದ ಮಾಡ್ತಾ ಇದ್ದಾರೆ. ನುಸುಳಕೋರರು ಈ ದೇಶದ ನಾಗರಿಕರು ಅನ್ನೋಕೆ ಯಾವುದೇ ಪುರಾವೆ ಇಲ್ಲ, ನುಸುಳುಕೋರರ ಪರವಾಗಿ ಹೋರಾಟ ಮಾಡ್ತಾ ಇದ್ದಾರೆ. ವೋಟ್ ಸೇರಿಸೋದು ಸುಲಭ ಇದೆ. ಆದರೆ ಡಿಲಿಟ್ ಮಾಡೊದು ಕಷ್ಟ ಅಂತ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗೆ ಅವಕಾಶ ಇದ್ದರೂ, ಚುನಾವಣಾ ಆಯೋಗದ ಮುಂದೆ ಧರಣಿ ಕುಳಿತಿದ್ದರು. ನಂತರ ನಾವು ಕುಳಿತಿಲ್ಲ ಅನ್ನೋದು ಜನರು, ಯುವಕರು ಗಮನಿಸಿದ್ದಾರೆ. ನೇಮಕಾತಿ ವಿಷಯದಲ್ಲಿ ಕರ್ನಾಟಕ ಸರ್ಕಾರ ಸರಿಯಾಗಿ ಆದೇಶ ಮಾಡಿಲ್ಲ, ಸರಿಯಾದ ರೀತಿಯಲ್ಲಿ ಆದೇಶ ಹೊರಡಿಸಿಲ್ಲ ಎಂದು ಹರಿಹಾಯ್ದರು.

> ಪಶ್ಚಿಮ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂಕನೂರ ಅವರು, ಪ್ರಹ್ಲಾದ್ ಜೋಶಿ, ಶೆಟ್ಟರ್, ಬೊಮ್ಮಾಯಿ, ಹೊರಟ್ಟಿ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಈಗಾಗಲೇ ಎರಡು ಬಾರಿ ಪರಿಷತ್ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅ.23 ರಂದು ನಡೆಯುವ ಚುನಾವಣೆಯಲ್ಲಿ ಬಹಳ ದೊಡ್ಡ ಅಂತರದಲ್ಲಿ ಗೆಲ್ಲುತ್ತೇವೆ ನಾಲ್ಕು ಕ್ಷೇತ್ರದಲ್ಲಿ ಬಿಜೆಪಿ, ಎನ್‌ಡಿಎ ಅಭ್ಯರ್ಥಿಗಳು ಗೆಲ್ಲುತ್ತೇವೆ.
> –ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಬಿಜೆಪಿ, ಎನ್‌ಡಿಎ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದೇನೆ. ಕೇಂದ್ರ ಸಚಿವ ಜೋಶಿ, ವಿಜಯೇಂದ್ರ, ಶೆಟ್ಟರ್, ಬೊಮ್ಮಾಯಿ ಸೇರಿ ನಾಯಕರು ಇದ್ದರು. ಬಹಳ ಯಶಸ್ವಿಯಾಗಿ ನಾಮಪತ್ರ ಸಲ್ಲಿಸಿದ್ದೇವೆ 12 ವರ್ಷ ಗಳಿಂದ ನಾನು ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಪ್ರತಿನಿಧಿಸುತ್ತಿದ್ದೇನೆ. ನಿರುದ್ಯೋಗ ಸಮಸ್ಯೆ ಬಗ್ಗೆ ಸದನದಲ್ಲಿ ಮಾತಾಡಿದ್ದೇನೆ. ನೂರಕ್ಕೂ ಹೆಚ್ಚು ನಿಗಮ ಮಂಡಳಿ ಇವೆ.
> – ಎಸ್.ವಿ.ಸಂಕನೂರ, ಬಿಜೆಪಿ ಅಭ್ಯರ್ಥಿ

## ಮದ್ಯ ಮಾರಾಟ ತಡೆಗೆ ರಾಷ್ಟ್ರಪತಿ ಭವನದ ಬಾಗಿಲು ತಟ್ಟಿದ ಕಾನೂನು ವಿದ್ಯಾರ್ಥಿ!

**ಉದಯವಾಹಿನಿ, ಯಾದಗಿರಿ**

ತಾಲೂಕಿನ ಪರಸನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ಹಾಗೂ



ಸಾಗಾಣಿಕೆಗೆ ಕಡಿವಾಣ ಹಾಕಲು ಸ್ಥಳೀಯ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿ, ಗ್ರಾಮದ ಮಹಿಳೆಯರ ಪರವಾಗಿ ನೇರವಾಗಿ ಭಾರತದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ರವಾನಿಸಲಾಗಿದೆ. ಸುರಪುರ ತಾಲೂಕಿನ ಪರಸನಹಳ್ಳಿ ಗ್ರಾಮದ ಶ್ರೀ ಪ್ರಶಾಂತ್ ಎಸ್. ದೊಡ್ಡಮನಿ ಅವರು ಈ ಮನವಿಯನ್ನು ಸಲ್ಲಿಸಿದ್ದು, ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಜಾಲ ಸಕ್ರಿಯವಾಗಿದೆ ಎಂದು ದೂರಿದ್ದಾರೆ. ಕಸಬಾ ಕೆಂಭಾವಿಯ ಲೈಸೆನ್ಸ್ ಹೊಂದಿರುವ ಬಾರ್‌ಗಳಿಂದ ಹಳ್ಳಿಗಳಿಗೆ ಅಕ್ರಮವಾಗಿ ಮದ್ಯ ಪೂರೈಕೆಯಾಗುತ್ತಿದ್ದು, ಇದನ್ನು ತಡೆಯಬೇಕಾದ ಸುರಪುರ ಅಬಕಾರಿ ಇಲಾಖೆಯ ಸಿಬ್ಬಂದಿ ಹಾಗೂ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ ಹಾಗೂ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

**ಗ್ರಾಮೀಣ ಭಾಗಕ್ಕೆ ಅಕ್ರಮ ಮದ್ಯ ಪೂರೈಕೆ:** ಕೆಂಭಾವಿಯ ಲೈಸೆನ್ಸ್‌ಯುಕ್ತ ಬಾರ್‌ಗಳಿಂದ ಹಳ್ಳಿಗಳಿಗೆ ಅಕ್ರಮವಾಗಿ ಮದ್ಯ ರವಾನೆಯಾಗುತ್ತಿದೆ.

**ಅಬಕಾರಿ ಇಲಾಖೆ ನಿರ್ಲಕ್ಷ್ಯ:** ಅಕ್ರಮ ಚಟುವಟಿಕೆಗಳಿಗೆ ಸುರಪುರ ಅಬಕಾರಿ ಸಿಬ್ಬಂದಿ ಸಾಥ್ ನೀಡುತ್ತಿದ್ದು, ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ.

**ಸಾರ್ವಜನಿಕ ಆರೋಗ್ಯಕ್ಕೆ ಧಕ್ಕೆ:** ಅಕ್ರಮ ಮದ್ಯದಿಂದಾಗಿ ಗ್ರಾಮಗಳಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು, ಸಾರ್ವಜನಿಕ ಆರೋಗ್ಯ ಹಾಗೂ ಮಹಿಳೆಯರ ನೆಮ್ಮದಿಗೆ ಕಂಟಕವಾಗಿದೆ.

> ಸುರಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟದಿಂದ ಮಹಿಳೆಯರು ಮತ್ತು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಸ್ಥಳೀಯ ಮಟ್ಟದಲ್ಲಿ ನ್ಯಾಯ ಸಿಗದ ಹಿನ್ನೆಲೆಯಲ್ಲಿ ಗ್ರಾಮದ ನೊಂದ ಮಹಿಳೆಯರ ನೆಮ್ಮದಿ ಮತ್ತು ರಕ್ಷಣೆಗಾಗಿ ನೇರವಾಗಿ ಮಾನ್ಯ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ, ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿದ್ದೇವೆ.
> – ಪ್ರಶಾಂತ್ ಎಸ್. ದೊಡ್ಡಮನಿ ಕಾನೂನು ವಿದ್ಯಾರ್ಥಿ

### ಮನವಿಯ ಪ್ರಮುಖ ಬೇಡಿಕೆಗಳು

1. ಸುರಪುರ ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಸಾಗಾಣಿಕೆ ಹಾಗೂ ಮಾರಾಟದ ಕುರಿತು ಸೂಕ್ತ ತನಿಖೆಗೆ ಸೂಚಿಸಬೇಕು.
2. ಅಕ್ರಮ ಮದ್ಯ ಮಾರಾಟಗಾರರಿಗೆ ಸಹಕರಿಸುತ್ತಿರುವ ಅಬಕಾರಿ ಅಧಿಕಾರಿಗಳ ವಿರುದ್ಧ ಸ್ವತಂತ್ರ ತನಿಖೆಯಾಗಬೇಕು.
3. ತನಿಖೆಯಲ್ಲಿ ಆರೋಪ ಸಾಬೀತಾದರೆ ಸಂಬಂಧಪಟ್ಟ ಸಿಬ್ಬಂದಿ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು.
4. ಸಾರ್ವಜನಿಕರು ಈ ಹಿಂದೆ ನೀಡಿದ ದೂರುಗಳ ಮೇಲಿನ ಕ್ರಮದ ವಿವರಗಳನ್ನು ಪರಿಗಣಿಸಬೇಕು.


ಉದಯವಾಹಿನಿ ಚಿತ್ರ

## ಮಸ್ಕಿ ಕ್ಷೇತ್ರದಲ್ಲಿ ಮೂಲ ಸೌಕರ್ಯಕ್ಕಾಗಿ ಹೋರಾಟ

**ಉದಯವಾಹಿನಿ, ಮಸ್ಕಿ**

ತಾಲ್ಲೂಕಿನ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಮೂಲ ಸೌಕರ್ಯ ಕಲ್ಪಿಸುವಂತೆ ಮುಂದಿನ ದಿನದಲ್ಲಿ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕ ಘಟಕದ ಅಧ್ಯಕ್ಷ ರೆಡ್ಡೆಪ್ಪ ಕುಣಿಕೆಲ್ಲೂರು ಅವರು ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ರಸ್ತೆಗಳು ಹದೆಗೆಟ್ಟಿವೆ, ಶೌಚಾಲಯ ಇಲ್ಲದೇ ಮಹಿಳೆಯರು ಪರದಾಡುತ್ತಿದ್ದಾರೆ, ಕಂಬಗಳಿಗೆ ವಿದ್ಯುತ್ ಬಲ್ಪಗಳು ಉರಿಯುತ್ತಿಲ್ಲ. ಎಲ್ಲಾ ವರ್ಗದ ಬಡವರಿಗೆ ದಲಿತ, ಹಿಂದುಳಿದ ಶೋಷಿತ ಜನರಿಗೆ ನಿವೇಶನ, ವಸತಿ, ಭೂಮಿ, ಹಕ್ಕುಪತ್ರ ನೀಡುವಂತೆ ಒತ್ತಾಯಿಸಿ ಹೋರಾಟ ಮಾಡುವುದಕ್ಕೆ ಸಿದ್ದತೆ ಮಾಡಲಾಗುವುದು ಎಂದು ಹೇಳಿದರು. ಪ್ರೋ. ಬಿ ಕೃಷ್ಣಪ್ಪ ಸ್ಥಾಪಿತ ಡಿಎಸ್ ಎಸ್ ಸಮಿತಿಯ ನೂತನ ಪದಾಧಿಕಾರಿ ಆಯ್ಕೆ ಮಾಡಲಾಗಿದೆ. ರೆಡ್ಡೆಪ್ಪ ಕುಣಿಕೆಲ್ಲೂರು ಅವರು ತಾಲ್ಲೂಕ ಸಂಚಾಲಕರಾಗಿ ಆಯ್ಕೆ ಆಗಿದ್ದು, ಹಾಗೂ ಸಂಘಟನಾ ಸಂಚಾಲಕರಾಗಿ ರಮೇಶ ಬೆಳ್ಳಿಗನೂರು, ಶಂಬುಲಿಂಗ ಇರಕಲ್ಲ, ಸಿದ್ದಪ್ಪ ಡೋಣಮರಡಿ, ವಿಜಯಕುಮಾರ, ತಿಮ್ಮಣ್ಣ ನಾಯಕ, ಮೋಹನ ಮುರಾರಿ, ಮತ್ತು ಖಜಾಂಚಿಯಾಗಿ ವಂದಲೆಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು. ಈ ಸಂದರ್ಭದಲ್ಲಿ ವಿಜಯಕುಮಾರ ಸಾಗರಕ್ಯಾಂಪ, ಮೋಹನ್ ಎಂ ಮುರಾರಿ, ಪ್ರಶಾಂತ ದಾನಪ್ಪ, ಕಾಶಿಮಪ್ಪ ಮುರಾರಿ ಸೇರಿದಂತೆ ಇನ್ನಿತರಿದ್ದರು.

## ಸಿ.ಎ ಸೈಟ್‌ನಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ: ಕ್ರಮಕ್ಕೆ ಆಗ್ರಹ

**ಉದಯವಾಹಿನಿ, ಕೆಂಭಾವಿ**

ಇಲ್ಲಿನ ಪುರಸಭೆ ವ್ಯಾಪ್ತಿಯಲ್ಲಿ ಬರುವ ಟಿಎಂಸಿ ಸಿ.ಎ ಸೈಟ್‌ನಲ್ಲಿ ನಿಯಮಬಾಹಿರವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಈ ಕುರಿತು ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು 'ಅಂಬೇಡ್ಕರ್ ಸ್ವಾಭಿಮಾನಿ ಸೇನೆ (ರಿ)' ಕೆಂಭಾವಿ ಹೋಬಳಿ ಘಟಕದ ವತಿಯಿಂದ ಪುರಸಭೆಯ ಮುಖ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.


ಉದಯವಾಹಿನಿ ಚಿತ್ರ

**ಸಮಸ್ಯೆಯ ವಿವರ:** ಕೆಂಬಾವಿ ಪುರಸಭೆ ವ್ಯಾಪ್ತಿಯ ಟಿಎಂಸಿ ಆಸ್ತಿಯಲ್ಲಿನ ಸಿ.ಎ ಸೈಟ್‌ನಲ್ಲಿ, ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ನಕ್ಷೆ ವಿನ್ಯಾಸ (ಲೇಔಟ್ ಪ್ಲಾನ್) ಹಾಗೂ ಕಟ್ಟಡ ನಿರ್ಮಾಣ ಪರವಾನಗಿ ಪಡೆಯದೆ ಅಕ್ರಮವಾಗಿ ದೇವಸ್ಥಾನದ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಇದು ಸಂಪೂರ್ಣವಾಗಿ ಕಾನೂನುಬಾಹಿರವಾಗಿದೆ ಎಂದು ಸಂಘಟನೆಯ ಪದಾಧಿಕಾರಿಗಳು ಆರೋಪಿಸಿದ್ದಾರೆ. ಈ ಅಕ್ರಮ ನಿರ್ಮಾಣದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಗಮನಹರಿಸಿ, ಅನಧಿಕೃತವಾಗಿ ನಿರ್ಮಿಸುತ್ತಿರುವ ದೇವಸ್ಥಾನದ ಕಟ್ಟಡವನ್ನು ತೆರವುಗೊಳಿಸಬೇಕು. ಅಕ್ರಮ ಕಟ್ಟಡ ನಿರ್ಮಾಣ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ, ಅದೇ ಸಿ.ಎ ಸೈಟ್‌ನಲ್ಲಿ ಬೇರೆ ಬೇರೆ ದೇವಸ್ಥಾನಗಳ ನಿರ್ಮಾಣ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಲಾಗಿದೆ. ಈ ಕುರಿತು ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ಅಧ್ಯಕ್ಷರಾದ ಪರಶುರಾಮ್ ಎಂ. ಬೋನಾಳ ಅವರ ನೇತೃತ್ವದಲ್ಲಿ ಪುರಸಭೆ ಕಾರ್ಯಾಲಯಕ್ಕೆ ಮನವಿ ಸಲ್ಲಿಸಲಾಗಿದ್ದು, ಇದರ ಪ್ರತಿಯನ್ನು ಯಾದಗಿರಿ ಉಪವಿಭಾಗದ ಸಹಾಯಕ ಆಯುಕ್ತರು ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೂ ರವಾನಿಸಲಾಗಿದೆ.

## ಸನ್ಮಾನಗಳು ಮನುಷ್ಯನ ಬೆಳವಣಿಗೆಗೆ ಸ್ಫೂರ್ತಿ

**ಉದಯವಾಹಿನಿ, ಚಿತ್ತಾಪುರ**

ಜವಾಬ್ದಾರಿಗಳು ಹಾಗೂ ಸನ್ಮಾನಗಳು ಮನುಷ್ಯನ ಬೆಳವಣಿಗೆಗೆ ಸ್ಫೂರ್ತಿ ನೀಡಲಿವೆ ಎಂದು ನಾಗಾವಿ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಕಾಶಿನಾಥ ಗುತ್ತೇದಾರ ಅಭಿಪ್ರಾಯಪಟ್ಟರು. ನಾಗಾವಿ ಎಕ್ಸ್‌ಪ್ರೆಸ್ ಕಾರ್ಯಾಲಯದಲ್ಲಿ ನಾಗಾವಿ ಸಾಹಿತ್ಯ ಸಾಂಸ್ಕೃತಿಕ ಪರಿಷತ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಅಭಿಮಾನದ ಸನ್ಮಾನ ಸಮಾರಂಭದಲ್ಲಿ ಪದವೀಧರ ಶಿಕ್ಷಕರ ಸಂಘದ ಅಧ್ಯಕ್ಷ ಸಂಗಣ್ಣಗೌಡ ನಾಲವಾರ, ಪಂಚ್ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸುರೇಶ್ ಗುತ್ತೇದಾರ ಹಾಗೂ ಹಿರಿಯ ನಾಗರಿಕರ ಸಂಘದ ಜಿಲ್ಲಾ ಮಟ್ಟದ ಪ್ರಶಸ್ತಿ ಪುರಸ್ಕೃತ ಮಹ್ಮದ್ ಇಬ್ರಾಹಿಂ ಅವರಿಗೆ ಸನ್ಮಾನಿಸಿ ಗೌರವಿಸಿ ಅವರು ಮಾತನಾಡಿದರು. ಸನ್ಮಾನ ಸ್ವೀಕರಿಸಿದ ಸಂಗಣ್ಣಗೌಡ ನಾಲವಾರ, ಸುರೇಶ್ ಗುತ್ತೇದಾರ ಕರದಾಳ ಮತ್ತು ಮಹ್ಮದ್ ಇಬ್ರಾಹಿಂ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಶಾಂತಕುಮಾರ್ ಮಳಖೇಡ, ರಾಜಶೇಖರ್ ಬಳ್ಳಾ, ದೇವಪ್ಪ ನಂದೂರಕರ್, ಹಾಜಿ ಸಾಬ್ ಮುಲ್ಲಾ, ಜಗನ್ನಾಥ ಬಡಿಗೇರ, ವಿಜಯಕುಮಾರ್ ಭಂಕಲಗಿ, ವಿಠಲ್ ಕಟ್ಟಿಮನಿ, ರವಿಶಂಕರ್ ಬುರ್ಲಿ, ಸಂತೋಷ ಕಟ್ಟಿಮನಿ, ಪ್ರಕಾಶ್ ವಿಶ್ವಕರ್ಮ, ಚಂದ್ರು ಕಾಶಿ ಸೇರಿದಂತೆ ಇತರರು ಇದ್ದರು. ನರಸಪ್ಪ ಚಿನ್ನಕಟ್ಟಿ ನಿರೂಪಿಸಿ ವಂದಿಸಿದರು.


ಉದಯವಾಹಿನಿ ಚಿತ್ರ

## ಹಕ್ಕುಪತ್ರ ವಿತರಣೆಗೆ ತಾಂತ್ರಿಕ ಸಮಸ್ಯೆ ಸರಿಪಡಿಸಿ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಬೈಂದೂರು**

ತಾಲ್ಲೂಕು ವ್ಯಾಪ್ತಿಯ ಅಕ್ರಮ ಸಕ್ರಮ ಕಡತಗಳ ಹಾಗೂ 94 ಸಿ, 94 ಸಿಸಿ ಅರ್ಜಿಗಳ ವಿಲೇವಾರಿಯನ್ನು 3 ವರ್ಷಗಳಿಂದ ತಾಂತ್ರಿಕ ಸಮಸ್ಯೆಗಳ ನೆಪವೊಡ್ಡಿ ವಿನಾ ಕಾರಣ ವಿಳಂಬ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಬಂದ ದೂರು ಆದರಿಸಿ ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿದ ಶಾಸಕ ಗುರುರಾಜ್ ಗಂಟಿಹೊಳೆ ಅವರು 10 ದಿವಸಗಳ ಒಳಗೆ ತಾಂತ್ರಿಕ ಸಮಸ್ಯೆ ಸರಿಪಡಿಸಿ ಅರ್ಹರಿಗೆ ಹಕ್ಕುಪತ್ರ ವಿತರಿಸಲು ಕ್ರಮ ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ತಾಲ್ಲೂಕು ಕಚೇರಿ ಅವ್ಯವಸ್ಥೆ ಬಗ್ಗೆ ಜನರು ಹೈರಾಣಾಗಿದ್ದಾರೆ. ಅಕ್ರಮ ಸಕ್ರಮ ಅರ್ಜಿಗಳ ವಿಲೇವಾರಿಯಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಸರ್ಕಾರ ತಂತ್ರಾಂಶಗಳನ್ನು ಅಳವಡಿಸಿದ್ದರೂ ಆ ತಂತ್ರಾಂಶಗಳನ್ನು ಅರ್ಥೈಸಿಕೊಳ್ಳುವಲ್ಲಿ ಅಧಿಕಾರಿಗಳು ಅಸಡ್ಡೆ ವಹಿಸುತ್ತಿದ್ದಾರೆ ಎಂದು ಶಾಸಕ ಆರೋಪಿಸಿದರು. ಗ್ರಾಮೀಣ ಭಾಗದ ಬಡರೈತರ ಅಕ್ರಮ ಸಕ್ರಮ ಅರ್ಜಿಗಳು, ಆರ್.ಆರ್.ಟಿ. ಅರ್ಜಿಗಳ ಬಗ್ಗೆ ಕಾಳಜಿ ತೋರಿಸದೆ ಮೂರು ವರ್ಷಗಳಲ್ಲಿ ನೀಡಿದ ಸೂಚನೆಗಳ ಹೊರತಾಗಿಯೂ ಅರ್ಜಿ ವಿಲೇವಾರಿಗೆ ವಿಳಂಬ ತೋರಿಸುತ್ತಿರುವ ತಹಶೀಲ್ದಾರ್, ಸರ್ವೇ ಇಲಾಖೆ ಅಧಿಕಾರಿಗಳು, ಸಂಬಂಧಪಟ್ಟ ಕಚೇರಿ ವಿಷಯ ನಿರ್ವಾಹಕರನ್ನು ತರಾಟೆಗೆ ತೆಗೆದುಕೊಂಡರು.

## ನೇಕಾರಿಕೆ ಕೇವಲ ವೃತ್ತಿಯಲ್ಲ– ಜೀವಂತ ಸಂಸ್ಕೃತಿ

**ಉದಯವಾಹಿನಿ, ಹೊಸಪೇಟೆ**

ತಮ್ಮ ಪವಿತ್ರವಾದ ನೇಯ್ಗೆಯಿಂದ ಮಾನವನ್ನು ಉಳಿಸುವ ಮನೋಧರ್ಮ ನೇಕಾರರದ್ದು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ ಕುಮಾರ ಗೌರೀಶ ಉದ್ನೂರ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದಲ್ಲಿ ಜರುಗಿದ ಪಾಕ್ಷಿಕ ಮಾತು–16ರ ಕಾರ್ಯಕ್ರಮದಲ್ಲಿ ನೇಕಾರ ಸಮಾಜ ಮತ್ತು ಸಂಸ್ಕೃತಿ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ನೇಕಾರ ಸಮಾಜವೆಂದರೆ ಅದು ಕೇವಲ ವೃತ್ತಿ ಆಧಾರಿತ ಸಮಾಜವಲ್ಲ ಬದಲಿಗೆ ಅದೊಂದು ಜೀವಂತ ಸಂಸ್ಕೃತಿ. ರೈತ ಮತ್ತು ನೇಕಾರ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ರೈತ ಪ್ರಾಣವನ್ನು ಕಾಪಾಡುತ್ತಾನೆ, ನೇಕಾರ ಮಾನ ಕಾಪಾಡುತ್ತಾನೆ. ರೈತ ಬೆಳೆದ ಹತ್ತಿಯಿಂದ ನೇಕಾರ ಬಟ್ಟೆಗಳನ್ನು ತಯಾರಿಸುತ್ತಾನೆ. ನೇಕಾರರು ಶಾಂತಿ ಪ್ರಿಯರು. ಕಾಯಕದ ಮೇಲೆ ನಂಬಿಕೆ, ಶ್ರದ್ಧೆ, ನಿಷ್ಠೆಯುಳ್ಳವರು. ಪವಿತ್ರವಾದ ನೇಯ್ಗೆಯಿಂದ ಮಾನವನ್ನು ಉಳಿಸುವ ಮನೋಧರ್ಮ ನೇಕಾರರದ್ದು ಎಂದರು.



ಉದಯವಾಹಿನಿ ಚಿತ್ರ

## ಪದವಿ ಇಲ್ಲದೆ ವೈದ್ಯ ವೃತ್ತಿ ನಡೆಸುತ್ತಿದ್ದ ಕ್ಲಿನಿಕ್ ಸೀಜ್

**ಉದಯವಾಹಿನಿ, ಬೀದರ್**

ಔರಾದ್ ತಾಲ್ಲೂಕಿನ ಚಾಂದೋರಿ ಗ್ರಾಮದಲ್ಲಿ ಪ್ರೇಮ್ ಕುಮಾರ್ ಎಂಬುವವರು ಯಾವುದೇ ಅರ್ಹ ವೈದ್ಯಕೀಯ ಪದವಿ ಇಲ್ಲದೆ ವೈದ್ಯ ವೃತ್ತಿ ನಡೆಸುತ್ತಿದ್ದುದರಿಂದ ಅವರ ಕ್ಲಿನಿಕ್ ಅನ್ನು ಸೀಜ್ ಮಾಡಲಾಗಿದೆ ಎಂದು ಬೀದರ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಅನೀಲ್ ಕುಮಾರ್ ಚಿಂತಾಮಣಿ ತಿಳಿಸಿದ್ದಾರೆ.

ಚಾಂದೋರಿ ಗ್ರಾಮದಲ್ಲಿ ಪ್ರೇಮ್ ಕುಮಾರ್ ಅವರು ಯಾವುದೇ ಅರ್ಹ ವೈದ್ಯಕೀಯ ಪದವಿ ಇಲ್ಲದೆ ಅಕ್ರಮವಾಗಿ ವೈದ್ಯ ವೃತ್ತಿ ನಡೆಸುತ್ತಿರುವ ಬಗ್ಗೆ ಮಾಹಿತಿ ತಿಳಿದು, 2026ರ ಅಕ್ಟೋಬರ್ 5 ರಂದು ರಾತ್ರಿ 7 ಗಂಟೆಗೆ ಅವರ ಕ್ಲಿನಿಕ್ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ಸೀಜ್ ಮಾಡಲಾಗಿದೆ.

ಬೀದರ್ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸೂಚನೆಯಂತೆ ಈ ದಾಳಿ ನಡೆಸಲಾಗಿದೆ. ಈ ಮೊದಲು ಪ್ರೇಮ್ ಕುಮಾರ್ ಅವರು ಮುಧೋಳ (ಬಿ) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸರ್ಕಾರಿ ಶುಶ್ರೂಷಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗಲೂ ಖಾಸಗಿ ಕ್ಲಿನಿಕ್ ನಡೆಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಆಗಲೂ ಅವರ ಕ್ಲಿನಿಕ್ ಮೇಲೆ ದಾಳಿ ನಡೆಸಿ ಸೀಜ್ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು 2026ರ ಜನವರಿ 31 ರಂದು ಅವರನ್ನು ಸರ್ಕಾರಿ ಸೇವೆಯಿಂದ ಅಮಾನತುಗೊಳಿಸಿದ್ದರು. ಅಮಾನತಾಗಿದ್ದರೂ ಸಹ ಪ್ರೇಮ್ ಕುಮಾರ್ ಅವರು ಖಾಸಗಿಯಾಗಿ ವೈದ್ಯ ವೃತ್ತಿ ಮುಂದುವರಿಸಿದ್ದರಿಂದ, ಗ್ರಾಮಸ್ಥರು ಬೀದರ್ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾಟ್ಸಾಪ್‌ಗೆ ದೂರು ಸಲ್ಲಿಸಿದ್ದರು. ಈ ದೂರಿನ ಆಧಾರದ ಮೇಲೆ ಪ್ರಸ್ತುತ ದಾಳಿ ನಡೆಸಿ ಕ್ಲಿನಿಕ್ ಸೀಜ್ ಮಾಡಲಾಗಿದೆ.

ಫಾರಂ ನಂ.7ರ ದುರ್ಬಳಕೆ ಮಾಡಿಕೊಂಡು ನೈಜ ಮತದಾರರ ಹೆಸರುಗಳನ್ನು ಕೈಬಿಡಲು ವ್ಯವಸ್ಥಿತವಾಗಿ ಯತ್ನಿಸಲಾಗುತ್ತಿದೆ ಎಂಬ ಆರೋಪ

# ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ಆರೋಪ

**ಉದಯವಾಹಿನಿ, ಮಂಗಳೂರು**

ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಫಾರಂ ನಂ.7ರ ದುರ್ಬಳಕೆ ಮಾಡಿಕೊಂಡು ನೈಜ ಮತದಾರರ ಹೆಸರುಗಳನ್ನು ಕೈಬಿಡಲು ವ್ಯವಸ್ಥಿತವಾಗಿ ಯತ್ನಿಸಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ನಿರ್ದೇಶನದ ಮೇರೆಗೆ ಮೂರು ಪ್ರತ್ಯೇಕ ಎಫ್‌ಐಆರ್‌ಗಳು (ಕಾವೂರು ಠಾಣೆಯಲ್ಲಿ ಎರಡು ಮತ್ತು ಬೆಳ್ತಂಗಡಿ ಠಾಣೆಯಲ್ಲಿ ಒಂದು) ದಾಖಲಾಗಿವೆ.

1. ಫಾರಂ ನಂ.7ರ ದುರ್ಬಳಕೆ
2. ಮೂರು ಪ್ರತ್ಯೇಕ ಎಫ್‌ಐಆರ್
3. ಹೆಸರುಗಳನ್ನು ಕೈಬಿಡಲು ವ್ಯವಸ್ಥಿತ

ಮಂಗಳೂರಿನ ಜೆಎಂಎಫ್‌ಸಿ 3ನೇ ನ್ಯಾಯಾಲಯದ ಆದೇಶದನ್ವಯ ಕಾವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದೆ ಎಂದು ದ.ಕ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪದ್ಮರಾಜ್ ಆರ್. ಪೂಜಾರಿ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ ತಿಳಿಸಿದರು. ಬುಧವಾರ ಮಂಗಳೂರಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಮಾಹಿತಿ ನೀಡಿದರು.

ಮೂಡುಶೆಡ್ಡೆ ಗ್ರಾಮದಲ್ಲಿ ಜೀವಂತವಾಗಿದ್ದು, ಗ್ರಾಮದಲ್ಲೇ ವಾಸಿಸುತ್ತಿರುವ ಹಾಗೂ ಕರಡು ಮತದಾರರ ಪಟ್ಟಿಯ ಮ್ಯಾಪಿಂಗ್‌ನಲ್ಲಿ ಹೆಸರಿರುವ ಮತದಾರರನ್ನು ಮೃತಪಟ್ಟಿದ್ದಾರೆ ಅಥವಾ ಊರು ಬಿಟ್ಟಿದ್ದಾರೆ ಎಂದು ಸುಳ್ಳು ಆಕ್ಷೇಪಣೆ ಸಲ್ಲಿಸಿರುವುದರ ವಿರುದ್ಧ ಖಾಸಗಿ ದೂರು ದಾಖಲಿಸಲಾಗಿತ್ತು.



ಉದಯವಾಹಿನಿ ಚಿತ್ರ

ಮೂಡುಶೆಡ್ಡೆ ಗ್ರಾಮದ ನಿವಾಸಿಗಳಾದ ಅನೀಶಾ ಮತ್ತು ಆಯಿಷಾ ಬಾನು ಅವರ ಹೆಸರಿನಲ್ಲಿ ದೂರು ದಾಖಲಾಗಿದೆ. ಮೂಡುಶೆಡ್ಡೆಯ ಅಬ್ದುಲ್ ಲತೀಫ್, ನಫೀಸಾ, ಮೊಹಮ್ಮದ್ ಅಲ್ತಾಫ್, ಮೊಹಮ್ಮದ್ ಆಸಿಫ್ ಹಾಗೂ ಫಯಾಜ್ ಅವರ ಹೆಸರಿನಲ್ಲಿ ಮತ್ತೊಂದು ದೂರು ದಾಖಲಾಗಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ನೈಜ ಮತದಾರರ ಹೆಸರುಗಳನ್ನು ಅಕ್ರಮವಾಗಿ ತೆಗೆದುಹಾಕಲು ಯತ್ನಿಸಿದ ಆರೋಪದಡಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ ಎಂದು ತಿಳಿಸಿದ್ದಾರೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ ಮಾತನಾಡಿ, ಮೂಲ್ಕಿ–ಮೂಡುಬಿದಿರೆ ವಿಧಾನಸಭಾ ಕ್ಷೇತ್ರದ ಮೂಡುಶೆಡ್ಡೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಂದೇ ಕೈಬರಹದಲ್ಲಿ ಕಿಶನ್ ಎಂಬಾತನ ಹೆಸರಿನಲ್ಲಿ 45, ರಿತೇಶ್ ಹೆಸರಿನಲ್ಲಿ 9, ಯುವರಾಜ್ ಹೆಸರಿನಲ್ಲಿ 10 ಹಾಗೂ ಶಶಿಕಲಾ ಹೆಸರಿನಲ್ಲಿ 4 ಸೇರಿದಂತೆ ಒಟ್ಟು 68 ಜನರ ಹೆಸರುಗಳನ್ನು ಕೈಬಿಡಲು ನಮೂನೆ 7ನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ದ.ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪದ್ಮರಾಜ್ ಆರ್. ಪೂಜಾರಿ ಮಾತನಾಡಿ ಬಿಜೆಪಿ ಕಾರ್ಯಕರ್ತರು ಪ್ರತ್ಯೇಕ ಕವರಿಂಗ್ ಲೆಟರ್ ಜತೆ ಅಲ್ಪಸಂಖ್ಯಾತ ಮುಸ್ಲಿಮರು, ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಹಾಗೂ ಪರಿಶಿಷ್ಟ ಜಾತಿ/ಪಂಗಡದ ಮತದಾರರ ಪ್ರತ್ಯೇಕ ಪಟ್ಟಿ ತಯಾರಿಸಿ ಚುನಾವಣಾ ಅಧಿಕಾರಿಗಳಿಗೆ ಅಕ್ರಮವಾಗಿ ಸಲ್ಲಿಸುತ್ತಿದ್ದಾರೆ. ಜೋಕಟ್ಟೆಯಲ್ಲಿ 61 ಮಂದಿ ಕ್ರಿಶ್ಚಿಯನ್ ಸಮುದಾಯದ ಮತದಾರರ ಹೆಸರುಗಳನ್ನು ತೆಗೆಯಲು ಆಕ್ಷೇಪಣೆ ಸಲ್ಲಿಸಿರುವುದು ಬೆಳಕಿಗೆ ಬಂದಿದೆ.ಬೂತ್ ಮಟ್ಟದಲ್ಲಿ ಕಾಂಗ್ರೆಸ್‌ನ ಬಿಎಲ್‌ಎ 2 ಕಾರ್ಯಕರ್ತರನ್ನು ಸಕ್ರಿಯಗೊಳಿಸಲಾಗಿದ್ದು, ಯಾವುದೇ ಒಬ್ಬ ನೈಜ ಮತದಾರನ ಹೆಸರೂ ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಕಾಂಗ್ರೆಸ್ ಎಚ್ಚರ ವಹಿಸಲಿದೆ ಎಂದು ಹೇಳಿದರು.

> ಸುಳ್ಳು ಪಟ್ಟಿ ನೀಡಿದವರ ಮೇಲೆ ಕ್ರಮ ಜರುಗಿದರೆ ಪೊಲೀಸ್ ಠಾಣೆಗೆ ನುಗ್ಗುತ್ತೇವೆ ಎಂದು ಬಿಜೆಪಿಯ ಮಾಜಿ ಮುಖ್ಯಮಂತ್ರಿಗಳಂತಹ ಹಿರಿಯ ನಾಯಕರು ಹೇಳಿಕೆ ನೀಡುತ್ತಿರುವುದು ಅವರ ಕಾನೂನು ವಿರೋಧಿ ಮನಸ್ಥಿತಿಯನ್ನು ತೋರಿಸುತ್ತದೆ ಎಂದರು.
> – ಪದ್ಮರಾಜ್ ಆರ್. ಪೂಜಾರಿ, ದ.ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

### ನೂರಾರು ಅರ್ಜಿಗಳು ಬಂದಿವೆ

ಈ ಅಕ್ರಮಕ್ಕೆ ಸಂಬಂಧಿಸಿದಂತೆ ಕಿಶನ್ ಸೇರಿದಂತೆ ನಾಲ್ವರ ವಿರುದ್ಧ ಕಾವೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಅವರು ತಿಳಿಸಿದರು.ಮೂಡುಬಿದಿರೆ ವ್ಯಾಪ್ತಿಯಲ್ಲಿ ಸ್ವೀಕೃತವಾದ 129 ಅರ್ಜಿಗಳ ಪೈಕಿ 64 ಅರ್ಜಿಗಳು ಕೇವಲ ಮೂಡುಶೆಡ್ಡೆ ಗ್ರಾಮಕ್ಕೆ ಸಂಬಂಧಿಸಿದ್ದಾಗಿದೆ. ಬೆಳ್ತಂಗಡಿಯಲ್ಲೂ ಇಂತಹ ನೂರಾರು ಅರ್ಜಿಗಳು ಬಂದಿವೆ ಎಂದರು.

# ಸ್ಮೃತಿ ಮಂಧಾನಗೆ ಭಾರತ ತಂಡದ ನಾಯಕಿ ಪಟ್ಟ

ಭಾರತೀಯ ಮಹಿಳಾ ತಂಡದ ಎಲ್ಲಾ ಮಾದರಿಯ ನಾಯಕತ್ವದಿಂದ ಹಿರಿಯ ಆಟಗಾರ್ತಿ ಹರ್ಮನ್‌ಪ್ರೀತ್ ಕೌರ್ ಕೆಳಗಿಳಿದಿದ್ದು, ಭಾರತೀಯ ಕ್ರಿಕೆಟ್ ಅಭಿಮಾನಿಗಳಿಗೆ ಅಚ್ಚರಿಯ ಸುದ್ದಿಯಾಗಿದೆ. ನಂತರ, ಅಭಿಮಾನಿಗಳ ಮನಸ್ಸಿನಲ್ಲಿ ಮೂಡಿದ ತಕ್ಷಣದ ಪ್ರಶ್ನೆಯೆಂದರೆ ಮುಂದಿನ ನಾಯಕಿ ಯಾರು?. ಈ ಪ್ರಶ್ನೆಗೆ ಬಿಸಿಸಿಐ ಉತ್ತರ ನೀಡಿದೆ.

ಮುಂಬರುವ ಜಿಂಬಾಬ್ವೆ ವಿರುದ್ಧದ ಏಕದಿನ ಮತ್ತು ಟಿ20 ಸರಣಿಗೆ ಸ್ಮೃತಿ ಮಂಧಾನ ಅವರನ್ನು ನಾಯಕಿಯಾಗಿ ಘೋಷಿಸಿದೆ. ಅವರು ತಂಡದ ಮುಂದಿನ ಕಾಯಂ ನಾಯಕಿಯಾಗಿ ಮುಂದುವರಿಯಲಿದ್ದಾರೆ ಎಂದು ಬಿಸಿಸಿಐ ತಿಳಿಸಿದೆ. ಈ ಸರಣಿ ಭಾರತದಲ್ಲಿ ನಡೆಯಲಿದೆ.

**ಬಿಸಿಸಿಐಗೆ ಕೃತಜ್ಞತೆ ಸಲ್ಲಿಸಿದ ಮಂಧಾನ:** ಭಾರತ ರಾಷ್ಟ್ರೀಯ ಕ್ರಿಕೆಟ್ ತಂಡವನ್ನು ಮುನ್ನಡೆಸುವ ಅವಕಾಶ ನೀಡಿದ ಬಿಸಿಸಿಐಗೆ ಸ್ಮೃತಿ ಮಂಧಾನ ಅವರು ಗೌರವ ಸಲ್ಲಿಸಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, "ಭಾರತ ತಂಡವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನೀಡಿರುವುದು ಬಹಳ ವಿಶೇಷ ಗೌರವ. ಭಾರತವನ್ನು ಪ್ರತಿನಿಧಿಸುವುದು ನನಗೆ ಯಾವಾಗಲೂ ದೊಡ್ಡ ವಿಷಯ. ಈಗ ತಂಡವನ್ನು ಮುನ್ನಡೆಸುವ ಅವಕಾಶ ಸಿಕ್ಕಿದೆ. ಬಿಸಿಸಿಐ, ಆಯ್ಕೆದಾರರು, ತಂಡದ ಸದಸ್ಯರು ಮತ್ತು ನನ್ನ ವೃತ್ತಿ ಜೀವನ ಬೆಂಬಲಿಸಿದ ಎಲ್ಲರಿಗೂ ಕೃತಜ್ಞಳಾಗಿದ್ದೇನೆ" ಎಂದು ತಿಳಿಸಿದ್ದಾರೆ.

"ಹಿರಿಯ ಸಹ ಆಟಗಾರ್ತಿ ಹರ್ಮನ್‌ಪ್ರೀತ್ ಕೌರ್ ಅವರು ನಾಯಕಿಯಾಗಿ ತಂಡಕ್ಕೆ ನೀಡಿದ ಕೊಡುಗೆ ಸ್ಮರಣೀಯ. ಅವರು ತಂಡವನ್ನು ಬದ್ಧತೆಯಿಂದ ಮುನ್ನಡೆಸಿದ್ದಾರೆ. ಹೊಸ ಜವಾಬ್ದಾರಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ತಂಡದೊಂದಿಗೆ ಕೆಲಸ ಮಾಡಲು, ದಾರಿ ಉದ್ದಕ್ಕೂ ಕಲಿಯಲು ಮತ್ತು ಭಾರತೀಯ ಕ್ರಿಕೆಟ್ ಮುಂದೆ ಕೊಂಡೊಯ್ಯಲು ಅತ್ಯುತ್ತಮ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ.



**ಮಂಧಾನ ನಾಯಕತ್ವದ ಅನುಭವ:** ಎಡಗೈ ಆರಂಭಿಕ ಆಟಗಾರ್ತಿ ಈಗಾಗಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ನಾಯಕತ್ವ ವಹಿಸಿದ ಅನುಭವವಿದ್ದು, ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯೂಪಿಎಲ್) ನಲ್ಲಿ ಎರಡು ಪ್ರಶಸ್ತಿಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಅಲ್ಲದೇ, ಮಹಿಳಾ ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿ ಸೇರಿದಂತೆ ಹಲವು ದಾಖಲೆಗಳನ್ನು ಹೊಂದಿದ್ದಾರೆ. ನಾಯಕಿಯಾಗುವುದಕ್ಕೂ ಮೊದಲು ಭಾರತ ತಂಡದ ಉಪನಾಯಕಿಯಾಗಿದ್ದರು.

**ತಂಡದಲ್ಲಿ ಗಮನಾರ್ಹ ಬದಲಾವಣೆಗಳು:** ಮೂರು ಏಕದಿನ ಮತ್ತು ಮೂರು ಟಿ–20 ಪಂದ್ಯಗಳ ಸರಣಿಗೆ ಭಾರತ ಮಹಿಳಾ ತಂಡವನ್ನು ಆಯ್ಕೆ ಮಾಡಲಾಗಿದೆ. ಎರಡೂ ತಂಡಕ್ಕೆ ಸ್ಮೃತಿ ಮಂಧಾನ ನಾಯಕಿಯಾಗಿದ್ದರೆ, ಟಿ–20 ಮಾದರಿಯಲ್ಲಿ ಶಫಾಲಿ ವರ್ಮಾಗೆ ಉಪನಾಯಕಿ ಸ್ಥಾನ ನೀಡಲಾಗಿದೆ. ಏಕದಿನ ಮಾದರಿಯಲ್ಲಿ ದೀಪ್ತಿ ಶರ್ಮಾ ಉಪನಾಯಕಿಯಾಗಿರಲಿದ್ದಾರೆ.

ಇತ್ತೀಚೆಗೆ ನಡೆದ ಭಾರತ ಎ vs ಆಸ್ಟ್ರೇಲಿಯಾ ಎ ಸರಣಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಬಲಗೈ ಬ್ಯಾಟ್ಸ್‌ಮನ್ ನಿಕಿ ಪ್ರಸಾದ್ ತಂಡಕ್ಕೆ ಮರಳಿದ್ದಾರೆ. ಸೆಪ್ಟೆಂಬರ್ 2023 ರಲ್ಲಿ ಕೊನೆಯ ಟಿ20 ಆಡಿದ ನಂತರ ಮಿನ್ನು ಮಣಿ ಕೂಡ ಟಿ20 ತಂಡಕ್ಕೆ ಮರಳಿದ್ದಾರೆ.

ಇಂಗ್ಲೆಂಡ್‌ನಲ್ಲಿ ಭಾರತ ಎ ಪರ ನೀಡಿದ ಪ್ರದರ್ಶನದಿಂದಾಗಿ ತೇಜಲ್ ಹಸಬ್ನಿಸ್ ಟಿ20 ತಂಡಕ್ಕೆ ಮರಳಿದರೆ, ಸಯಾಲಿ ಸತ್ಘರೆ ಏಕದಿನ ತಂಡಕ್ಕೆ ಮರಳಿದ್ದಾರೆ. ಜೆಮಿಮಾ ರೊಡ್ರಿಗಸ್ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದು ತಂಡದಿಂದ ಹೊರಗುಳಿದಿದ್ದಾರೆ.

**ಭಾರತ ಟಿ20 ತಂಡ:** ಸ್ಮೃತಿ ಮಂಧಾನ (ನಾಯಕಿ), ಶಫಾಲಿ ವರ್ಮಾ (ಉಪನಾಯಕಿ), ನಿಕಿ ಪ್ರಸಾದ್, ಹರ್ಮನ್‌ಪ್ರೀತ್ ಕೌರ್, ಅನುಷ್ಕಾ ಶರ್ಮಾ, ರಿಚಾ ಘೋಷ್, ಜಿ.ಕಮಲಿನಿ, ದೀಪ್ತಿ ಶರ್ಮಾ, ಪ್ರೇಮಾ ರಾವತ್, ಶ್ರೀ ಚರಣಿ, ನಂದಿನಿ ಶರ್ಮಾ, ಕ್ರಾಂತಿ ಗೌಡ್, ಅರುಂಧತಿ ರೆಡ್ಡಿ, ಮಿನ್ನು ಮಣಿ ಕಲಿತಾ.

**ಭಾರತ ಏಕದಿನ ತಂಡ:** ಸ್ಮೃತಿ ಮಂಧಾನ (ನಾಯಕಿ), ಶಫಾಲಿ ವರ್ಮಾ, ಪ್ರತೀಕಾ ರಾವಲ್, ಹರ್ಮನ್‌ಪ್ರೀತ್ ಕೌರ್, ಹರ್ಲೀನ್ ಡಿಯೋಲ್, ತೇಜಲ್ ಹಸಬ್ನಿಸ್, ದೀಪ್ತಿ ಶರ್ಮಾ (ಉಪನಾಯಕಿ) , ರಿಚಾ ಘೋಷ್, ಯಾಸ್ತಿಕಾ ಭಾಟಿಯಾ, ವೈಷ್ಣವಿ ಶರ್ಮಾ, ನಂದಿನಿ ಶರ್ಮಾ, ಶ್ರೀಚರಣಿ, ಕ್ರಾಂತಿ ಗತುರ್, ಕ್ರಾಂತಿ ಗತುರ್.

## ಟಿ20ಯಲ್ಲಿ ಶಫಾಲಿ, ಏಕದಿನದಲ್ಲಿ ದೀಪ್ತಿ ಉಪನಾಯಕಿ

# ಗಾಲ್ಫ್ ಕೇವಲ ಶ್ರೀಮಂತರ ಕ್ರೀಡೆ ಅಲ್ಲ: ಚಿನ್ನದ ಹುಡುಗಿ ಪ್ರಣವಿ ಅರಸ್

ಏಷ್ಯನ್ ಗೇಮ್ಸ್‌ನಲ್ಲಿ ದೇಶಕ್ಕೆ ಪದಕ ಗೆದ್ದುಕೊಟ್ಟಿದ್ದು ಹೆಮ್ಮೆಯ ಸಂಗತಿ. ಆದರೆ, ಈ ಸಾಧನೆ ಅಷ್ಟು ಸುಲಭವಾಗಿರಲಿಲ್ಲ ಎಂದು ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಗಾಲ್ಫರ್ ಪ್ರಣವಿ ಅರಸ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.



ಮೈಸೂರು ಮೂಲದ 22 ವರ್ಷದ ಪ್ರಣವಿ ಅರಸ್ ಏಷ್ಯನ್ ಗೇಮ್ಸ್‌ನಲ್ಲಿ ಇತಿಹಾಸ ನಿರ್ಮಿಸಿದ್ದು, ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳಾ ಗಾಲ್ಫರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪದಕ ಗೆದ್ದ ಬಳಿಕ ಮೈಸೂರಿಗೆ ಆಗಮಿಸಿದ ಅವರಿಗೆ ಭವ್ಯ ಸ್ವಾಗತ ನೀಡಲಾಯಿತು. ತೆರೆದ ಜೀಪಿನಲ್ಲಿ ಅವರನ್ನು ನಗರದ ಮುಖ್ಯ ಬೀದಿಯಲ್ಲಿ ಮೆರವಣಿಗೆ ಮಾಡುವ ಮೂಲಕ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಪ್ರಣವಿ ಅರಸ್ ಅವರನ್ನು ಕ್ರೀಡಾಭಿಮಾನಿಗಳು ಹಾಗೂ ಕುಟುಂಬಸ್ಥರು ಸಂಭ್ರಮದಿಂದ ಬರಮಾಡಿಕೊಂಡರು. ಸಂಸದ ಯದುವೀರ್ ಒಡೆಯರ್ ಅವರು ಸಾಧಕಿಗೆ ಮೈಸೂರು ಪೇಟ ಹಾಗೂ ಶಾಲು ಹೊದಿಸಿ ಸನ್ಮಾನಿಸಿದರು.

ವೈಯಕ್ತಿಕ ವಿಭಾಗದಲ್ಲಿ ಚಿನ್ನ ಹಾಗೂ ತಂಡವಾಗಿ ಗೆದ್ದ ಬೆಳ್ಳಿ **ಗಾಲ್ಫ್ ಕೇವಲ ಶ್ರೀಮಂತರ ಕ್ರೀಡೆ ಅಲ್ಲ:** ಚಿನ್ನದ ಹುಡುಗಿ ಪ್ರಣವಿ ಅರಸ್

'ದಕಗಳನ್ನು ಅಲ್ಲಿ ಸೇರಿದ್ದ ನೂರಾರು ಕ್ರೀಡಾಭಿಮಾನಿಗಳ ತೋರಿಸಿದ ಪ್ರಣವಿ ಅರಸ್, ಅಭಿಮಾನಿಗಳು ನೀಡಿದ ಭವ್ಯ ಸ್ವಾಗತಕ್ಕೆ ಸಂತಸ ವ್ಯಕ್ತಪಡಿಸಿದರು.

**ಚಿನ್ನದ ಹುಡುಗಿ ಹೇಳಿದ್ದಿಷ್ಟು:** ದೇಶಕ್ಕೆ ಪದಕ ಗೆದ್ದು ಕೊಡುವುದು ಹೆಮ್ಮೆಯ ಸಂಗತಿ. ಚಿನ್ನ ಗೆದ್ದಿರುವುದಕ್ಕೆ ತುಂಬಾನೇ ಸಂತಸವಾಗುತ್ತಿದೆ. ಆದರೆ, ಈ ಸಾಧನೆಯ ಹಾದಿ ಅಷ್ಟು ಸುಲಭದ್ದಾಗಿರಲಿಲ್ಲ. ನಿತ್ಯ 5 ರಿಂದ 6 ಗಂಟೆಗಳ ಅಭ್ಯಾಸ ಮಾಡುತ್ತಿದ್ದೆ. ಪ್ರತಿ ದಿನವೂ ಸವಾಲಿನದ್ದಾಗಿತ್ತು. ಮನೆಯವರ ಪ್ರೋತ್ಸಾಹವಿಲ್ಲದೇ ನಾನಿಂದು ಈ ಸ್ಥಾನದಲ್ಲಿ ನಿಲ್ಲಲಾಗುತ್ತಿರಲಿಲ್ಲ ಎಂದು ಕುಟುಂಬದ ಸಹಕಾರ ಸ್ಮರಿಸಿದರು.

**ಒಲಿಂಪಿಕ್ಸ್ ಮುಂದಿನ ಗುರಿ:** ತಮ್ಮ ಮುಂದಿನ ಗುರಿ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗಾಲ್ಫರ್ ಪ್ರಣವಿ ಅರಸ್, ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವುದು ನನ್ನ ಮುಂದಿನ ಗುರಿ. ಆ ಪ್ರಯತ್ನ ಈಗಿನಿಂದಲೇ ಶುರುವಾಗಿದೆ ಎಂದು ತಿಳಿಸಿದರು.

**ಗಾಲ್ಫ್ ಶ್ರೀಮಂತರ ಕ್ರೀಡೆ ಅಲ್ಲ:** ಸಾಮಾನ್ಯವಾಗಿ ಎಲ್ಲರೂ ಗಾಲ್ಫ್ ಎಂದರೆ ಅದು ಕೇವಲ ಉಳ್ಳವರಿಗೆ ಮಾತ್ರವೇ ಸೀಮಿತವಾಗಿರುವ ಕ್ರೀಡೆ ಅಂತ ಭಾವಿಸುತ್ತಾರೆ. ಆದರೆ, ಆ ಭಾವನೆ ತಪ್ಪು. ಗಾಲ್ಫ್ ಅನ್ನು ಎಲ್ಲರೂ ಆಡಬಹುದು. ಒಂದು ಬಾರಿ ನೀವು ಆಡಲು ಪ್ರಾರಂಭಿಸಿದರೆ ಪ್ರೋತ್ಸಾಹ ಸೇರಿದಂತೆ ಎಲ್ಲವೂ ಸಿಗಲಿದೆ ಎಂದು ಯುವ ಕ್ರೀಡಾಭಿಮಾನಿಗಳಿಗೆ ಕೆಲವು ಸಲಹೆ ನೀಡಿದರು.

# ಗಂಭೀರ್, ಗಿಲ್‌ಗೆ ಹೊಸ ತಲೆನೋವು; ನ್ಯೂಜಿಲೆಂಡ್ ಪ್ರವಾಸದಿಂದ ಕನ್ನಡಿಗ ಪ್ರಸಿದ್ಧ್ ಕೃಷ್ಣ ಹೊರಗುಳಿಯುವ ಸಾಧ್ಯತೆ!

ಭಾರತೀಯ ಪುರುಷರ ಕ್ರಿಕೆಟ್ ತಂಡವು ಮತ್ತೊಂದು ಗಾಯದ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಏಕದಿನ ಮತ್ತು ಟೆಸ್ಟ್ ಪಂದ್ಯಗಳಲ್ಲಿ ನಿಯಮಿತವಾಗಿ ಆಡುತ್ತಿರುವ ವೇಗದ ಬೌಲರ್ ಪ್ರಸಿದ್ಧ್ ಕೃಷ್ಣ, ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಏಕದಿನ ಪಂದ್ಯದ ವೇಳೆ 'ಹ್ಯಾಮ್‌ಸ್ಟ್ರಿಂಗ್' ಗಾಯಕ್ಕೆ ತುತ್ತಾಗಿದ್ದಾರೆ. 'ಟೈಮ್ಸ್ ಆಫ್ ಇಂಡಿಯಾ' ವರದಿ ಪ್ರಕಾರ, ಪ್ರಸಿದ್ಧ್ ಕನಿಷ್ಠ ಮೂರು ವಾರಗಳ ಕಾಲ ಆಟದಿಂದ ಹೊರಗುಳಿಯಲಿದ್ದು, ನಾಲ್ಕು ವಾರಗಳ ನಂತರ ಪೂರ್ಣ ಲಯದಲ್ಲಿ ಬೌಲಿಂಗ್ ಆರಂಭಿಸುವ ನಿರೀಕ್ಷೆಯಿದೆ. ಇದರಿಂದಾಗಿ, ಭಾರತದ ಮುಂಬರುವ ನ್ಯೂಜಿಲೆಂಡ್ ಪ್ರವಾಸದಲ್ಲಿ ಅವರ ಭಾಗವಹಿಸುವಿಕೆ ಬಗ್ಗೆ ಅನುಮಾನ ವ್ಯಕ್ತವಾಗಿದೆ.



ವರದಿ ಪ್ರಕಾರ, ಗಾಯದ ಸಮಸ್ಯೆಯಿಂದಾಗಿ ಏಕದಿನ ಸರಣಿಗೆ ಪ್ರಸಿದ್ಧ್ ಅವರ ಆಯ್ಕೆಯು ಅನಿಶ್ಚಿತವಾಗಿದೆ. ನ್ಯೂಜಿಲೆಂಡ್ ವಿರುದ್ಧ ಭಾರತದ ಮೊದಲ ಏಕದಿನ ಪಂದ್ಯವು ನವೆಂಬರ್ 4 ರಂದು ನಡೆಯಲಿದ್ದು, ಇದಕ್ಕೆ ಇನ್ನು ಕೇವಲ ಒಂದು ತಿಂಗಳು ಮಾತ್ರ ಬಾಕಿಯಿದೆ. ಹೀಗಾಗಿ, ಸರಣಿಯ ಆರಂಭದ ವೇಳೆಗೆ ಪ್ರಸಿದ್ಧ್ ಸಂಪೂರ್ಣ ದೈಹಿಕ ಕ್ಷಮತೆಯನ್ನು ಮರಳಿ ಪಡೆಯುತ್ತಾರೆಯೇ ಮತ್ತು ಆಡಲು ಲಭ್ಯವಿರುತ್ತಾರೆಯೇ ಎಂಬ ಬಗ್ಗೆ ಯಾವುದೇ ಖಚಿತತೆಯಿಲ್ಲ. ಗಾಯದ ಸಮಸ್ಯೆಯ ನಂತರ ಪ್ರಸಿದ್ಧ್ ಅವರು ಬೆಂಗಳೂರಿನಲ್ಲಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ 'ಸೆಂಟರ್ ಆಫ್ ಎಕ್ಸಲೆನ್ಸ್'ಗೆ ವರದಿ ಮಾಡಿಕೊಂಡಿದ್ದರು ಎಂದು ವರದಿ ತಿಳಿಸಿದೆ. 2027ರ ವಿಶ್ವಕಪ್‌ಗಾಗಿ ಭಾರತದ ಸಿದ್ಧತೆಗಳು ನಡೆಯುತ್ತಿರುವಾಗ, ವೇಗದ ಬೌಲಿಂಗ್ ವಿಭಾಗದಲ್ಲಿನ ಆಟಗಾರರ ಗಾಯದ ಸಮಸ್ಯೆಗಳು ನಾಯಕ ಶುಭಮನ್ ಗಿಲ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರಿಗೆ ತಲೆನೋವಾಗಿ ಪರಿಣಮಿಸಿವೆ. ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಭಾರತವು ಗುರ್ನೂರ್ ಬ್ರಾರ್, ಮೊಹಮ್ಮದ್ ಸಿರಾಜ್ ಮತ್ತು ಅಂಶುಲ್ ಕಂಬೋಜ್ ಅವರಂತಹ ಆಟಗಾರರನ್ನು ಕಣಕ್ಕಿಳಿಸಿತು; ಇವರನ್ನು ಈ ಮಾದರಿಯ ಕ್ರಿಕೆಟ್‌ನಲ್ಲಿ ಸಾಮಾನ್ಯವಾಗಿ ಮೊದಲ ಆಯ್ಕೆಯ ಆಟಗಾರರೆಂದು ಪರಿಗಣಿಸಲಾಗುವುದಿಲ್ಲ. ಕಳೆದ ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ತಂಡ ಮತ್ತು ಬಿಸಿಸಿಐ ಜಸ್ಪ್ರೀತ್ ಬುಮ್ರಾ ಅವರ ದೈಹಿಕ ಕ್ಷಮತೆಯ ವಿಷಯದಲ್ಲಿ ಎಚ್ಚರಿಕೆಯ ಧೋರಣೆಯನ್ನು ತಳೆದಿದ್ದು, ಗಾಯದ ಸಮಸ್ಯೆಯಿಂದಾಗಿ ಹರ್ಷಿತ್ ರಾಣಾ ಮತ್ತು ಹಾರ್ದಿಕ್ ಪಾಂಡ್ಯ ಅವರ ಸೇವೆಯೂ ಭಾರತಕ್ಕೆ ಲಭ್ಯವಿಲ್ಲದಂತಾಗಿದೆ. ಇದೀಗ ಈ ಪಟ್ಟಿಗೆ ಪ್ರಸಿದ್ಧ್ ಕೂಡ ಸೇರ್ಪಡೆಗೊಂಡಿದ್ದಾರೆ.

# ಮಮ್ಮುಟ್ಟಿ vs ದುಲ್ಕರ್ ಸಲ್ಮಾನ್ ಚಿತ್ರಮಂದಿರಗಳಲ್ಲಿ ಮುಖಾಮುಖಿಯಾಗಲಿದ್ದಾರೆ ತಂದೆ ಮಗ

ಮಮ್ಮುಟ್ಟಿ ಮತ್ತು ದುಲ್ಕರ್ ಸಲ್ಮಾನ್ ದಕ್ಷಿಣ ಚಿತ್ರರಂಗದ ಖ್ಯಾತ ಸೆಲೆಬ್ರಿಟಿ ತಂದೆ ಮಗ ಜೋಡಿ. ಇಬ್ಬರೂ ಸೌತ್ ಸಿನಿಮಾ ಇಂಡಸ್ಟ್ರಿಯಲ್ಲಿ ತಮ್ಮದೇ ಬೇಡಿಕೆ ಹೊಂದಿದ್ದು, ಅಪಾರ ಸಂಖ್ಯೆಯ ಅಭಿಮಾನಿ ಬಳಗವನ್ನೂ ಸಂಪಾದಿಸಿದ್ದಾರೆ. ವಿಭಿನ್ನ ಚಿತ್ರಗಳ ಮೂಲಕ ಪ್ರೇಕ್ಷಕರನ್ನು ಸೆಳೆಯುವ ಈ ಇಬ್ಬರೀಗ ಬಾಕ್ಸ್ ಆಫೀಸ್‌ನಲ್ಲಿ ಮುಖಾಮುಖಿಯಾಗಲು ಸಜ್ಜಾಗಿದ್ದಾರೆ.

ಹೌದು, ಮಮ್ಮುಟ್ಟಿ ಅಭಿನಯದ 'OM - Chapter 1: Udhiram' ಮತ್ತು ದುಲ್ಕರ್ ಸಲ್ಮಾನ್ ನಟನೆಯ 'Aakasamlo Oka Tara' (AOT) ಚಿತ್ರಗಳು ನವೆಂಬರ್ 20ರಂದು ಸಿನಿಮಾ ಹಾಲ್ ಪ್ರವೇಶಿಸಲಿದೆ. ಈ ಎರಡೂ ಚಿತ್ರಗಳು ಒಂದೇ ದಿನ ಬಿಡುಗಡೆಯಾಗಲಿದ್ದು, ಅಭಿಮಾನಿಗಳಿಗೆ ತಂದೆ–ಮಗನ ನಡುವಿನ ವಿಶೇಷ ಮುಖಾಮುಖಿಯನ್ನು ವೀಕ್ಷಿಸುವ ಅವಕಾಶ ಸಿಗಲಿದೆ.

ಧನುಷ್ ಮತ್ತು ಮಮ್ಮುಟ್ಟಿ ಅಭಿನಯದ OM, ಅಕ್ಟೋಬರ್ 16ಕ್ಕೆ ಬಿಡುಗಡೆಯಾಗಬೇಕಿತ್ತು. ಆದ್ರೆ ಮುಂದೂಡಿಕೆಯಾಗಿ ಹೊಸ ಬಿಡುಗಡೆ ದಿನಾಂಕ ನವೆಂಬರ್ 20 ಎಂದು ಘೋಷಿಸಲಾಯಿತು. ಈ ಚಿತ್ರವನ್ನು ರಾಜ್‌ಕುಮಾರ್ ಪೆರಿಯಸಾಮಿ ನಿರ್ದೇಶಿಸಿದ್ದಾರೆ. ಬಿಗ್–ಬಜೆಟ್ ಆಕ್ಷನ್ ಎಂಟರ್‌ಟೈನರ್ ಆಗಿ ಪ್ರಸ್ತುತಪಡಿಸಲಾಗುತ್ತಿರುವ ಚಿತ್ರದಲ್ಲಿ ಧನುಷ್ ಮತ್ತು ಮಮ್ಮುಟ್ಟಿ ಅವರಲ್ಲದೇ, ನಾಸಿರುದ್ದೀನ್ ಶಾ, ಸಾಯಿ ಪಲ್ಲವಿ ಮತ್ತು ಶ್ರೀಲೀಲಾ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಚಿತ್ರದ ನಿರ್ಮಾಪಕರಲ್ಲಿ ಒಬ್ಬರಾದ ಧನುಷ್, ಈ ಚಿತ್ರದ ಬಿಡುಗಡೆಯನ್ನು ಮುಂದೂಡಲು ಕಾರಣವೇನೆಂದು ಈ ಹಿಂದೆಯೇ ವಿವರಿಸಿದ್ದರು. ಅಕ್ಟೋಬರ್ 15ರಂದು ರಜನಿಕಾಂತ್ ಅವರ 'ಜೈಲರ್ 2' ಚಿತ್ರ ತೆರೆಕಾಣಲಿದೆ. ಖ್ಯಾತ ನಟನ ಸಿನಿಮಾ ಬಿಡುಗಡೆಯ ಸಮಯದ ಹತ್ತಿರದಲ್ಲೇ ತಮ್ಮ ಚಿತ್ರವನ್ನು ಬಿಡುಗಡೆ ಮಾಡಲು ಚಿತ್ರತಂಡ ಬಯಸಿರಲಿಲ್ಲ. ರಜನಿಕಾಂತ್ ಮತ್ತು 'ಜೈಲರ್ 2' ಚಿತ್ರದ ಮೇಲಿನ ಗೌರವದಿಂದಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಧನುಷ್ ತಿಳಿಸಿದ್ದರು. ಹಾಗೆಯೇ, ನವೆಂಬರ್ 6ರ ದೀಪಾವಳಿ ಬಿಡುಗಡೆಯ ಅವಧಿಯಿಂದಲೂ ಈ ಸಿನಿಮಾ ದೂರ ಉಳಿದಿದೆ.

'ಆಕಾಶಂಲೋ ಒಕ ತಾರಾ' ಚಿತ್ರವು ತೆಲುಗು ಚಿತ್ರರಂಗಕ್ಕೆ ದುಲ್ಕರ್ ಸಲ್ಮಾನ್ ಅವರ ಮರಳುವಿಕೆಯನ್ನು ಸೂಚಿಸುತ್ತದೆ. ಪವನ್ ಸಾದಿನೇನಿ ನಿರ್ದೇಶನದ ಈ ರೊಮ್ಯಾಂಟಿಕ್ ಚಿತ್ರದಲ್ಲಿ, ನವನಟಿ ಸಾತ್ವಿಕ ವೀರವಳ್ಳಿ ಕೂಡಾ ನಟಿಸಿದ್ದಾರೆ. ಕಥೆ ಪ್ರೀತಿ, ಹಾರ್ಟ್ ಬ್ರೇಕ್, ಭರವಸೆ ಮತ್ತು ಚೇತರಿಕೆಯಂತಹ ಭಾವನೆಗಳ ಸುತ್ತ ಹೆಣೆಯಲ್ಪಟ್ಟಿದೆ. ಇದು ಮೂಲತಃ ತೆಲುಗು ಭಾಷೆಯ ಚಿತ್ರವಾಗಿದ್ದು, ತಮಿಳು, ಮಲಯಾಳಂ, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲೂ ಡಬ್ ಆಗಿ ಬಿಡುಗಡೆಯಾಗಲಿದೆ.

ತೆಲುಗು ರಾಜ್ಯಗಳಲ್ಲಿ ದುಲ್ಕರ್ ಸಲ್ಮಾನ್ ಈಗಾಗಲೇ ಬಲವಾದ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. 'ಸೀತಾ ರಾಮಂ', 'ಲಕ್ಕಿ ಭಾಸ್ಕರ್', 'ಕಲ್ಕಿ 2898 ಎಡಿ'



ಮತ್ತು 'ಕಾಂತಾ'ದಂತಹ ಚಿತ್ರಗಳು, ವಿಶೇಷವಾಗಿ ಪ್ರಣಯ ಮತ್ತು ಭಾವನಾತ್ಮಕ ಪಾತ್ರಗಳ ಮೂಲಕ ತೆಲುಗು ಪ್ರೇಕ್ಷಕರೊಂದಿಗೆ ಬಲವಾದ ನಂಟನ್ನು ಬೆಳೆಸಿಕೊಳ್ಳಲು ಅವರಿಗೆ ನೆರವಾಗಿವೆ. 'ಆಕಾಶಂಲೋ ಒಕ ತಾರಾ' ಚಿತ್ರದ ವಿತರಣೆಯ ಜವಾಬ್ದಾರಿಯನ್ನು ಪ್ರಮುಖ ಸಂಸ್ಥೆಗಳು ವಹಿಸಿಕೊಂಡಿದ್ದು, ಇದರ ಥಿಯೇಟರ್ ಬಿಡುಗಡೆಯ ನಂತರದ ಡಿಜಿಟಲ್ ಹಕ್ಕುಗಳನ್ನು ನೆಟ್‌ಫ್ಲಿಕ್ಸ್ ಪಡೆದುಕೊಂಡಿದೆ.

ಮಮ್ಮುಟ್ಟಿ ಮತ್ತು ದುಲ್ಕರ್ ಸಲ್ಮಾನ್ ಅವರ ನಡುವಿನ ನಂಟಿನಿಂದಾಗಿ ಈ ಮುಖಾಮುಖಿಯು ಇನ್ನಷ್ಟು ಕುತೂಹಲಕಾರಿಯಾಗಿದೆ. ಮಮ್ಮುಟ್ಟಿ ಮಲಯಾಳಂ ಚಿತ್ರರಂಗದ ದಿಗ್ಗಜ ನಟರಲ್ಲೊಬ್ಬರಾಗಿದ್ದರೆ, ದುಲ್ಕರ್ ಭಾರತದ ವಿವಿಧ ಚಿತ್ರರಂಗಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಇವರಿಬ್ಬರ ಸಿನಿಮಾಗಳು ಒಂದೇ ದಿನ ಬಿಡುಗಡೆಯಾಗುತ್ತಿರುವುದು, ಬಾಕ್ಸ್ ಆಫೀಸ್‌ನಲ್ಲಿ ತಂದೆ–ಮಗನ ನಡುವಿನ ಪೈಪೋಟಿಯನ್ನು ಕಣ್ತುಂಬಿಕೊಳ್ಳುವ ಅಪರೂಪದ ಅವಕಾಶವನ್ನು ಅಭಿಮಾನಿಗಳಿಗೆ ಒದಗಿಸಿದೆ.

ಮಾರುಕಟ್ಟೆಯ ದೃಷ್ಟಿಕೋನದಿಂದ ನೋಡಿದಾಗ, 'OM' ಚಿತ್ರವು ತಮಿಳುನಾಡು ಮತ್ತು ಕೇರಳದಲ್ಲಿ ಬಲವಾದ ಅಸ್ತಿತ್ವವನ್ನು ಹೊಂದುವ ನಿರೀಕ್ಷೆಯಿದೆ. 'ಆಕಾಶಂಲೋ ಒಕ ತಾರಾ' ಚಿತ್ರವು ತೆಲುಗು ಮಾರುಕಟ್ಟೆಯಲ್ಲಿ ಮುನ್ನಡೆಯನ್ನು ಹೊಂದಲಿದೆ. ಈ ಎರಡೂ ಚಿತ್ರಗಳು ಅನೇಕ ಭಾಷೆಗಳಲ್ಲಿ ವ್ಯಾಪಕವಾಗಿ ಬಿಡುಗಡೆಯಾಗುವ ಗುರಿಯನ್ನು ಹೊಂದಿವೆ. ಹೀಗಾಗಿ ವಿವಿಧ ಪ್ರದೇಶಗಳಲ್ಲಿನ ಚಿತ್ರಮಂದಿರಗಳಿಗಾಗಿ ಇವುಗಳ ನಡುವೆ ಪೈಪೋಟಿ ಏರ್ಪಡುವ ಸಾಧ್ಯತೆಯಿದೆ. ನವೆಂಬರ್ 20ರಂದು ನಡೆಯಲಿರುವ ಮುಖಾಮುಖಿಯು ದೀಪಾವಳಿ ಸಂದರ್ಭದಲ್ಲಿ ಬಿಡುಗಡೆಯಾದ 'ರಾಮಾಯಣ' ಮತ್ತು ಸೂರ್ಯ ಅವರ 'ಸೀನ್' ಚಿತ್ರಗಳಿಂದಲೂ ಪೈಪೋಟಿಯನ್ನು ಎದುರಿಸಬಹುದು. ಏಕೆಂದರೆ ಸಿನಿಮಾ ಹಾಲ್‌ನ ಸ್ಕ್ರೀನ್‌ಗಳು ಹಂಚಿಕೆಯಾಗಲಿವೆ.

# 2ನೇ ಮಗುವಿನ ನಿರೀಕ್ಷೆಯಲ್ಲಿ ಟಾಕ್ಸಿಕ್ ಖ್ಯಾತಿಯ ನಟಿ ಕಿಯಾರಾ ಅಡ್ವಾಣಿ, ನಟ ಸಿದ್ಧಾರ್ಥ್ ಮಲ್ಹೋತ್ರಾ

ಬಾಲಿವುಡ್ ಸೆಲೆಬ್ರಿಟಿ ಕಪಲ್ ಕಿಯಾರಾ ಅಡ್ವಾಣಿ ಮತ್ತು ಸಿದ್ಧಾರ್ಥ್ ಮಲ್ಹೋತ್ರಾ ಮತ್ತೊಮ್ಮೆ ಪೋಷಕರಾಗಲು ಸಜ್ಜಾಗಿದ್ದಾರೆ. ತಮ್ಮ ಮೊದಲ ಮಗಳು Saraayah Malhotraಳ ಆಗಮನದ ಒಂದು ವರ್ಷದ ನಂತರ, ತಾವು ಎರಡನೇ ಮಗುವಿನ ನಿರೀಕ್ಷೆಯಲ್ಲಿದ್ದೇವೆಂದು ಇಂದು ದಂಪತಿ ಘೋಷಿಸಿದ್ದಾರೆ.

ಹೌದು, ಬಹುಬೇಡಿಕೆ ನಟಿ ಕಿಯಾರಾ ಅಡ್ವಾಣಿ ತಮ್ಮ ಅಫೀಶಿಯಲ್ ಇನ್‌ಸ್ಟಾಗ್ರಾಮ್‌ನಲ್ಲಿ ಹೃದಯಸ್ಪರ್ಶಿ ಪೋಸ್ಟ್ ಮೂಲಕ ಈ ಸಂತೋಷದ ಸುದ್ದಿಯನ್ನು ಹಂಚಿಕೊಂಡಿದ್ದಾರೆ. "ಎಲ್ಲಕ್ಕಿಂತ ಶ್ರೇಷ್ಠವಾದ ಉಡುಗೊರೆಯೊಂದಿಗೆ ಮತ್ತೊಮ್ಮೆ ಆಶೀರ್ವದಿಸಲ್ಪಟ್ಟಿದ್ದೇವೆ. ನಮ್ಮ ಹೃದಯಗಳು ಪ್ರೀತಿ ಮತ್ತು ಕೃತಜ್ಞತೆಯಿಂದ ತುಂಬಿವೆ" ಎಂದು ಬರೆದುಕೊಂ ಡಿದ್ದಾರೆ. ದಂಪತಿ ಮತ್ತು ಮೊದಲ ಮಗು ಪುಟ್ಟ ಸಾಕ್ಸ್ ಹಿಡಿದಿರುವ ಫೋಟೋವನ್ನು ಈ ಪೋಸ್ಟ್‌ನೊಂದಿಗೆ ಶೇರ್ ಮಾಡಲಾಗಿದೆ. ಸಿನಿ ಸ್ನೇಹಿತ ರೂ ಸೇರಿದಂತೆ ಅಪಾರ ಸಂಖ್ಯೆಯ ಅಭಿಮಾನಿಗಳು ಅಭಿನಂದನೆಗಳ ಮಳೆ ಹರಿಸಿದ್ದಾರೆ.



ಅಭಿಮಾನಿಗಳಿಂದ ಸಿದ್ ಕಿಯಾರಾ ಎಂದೇ ಕರೆಸಿಕೊಳ್ಳುವ ಸಿದ್ಧಾರ್ಥ್ ಮತ್ತು ಕಿಯಾರಾ 2021ರ ತಮ್ಮ ಶೇರ್ಷಾ ಸಿನಿಮಾ ಸೆಟ್‌ನಲ್ಲಿ ಪರಸ್ಪರ ಪ್ರೀತಿಸತೊಡಗಿದರು. 2023ರ ಫೆಬ್ರವರಿಯಲ್ಲಿ ರಾಜಸ್ಥಾನದಲ್ಲಿ ನಡೆದ ಅದ್ಧೂರಿ ಮತ್ತು ಖಾಸಗಿ ಸಮಾರಂಭದಲ್ಲಿ ಹಸೆಮಣೆಯೇರಿದರು. 2025ರ ಜೂನ್‌ನಲ್ಲಿ ತಮ್ಮ ಮೊದಲ ಕಂದನನ್ನು ಸ್ವಾಗತಿಸಿದರು. ದಂಪತಿ 2025ರ ಆರಂಭದಲ್ಲಿ, ಮಗುವಿನ ಸಾಕ್ಸ್‌ಗಳನ್ನು ಹಿಡಿದಿರುವ ತಮ್ಮ ಕೈಗಳನ್ನು ತೋರಿಸುವ ಜಂಟಿ ಸೋಷಿಯಲ್ ಮೀಡಿಯಾ ಪೋಸ್ಟ್ ಮೂಲಕ ತಮ್ಮ ಮೊದಲ ಪ್ರೆಗ್ನೆನ್ಸಿಯನ್ನು ಅನೌನ್ಸ್ ಮಾಡಿದ್ದರು. ಪ್ರೇಮಪಕ್ಷಿಗಳು 2025ರ ನವೆಂಬರ್ 28ರಂದು ಮೊದಲ ಮಗಳ ಹೆಸರನ್ನು ಬಹಿರಂಗಪಡಿಸಿದ್ದರು. ವೈಟ್ ಸಾಕ್ಸ್ ಧರಿಸಿದ ತಮ್ಮ ಕಂದನ ಪುಟ್ಟ ಪಾದಗಳನ್ನು ಹಿಡಿದಿರುವ ಬ್ಯೂಟಿಫುಲ್ ಫೋಟೋದೊಂದಿಗೆ, "ನಮ್ಮ ಪ್ರಾರ್ಥನೆಗಳಿಂದ, ನಮ್ಮ ಬಾಹುವಿನವರೆಗೆ. ನಮ್ಮ ದೈವಿಕ ಆಶೀರ್ವಾದ, ನಮ್ಮ ರಾಜಕುಮಾರಿ, ಸರಾಯಾಹ್ ಮಲ್ಹೋತ್ರಾ" (Saraayah Malhotra) ಎಂದು ಬರೆದುಕೊಂಡಿದ್ದರು. ಈ ಹೆಸರನ್ನು ಹೇಗೆ ಆರಿಸಿಕೊಂಡರು ಎಂಬುದರ ಬಗ್ಗೆ ಹೇಳಿಕೊಳ್ಳಲಿಲ್ಲವಾದ್ರೂ ಹಲವು ಮೂಲಗಳು ಅದು ಅರೇಬಿಕ್ ಮತ್ತು ಹೀಬ್ರೂ ಮೂಲಗಳಿಂದ ಬಂದಿದೆಯೆಂದು ತಿಳಿಸಿವೆ. ಅರೇಬಿಕ್ ಭಾಷೆಯಲ್ಲಿ ಸರಾಯಾಹ್ ಎಂದರೆ ರಾಜಕುಮಾರಿ, ಉದಾತ್ತ ಮಹಿಳೆ, ಅರಮನೆ ಅಥವಾ ಉದಾತ್ತ ವಾಸಸ್ಥಾನ ಎಂದರ್ಥ. ಹೀಬ್ರೂ ಭಾಷೆಯಲ್ಲಿ, ಸಾರಾ ಎಂದರೆ ರಾಜಕುಮಾರಿ ಮತ್ತು ಯಾಹ್ ಪದದೊಂದಿಗೆ "ದೇವರ ರಾಜಕುಮಾರಿ" ಎಂದು ಅರ್ಥೈಸಬಹುದು. ಮತ್ತೊಂದು ಹೀಬ್ರೂ ಲಿಂಕ್ "ಉನ್ನತವಾಗುವುದು" ಎಂಬ ಅರ್ಥವನ್ನು ಸೂಚಿಸಿತ್ತು. ಬಹುಬೇಡಿಕೆ ಕಲಾವಿದರ ಸಿನಿಮಾ ವಿಷಯಕ್ಕೆ ಬಂದರೆ, ಕಿಯಾರಾ ಅಡ್ವಾಣಿ ಇತ್ತೀಚೆಗೆ ಕೆಜಿಎಫ್ ಸ್ಟಾರ್ ಯಶ್ ಮುಖ್ಯಭೂಮಿಕೆಯ 'ಟಾಕ್ಸಿಕ್: ಎ ಫೇರಿ ಟೇಲ್ ಫಾರ್ ಗ್ರೋನ್–ಅಪ್ಸ್' ಚಿತ್ರದಲ್ಲಿ ಕಾಣಿಸಿಕೊಂಡರು. ಈ ಗ್ಯಾಂಗ್‌ಸ್ಟರ್ ಆಕ್ಷನ್ ಡ್ರಾಮಾದಲ್ಲಿ ನಯನತಾರಾ, ಹುಮಾ ಖುರೇಷಿ, ತಾರಾ ಸುತಾರಿಯಾ ಮತ್ತು ರುಕ್ಮಿಣಿ ವಸಂತ್ ಅವರಂತಹ ಸೂಪರ್ ಸ್ಟಾರ್‌ಗಳೂ ಕಾಣಿಸಿಕೊಂಡಿದ್ದರು. ಸಿದ್ಧಾರ್ಥ್ ಮಲ್ಹೋತ್ರಾ ಇತ್ತೀಚೆಗಷ್ಟೇ ಬಹುಭಾಷಾ ನಟಿ ತಮನ್ನಾ ಭಾಟಿಯಾ ಅವರೊಂದಿಗೆ ತೆರೆಹಂಚಿಕೊಂಡಿರುವ 'ವನ್ – ಫೋರ್ಸ್ ಆಫ್ ದಿ ಫಾರೆಸ್ಟ್'ನಲ್ಲಿ ಕಾಣಿಸಿಕೊಂಡರು.

# ವಾರಾಂತ್ಯ ಮಾತ್ರವಲ್ಲ, ವಾರದ ದಿನವೂ ಭರ್ಜರಿ ಕಲೆಕ್ಷನ್: 12 ದಿನಗಳಲ್ಲಿ 25 ಕೋಟಿ ಗಳಿಸಿದ ಪ್ರೇಮದ ಊರಲಿ




ನೆಕ್ಸ್ಟ್ ಲೆವೆಲ್ ಫಿಲ್ಮ್ ಎಂಬ ಅಭಿಪ್ರಾಯ ಗಳಿಸುತ್ತಿರುವ 'ಪ್ರೇಮದ ಊರಲಿ' ಶೀರ್ಷಿಕೆಯ ಚಲನಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಭರ್ಜರಿ ಓಟ ಮುಂದುವರಿಸಿದೆ. ಸಿನಿಮಾಗೆ 'ಕಂಟೆಂಟ್' ಬಹಳ ಮುಖ್ಯ ಅನ್ನೋದನ್ನು ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮನೋಜ್ ಕುಮಾರ್ ನಿರ್ದೇಶನದ ಈ ಸುಂದರ ದೃಶ್ಯಕಾವ್ಯ ಸಾಬೀತುಪಡಿಸಿದೆ. ಮೊದಲ ದಿನ 10 ಲಕ್ಷ ರೂಪಾಯಿ ಗಳಿಸಿದ್ದ ಚಿತ್ರ ಕೇವಲ 12 ದಿನಗಳಲ್ಲಿ 25 ಕೋಟಿ ಸಮೀಪಿಸುತ್ತದೆ ಅನ್ನೋದನ್ನು ಊಹಿಸೋದು ಕಷ್ಟಸಾಧ್ಯ. ಅಂತಹದರಲ್ಲಿ ಈ ಚಿತ್ರ ಪ್ರೇಕ್ಷಕರ ಬಾಯ್ಮಾತಿನ ಪ್ರಚಾರದಿಂದಲೇ ಗಲ್ಲಾಪೆಟ್ಟಿಗೆಯಲ್ಲಿ ಉತ್ತಮ ಸಂಪಾದನೆ ಮಾಡುತ್ತಿದೆ.

**ಪ್ರೇಮದ ಊರಲಿ 12ನೇ ದಿನದ ಕಲೆಕ್ಷನ್:** ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ಶ್ರೀರಾಮ್, ರಮಿಕಾ ಶಿವು ಮತ್ತು ತಪಸ್ವಿನಿ ಪೂಣಚ್ಚ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾ ತನ್ನ 12ನೇ ದಿನ ಅಂದರೆ ಮಂಗಳವಾರ 4.25 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. 3.65 ಕೋಟಿ ರೂ. ಚಿತ್ರದ ನೆಟ್ ಕಲೆಕ್ಷನ್ ಆಗಿದೆ. ಸಾಮಾನ್ಯವಾಗಿ ವಾರಾಂತ್ಯ ಸಿನಿಮಾಗಳು ಉತ್ತಮ ಕಲೆಕ್ಷನ್ ಮಾಡುತ್ತವೆ. ಅಂತಹದರಲ್ಲಿ ಈ ಚಿತ್ರವೀಗ ವಾರದ ದಿನಗಳಲ್ಲಿಯೂ ಅತ್ಯುತ್ತಮ ವ್ಯವಹಾರ ನಡೆಸುತ್ತಿದ್ದು, ಚಂದನವನದಲ್ಲಿ ಹೊಸ ಭರವಸೆ ಮೂಡಿಸಿದೆ. ಚಿತ್ರದ ಬಜೆಟ್ 2–3 ಕೋಟಿ ರೂ. ಎಂದು ವರದಿಯಾಗಿ, ಒಟ್ಟಾರೆ ಗಳಿಕೆ ಅತ್ಯುತ್ತಮವಾಗಿದೆ.

**12 ದಿನಗಳ ಒಟ್ಟು ಕಲೆಕ್ಷನ್:** ಕನ್ನಡ ಚಿತ್ರರಂಗದ ಹಿರಿಯ ನಟ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿರುವ ಸಿನಿಮಾ ಕೇವಲ 10 ಲಕ್ಷ ರೂಪಾಯಿಯೊಂದಿಗೆ ಬಾಕ್ಸ್ ಆಫೀಸ್ ಪ್ರಯಾಣ ಪ್ರಾರಂಭಿಸಿತ್ತು. ಲಕ್ಷಗಳಲ್ಲೇ 4 ದಿನಗಳ ವ್ಯವಹಾರ ನಡೆಸಿದ ಚಿತ್ರ ಐದನೇ ದಿನದ ಹೊತ್ತಿಗೆ ಕೋಟಿಗೆ ಜಿಗಿದು ಉತ್ತಮ ವ್ಯವಹಾರ ಮುಂದುವರಿಸಿತು. ಪ್ರೇಕ್ಷಕರ ಸಕಾರಾತ್ಮಕ ಪ್ರತಿಕ್ರಿಯೆ ಚಿತ್ರಮಂದಿರಗಳಿಗೆ ಹೆಚ್ಚಿನ ಸಂಖ್ಯೆಯ ಜನರನ್ನು ಕರೆತಂದಿತು. ಫೈನಲಿ ಚಿತ್ರ ತನ್ನ 12 ದಿನಗಳಲ್ಲಿ 4,950 ಶೋಗಳಲ್ಲಿ 24.69 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಈ ಪೈಕಿ ನೆಟ್ ಕಲೆಕ್ಷನ್ 21.22 ಕೋಟಿ ರೂ. ಆಗಿದೆ. ಪ್ರೇಮದ ಊರಲಿ ಒಂದು ಸರಳ, ಸುಂದರ ಹಾಗೂ ಭಾವನಾತ್ಮಕ ಗ್ರಾಮೀಣ ಕಥೆಯಾಗಿದೆ. ಸಂಕೀರ್ಣ ಕೌಟುಂಬಿಕ ಸಂಬಂಧಗಳು, ಮನುಷ್ಯತ್ವ ಮತ್ತು ಮುಗ್ಧ ಪ್ರೀತಿಯ ಸೂಕ್ಷ್ಮ ಎಳೆಗಳನ್ನು ನಿರ್ದೇಶಕ ಮನೋಜ್ ಕುಮಾರ್ ಅದ್ಭುತವಾಗಿ ತೆರೆದಿಟ್ಟಿದ್ದಾರೆ. ಆಕ್ಷನ್ ಸಿನಿಮಾಗಳ ನಡುವೆ, ಪ್ರೇಕ್ಷಕರ ಮುಟ್ಟುವಲ್ಲಿ ಯಶಸ್ವಿಯಾಗಿದೆ. ವೆನಿಲ್ಲಾ ಎಂಟರ್‌ಟೈನ್ಮೆಂಟ್ಸ್ ಮತ್ತು ಜಾನಕಮ್ಮ ಪ್ರೊಡಕ್ಷನ್ಸ್ ಬ್ಯಾನರ್ ಅಡಿ ಸಿನಿಮಾ ನಿರ್ಮಾಣಗೊಂಡಿದೆ. ಸುನಾದ್ ಗೌತಮ್ ಸುಮಧುರ ಸಂಗೀತ ಹಾಗೂ ಹಿನ್ನೆಲೆ ಸಂಗೀತವಿದೆ. ರಾಜ್‌ಕಾಂತ್ ಅವರ ಕ್ಯಾಮರಾ ಕೈಚಳಕ ಈ ಚಿತ್ರಕ್ಕಿದೆ. ಗಳಿಕೆಯಲ್ಲಿ ಏರಿಕೆ ಕಾಣುತ್ತಲೇ ಇದ್ದು, ಈ ವಾರಾಂತ್ಯ ಮತ್ತಷ್ಟು ಉತ್ತಮ ವ್ಯವಹಾರವಾಗುವ ನಿರೀಕ್ಷೆಗಳಿವೆ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news